ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

08 ಮಾರ್ಚ್ 2017 ಪುಟ 20 ರೂ. 15/-



ಹೊಸ ಧಾರಾವಾಹಿ

ವ್ಯಾಘ್ರನ ಕರೆ



ಠುಸ್ ಆದ ಬ್ಲಾಕ್‌ಮೇಲ್ ಬೊಬ್ಬೆ..

ಅರ್ಧಪೂರ್ಣ ಅಮರಾವತಿ





ಮೋದಿ ಹಿಂದುತ್ವವನ್ನು ಧ್ವಂಸ ಮಾಡುತ್ತೇವೆ

EPW ಸಂಪಾದಕೀಯ


ಮಾಡು ಇಲ್ಲವೇ ಮಡಿ

ಉತ್ತರ ಪ್ರದೇಶದ ಚುನಾವಣಾ ಫಲಿತಾಂಶವು ಭಾರತದ ರಾಜಕೀಯದ ರೂಪುರೇಷೆಯನ್ನು ನಿರ್ಧರಿಸಲಿದೆ.

ಉತ್ತರ ಪ್ರದೇಶದ ಶಾಸನಸಭಾ ಚುನಾವಣೆಗಳ ಫಲಿತಾಂಶವು ಭಾರತದ ರಾಜಕಾರಣದ ಸದ್ಯ ಭವಿಷ್ಯದ ಮೇಲೆ ನಿರ್ಣಾಯಕ ಪ್ರಭಾವವನ್ನು ಬೀರಲಿದೆ ಎಂಬುದು ಎಲ್ಲರೂ ಬಲ್ಲ ಸಂಗತಿಯೇ ಆಗಿಬಿಟ್ಟಿದೆ. ಪ್ರತಿ ಆರು ಭಾರತೀಯರಲ್ಲಿ ಒಬ್ಬರು ಉತ್ತರ ಪ್ರದೇಶದಲ್ಲಿ ವಾಸಿಸುತ್ತಾರೆ ಎಂಬುದೂ ಮತ್ತು ಅದು ಪ್ರತ್ಯೇಕ ರಾಷ್ಟ್ರವಾಗಿದ್ದಲ್ಲಿ ಜಗತ್ತಿನಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ಐದನೇ ರಾಷ್ಟ್ರವಾಗಿರುತ್ತಿತ್ತೆಂಬುದೇ ಅದರ ಮಹತ್ವವನ್ನು ಹೇಳುತ್ತದೆ. ಆದರೆ ಇತಿಹಾಸದಲ್ಲಿ ಒಮ್ಮೊಮ್ಮೆ ಉತ್ತರ ಪ್ರದೇಶದ ಚುನಾವಣೆಗಳಿಗೆ ಅದರ ಬೃಹತ್ ಗಾತ್ರಕ್ಕೂ ಮಿಗಿಲಾದ ಮಹತ್ವವಿರುವ ಗಳಿಗೆಯು ಬರುತ್ತದೆ. ಈ ಚುನಾವಣೆಯ ನಡೆಯುತ್ತಿರುವ ಸಂದರ್ಭ ಮತ್ತು ಸಮಯದ ಕಾರಣದಿಂದ ಅಂಥಾ ಗಳಿಗೆ ಎದುರಾಗಿದೆ.

ಮೊದಲಿಗೆ, ಇವು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 2016ರ ನವೆಂಬರ್ 8ರಂದು ಅಧಿಕ ಮೌಲ್ಯದ ನೋಟುಗಳನ್ನು ರದ್ದುಗೊಳಿಸುವ ಮೂಲಕ ದೇಶದಲ್ಲಿ ಚಲಾವಣೆಯಲ್ಲಿದ್ದ ಶೇ.86ರಷ್ಟು ನಗದನ್ನು ಹಿಂಪಡೆದು ಇಡೀ ದೇಶಕ್ಕೆ ಶಾಕ್ ನೀಡಿದ ನಂತರದಲ್ಲಿ ನಡೆಯುತ್ತಿರುವ ಮೊದಲ ಶಾಸನಾಸಭಾ ಚುನಾವಣೆಗಳಾಗಿವೆ. ಚುನಾವಣೆ ನಡೆಯುತ್ತಿರುವ ಐದು ರಾಜ್ಯಗಳಲ್ಲಿ ಉತ್ತರ ಪ್ರದೇಶವು ಅತ್ಯಂತ ದೊಡ್ಡ ರಾಜ್ಯವಾಗಿರುವುದರಿಂದ ಇಲ್ಲಿನ ಫಲಿತಾಂಶವನ್ನು ಪೂರ್ಣವಾಗಿಯಲ್ಲದಿದ್ದರೂ ಪಾಕ್ಷಿಕವಾಗಿ ನೋಟು ನಿಷೇಧದ ಬಗೆಗಿನ ಜನಾಭಿಪ್ರಾಯವೆಂದು ಪರಿಗಣಿಸಲಾಗುತ್ತಿದೆ. ಒಂದು ವೇಳೆ ಭಾರತೀಯ ಜನತಾ ಪಕ್ಷವು (ಬಿಜೆಪಿ) ಈ ಚುನಾವಣೆಯಲ್ಲಿ ಗೆದ್ದರೆ ಅಥವಾ ಅತಿದೊಡ್ಡ ಪಕ್ಷವಾಗಿ ಚುನಾಯಿತವಾದರೂ ಅದನ್ನು ಮೋದಿಯ ಪರವಾದ ಜನಾಭಿಪ್ರಾಯವೆಂದೇ ನೋಡಲಾಗುತ್ತದೆ. ಹೀಗಾದಲ್ಲಿ ಅದು ನರೇಂದ್ರ ಮೋದಿಯವರು ಭಾರತೀಯ ಜನತಾ ಪಕ್ಷದಲ್ಲಿರುವ ಅತ್ಯಂತ ವರ್ಚಸ್ವೀ ರಾಜಕಾರಣಿಯೆಂದು ಮಾತ್ರವಲ್ಲದೆ ಭಾರತದ ರಾಜಕೀಯದ ನಾಡಿಮಿಡಿತವನ್ನು ಬಲ್ಲ ಅತ್ಯಂತ ಚಾಣಾಕ್ಷ ರಾಜಕಾರಣಿಯೆಂಬುದಕ್ಕೆ ಮತ್ತೊಂದು ಪುರಾವೆಯೆಂದು ಭಾವಿಸಲ್ಪಡುತ್ತದೆ. ಪಕ್ಷದ ಅಧ್ಯಕ್ಷ ಮತ್ತು ಮೋದಿಯ ಆಪ್ತ ಅಮಿತ್ ಶಾಗೆ ಕೂಡ ಇದರಿಂದ ಮೋದಿಯಷ್ಟಲ್ಲವಾದರೂ ಲಾಭವಂತೂ ಆಗಿಯೇ ಆಗುತ್ತದೆ. ಜನರಿಂದ ದಕ್ಕುವ ಅಂಥಾ ಅನುಮೋದನೆಯು ವಿರೋಧಿಗಳ ಬಗ್ಗೆ ಮೋದಿ ಮತ್ತಷ್ಟು ಕಠಿಣವಾದ ಮತ್ತು ಸಂಘರ್ಷಾತ್ಮಕ ನಿಲುವನ್ನು ತಾಳುವಂತೆ ಮಾಡಬಹುದು. ಅದು ಈಗಾಗಲೇ ಅಸಹಾಯಕರಾಗಿರುವ ವಿರೋಧ ಪಕ್ಷಗಳನ್ನು ಮತ್ತಷ್ಟು ಅಸಹಾಯಕಗೊಳಿಸಬಹುದು.

ಒಂದುವೇಳೆ ಬಿಜೆಪಿಯು ಎರಡನೇ ಅಥವಾ ಮೂರನೇ ಸ್ಥಾನಕ್ಕಿಳಿದಲ್ಲಿ ಮೋದಿ ಮತ್ತು ಶಾ ಇಬ್ಬರ ವರ್ಚಸ್ಸಿಗೂ ದೊಡ್ಡ ಪೆಟ್ಟು ಬೀಳುತ್ತದೆ. 2014ರ ಲೋಕಸಭಾ ಚುನಾವಣೆಯಲ್ಲಿ 403 ಅಸೆಂಬ್ಲಿ ಕ್ಷೇತ್ರಗಳಲ್ಲಿ 328 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತ್ತು ಹೀಗಾಗಿ ಅದಕ್ಕೆ ಹೋಲಿಸಿದಲ್ಲಿ ಎರಡನೇ ಅಥವಾ ಮೂರನೇ ಸ್ಥಾನಕ್ಕಿಳಿಯುವಂಥಾ ಫಲಿತಾಂಶವನ್ನು ಪಕ್ಷಕ್ಕಾದ ಹಿನ್ನಡೆಯೆಂದೇ ಭಾವಿಸಲಾಗುವುದು. ಪ್ರಾಯಶಃ, ಅಂಥಾ ಸಂದರ್ಭದಲ್ಲಿ ಪಕ್ಷದೊಳಗೆ ಮೂಲೆಗುಂಪಾಗಿರುವ ಮೋದಿ ವಿರೋಧಿಗಳು ತಮ್ಮ ಹತಾಶೆಯ ಸ್ಥಿತಿಯಿಂದ ಹೊರ ಬಂದು, ನೋಟು ನಿಷೇಧದಂಥ ದುಡುಕಿನ ರಾಜಕೀಯ ಜೂಜಾಟಗಳಲ್ಲಿ ತೊಡಗಿರುವ ವ್ಯಕ್ತಿಯ ಕೈಯಲ್ಲಿ ಬಿಜೆಪಿಯ ಭವಿಷ್ಯ ಎಷ್ಟರಮಟ್ಟಿಗೆ ಸುರಕ್ಷಿತವಾಗಿರುತ್ತದೆಂಬ ಪ್ರಶ್ನೆಗಳನ್ನೆತ್ತಬಹುದು. ಅಂಥದೇ ಪ್ರಶ್ನೆಗಳು ಮೋದಿಯ ಅವಳಿಯಾಗಿರುವ ಶಾ ಅವರ ಮೇಲೂ ತೂರಿಬರಬಹುದು. ಆದರೆ ಉತ್ತರಪ್ರದೇಶದಲ್ಲಿ ಬಿಜೆಪಿಯ ಚುನಾವಣಾ ಪರಾಜಯವು ಆ ಪಕ್ಷದಾಚೆಗೂ ಪರಿಣಾಮ ಬೀರುತ್ತದೆ. ಮೊದಲನೆಯದಾಗಿ, ಬಿಜೆಪಿಯ ವಿರೋಧಿ ಬಣಗಳಾದ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಕೂಟ ಅಥವಾ ಬಿಎಸ್‌ಪಿ ಇವುಗಳಲ್ಲಿ ಯಾವುದು ಉತ್ತರ ಪ್ರದೇಶದಲ್ಲಿ ಮೊದಲ ಸ್ಥಾನ ಪಡೆದುಕೊಂಡರೂ ಅವುಗಳಿಗೆ ಉತ್ತರಪ್ರದೇಶದ ರಾಜಕಾರಣದಲ್ಲಿ ಹೆಚ್ಚಿನ ಕಸುವು ದೊರೆಯುವುದು ಮಾತ್ರವಲ್ಲದೆ, ಅವುಗಳ ರಾಷ್ಟ್ರೀಯ ಆಶೋತ್ತರಗಳಿಗೂ ಈ ಫಲಿತಾಂಶವು ಚಿಮ್ಮುಹಲಗೆ ಯಾಗಲಿದೆ. 2015ರ ಅಕ್ಟೋಬರ್‌ನ ಬಿಹಾರ ಚುನಾವಣೆ ಯಲ್ಲಿ ನಿತೀಶ್ ಕುಮಾರ್ ಗೆಲುವನ್ನು ಸಾಧಿಸಿದ ನಂತರದಲ್ಲಿ, ಅವರು 2019ರಲ್ಲಿ ಮೋದಿಯನ್ನು ಸೋಲಿಸಲು ವಿರೋಧ ಪಕ್ಷಗಳ ಸರ್ವಸಮ್ಮತಿಯಾದ ಅಭ್ಯರ್ಥಿಯಾಗಬಹುದೆಂಬ ಮಾತುಗಳು ಹರಿದಾಡುತ್ತಿದ್ದವು. ಇವತ್ತಿನ ಸಂದರ್ಭದಲ್ಲಿ ಬಿಜೆಪಿಯನ್ನು ಉತ್ತರಪ್ರದೇಶದಲ್ಲಿ ಸೋಲಿಸುವುದು ಅಂಥಾ ಒಂದು ಪಾತ್ರಕ್ಕೆ ಅಖಿಲೇಶ್ ಅಥವಾ ಮಾಯಾವತಿ ಯವರನ್ನು ಹುರಿಯಾಳುಗಳನ್ನಾಗಿಸುತ್ತದೆ.




ಅಂಥಾ ಚಿತ್ರಣವು ಬಿಹಾರ ರೀತಿಯ ಮಹಾನ್ ಒಕ್ಕೂಟಗಳು ಮಾತ್ರ ಬಿಜೆಪಿಯನ್ನು ಸೋಲಿಸಬಲ್ಲ ಪರ್ಯಾಯವನ್ನು ಒದಗಿಸಬಲ್ಲದೆಂಬ ತಿಳಿವಳಿಕೆಯನ್ನೂ ಪ್ರಶ್ನಿಸುವಂತೆ ಮಾಡುತ್ತದೆ. ಒಂದುವೇಳೆ ಸಮಾಜವಾದಿ ಪಕ್ಷವು ಗೆದ್ದರೆ ಅಥವಾ ಮೊದಲನೇ ಸ್ಥಾನಕ್ಕೆ ಬಂದುನಿಂತರೂ ಅದು ಯಾವುದೇ ಮಹಾನ್ ಒಕ್ಕೂಟದ ಬೆಂಬಲವಿಲ್ಲದೆ, ಉತ್ತರಪ್ರದೇಶದಲ್ಲಿ ರಾಜಕಾರಣದ ರಂಗಮಂಚದಲ್ಲಿ ಪೋಷಕ ಪಾತ್ರವನ್ನು ಬಿಟ್ಟರೆ ಬೇರೇನನ್ನು ಮಾಡಲಾಗದ ಪರಿಸ್ಥಿತಿಯಲ್ಲಿರುವ ಕಾಂಗ್ರೆಸ್‌ನೊಂದಿಗೆ ಸೀಮಿತ ಕೂಟವನ್ನು ಮಾಡಿಕೊಂಡೇ ಆ ಗೆಲುವನ್ನು ಸಾಧಿಸಿರುತ್ತದೆ. ಹಾಗಾದಲ್ಲಿ ಅಖಿಲೇಶ್ ತಾನು ಕುಟುಂಬ ರಾಜಕಾರಣದ ಸಿಕ್ಕುಸುಳಿಗಳ ನಡುವೆಯೂ ದೊಡ್ಡ ಸಂಖ್ಯೆಯ ಮತದಾರರನ್ನು ತನ್ನೊಡನೆ ಕರೆದೊಯ್ಯಬಲ್ಲ ಸಾಮರ್ಥ್ಯವಿರುವ ರಾಜಕಾರಣಿಯೆಂದು ಸಾಬೀತುಪಡಿಸಿರುತ್ತಾರೆ. ಇನ್ನೂ ಚಿಕ್ಕ ವಯಸ್ಸಿನ ನಾಯಕನಾಗಿರುವುದರಿಂದ ದೀರ್ಘ ಕಾಲದವರೆಗೂ ಆಟದಲ್ಲಿರುವ ದೀರ್ಘ ಪಂದ್ಯದ ಕುದುರೆಯೆಂದೂ ಪರಿಗಣಿಸಲ್ಪಡುತ್ತಾರೆ. ಒಂದು ಹಂತದಲ್ಲಿ ಪಕ್ಷವನ್ನು ಅಳಿವಿನಂಚಿಗೆ ತಂದಿದ್ದ ಕ್ಷುಲ್ಲಕ ದಾಯಾದಿ ಕಲಹಗಳಿಂದ ಮೇಲೆದ್ದು ನಿಂತ ಅಖಿಲೇಶ್ ಈಗಂತೂ ನಾಯಕನಾಗಿದ್ದಾರೆ. 2
ಏಪ್ರಿಲ್-ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನ
ಗಳು ಭಾರತದ ಬಹುಪಕ್ಷೀಯ ಪ್ರಜಾತಂತ್ರದಲ್ಲಿ
ಪ್ರತಿನಿಧಿಸುವ ಪಕ್ಷಕ್ಕಿಂತ ವ್ಯಕ್ತಿಯೇ ಮುಖ್ಯ
ರಾಜಕೀಯದ "ವ್ಯಕ್ತೀಕರಣ"ದ ಹಂತವನ್ನು ಕು
ಹೇಳಬಹುದು. ಹೆಚ್ಚೂಕಡಿಮೆ ಅಮೆರಿಕದ
ಅಧ್ಯಕ್ಷೀಯ ಚುನಾವಣೆಯ ಮಾದರಿಯಲ್ಲಿ ಮೋದಿ
ರಾಹುಲ್ ಗಾಂಧಿಯ ನಡುವಿನ ಸ್ಪರ್ಧೆಯಂತೆ
ಚುನಾವಣೆಯಲ್ಲಿ ಮೋದಿ ಗೆದ್ದರು. ಆದರೆ ಕತ್ತಿಗೆ
ಅಲುಗಿರುತ್ತದೆ ಮತ್ತು ಅದು ಎರಡೂ ಕಡ
ಕತ್ತರಿಸುತ್ತದೆ. 2015ರ ಫೆಬ್ರವರಿಯಲ್ಲಿ ದೆಹ
ಅರವಿಂದ್ ಕೇಜ್ರಿವಾಲ್ ಮತ್ತು ಕಿರಣ್ ಬೇದಿ
ನಡುವೆ ಪೈಪೋಟಿ ನಡೆದಾಗ ಆಮ್ ಆದ್ಮಿ ಪಕ್ಷ ಗೆ
ಸೂರೆಮಾಡಿತು. ಹಾಗೆಯೇ 2015ರ ಅಕ್ಟೋಬ
ನಡೆದ ಬಿಹಾರ ಚುನಾವಣೆಗಳಲ್ಲಿ ನಿತೀಶ್‌ಕುಮಾರ್
ಆದರೆ ಇದೀಗ ಉತ್ತರಪ್ರದೇಶದಲ್ಲಿ ಅಖಿಲೇಶ್
ಮಾಯಾವತಿಯವರ ಎದುರು ಬಿಜೆಪಿಯಲ್ಲಿ ಮು
ಸ್ಪರ್ಧಾಳುವಿಲ್ಲವೆಂಬುದು ಗಮನಾರ್ಹ ಸಂಗತಿ
ಒಂದು ವೇಳೆ ಚುನಾವಣೆಯಲ್ಲಿ ಬಿಎಸ್‌ಪಿ ಗೌರವ
ವಾದ ಸಾಧನೆ ಮಾಡಿದರೆ ಅದು ಮಾಯಾವತಿ
ಸ್ವಂತ ಶಕ್ತಿಯಿಂದ ಮಾಡಿದ ಸಾಧನೆಯಾಗಿರುತ್ತದೆ;
ವೇಳೆ, ಐದು ವರ್ಷ ಮುಖ್ಯಮಂತ್ರಿಯಾದ ನಂ
ಆಡಳಿತ ಪಕ್ಷ ವಿರೋಧಿ ಭಾವನೆಗಳನ್ನು ಹಿ
ಚುನಾವಣೆಯನ್ನು ಗೆದ್ದಲ್ಲಿ ಅಖಿಲೇಶ್‌ಗೂ
ಅನ್ವಯಿಸುತ್ತದೆ. ಇದರ ಜೊತೆಜೊತೆಗೆ ಉತ್ತರಪ್ರ
ಚುನಾವಣಾ ಫಲಿತಾಂಶಗಳು "ವೋಟ್ ಬ್ಯಾ
ರಾಜಕಾರಣ ಮತ್ತು "ಅಸ್ಮಿತೆ"ಯಾಧರಿಸಿದ ರಾಜಕಾ
ಪ್ರಭಾವಗಳು ಹಿಂದಿನಷ್ಟೇ ಗಟ್ಟಿಯಾಗಿವೆಯೇ ಎಂಬು
ಮತ್ತು ಮುಸ್ಲಿಮರು, ದಲಿತರು ಮತ್ತು ಇತರೆ ಹಿಂ
ವರ್ಗಕ್ಕೆ ಸೇರಿದವರು ನಿರೀಕ್ಷಿತ ರೀತಿಯಲ್ಲೇ ಮ
ಮಾಡುತ್ತಾರೆಯೇ ಎಂಬುದನ್ನು ಬಯಲುಮಾಡಲಿ

2019ರ ಲೋಕಸಭಾ ಚುನಾವಣೆಗಳಿಗೆ ಇ
ವರ್ಷಗಳು ಮಾತ್ರ ಉಳಿದಿರುವಾಗ ಬಿಜೆಪಿಗೆ ಆಗ
ದಾದ ಸೋಲು ಮೋದಿ ಮತ್ತು ಶಾ ಅವರ ಕಾಯ
ಯಲ್ಲಿ ಯಾವ ಬದಲಾವಣೆಯನ್ನು ತರಬಹ
ಮೋದಿಯವರು ಈಗಾಗಲೇ ಅನಿರೀಕ್ಷಿತ ಅಚ್ಚರಿ
ನೀಡಲು ಸಮರ್ಥರೆಂಬುದನ್ನು ಸಾಬೀತುಪಡಿಸಿರುವುದ
ಅವರ ವರ್ತನೆಗಳು ನಿರ್ದಿಷ್ಟ ರೀತಿಯಲ್ಲೇ ಬದಲಾ
ದೆಂದು ಊಹಿಸುವುದು ಅಪಾಯಕಾರಿ.
ಪಕ್ಷದೊಳಗಿನ ಮತ್ತು ಹೊರಗಿನ ವಿರೋಧಿಗಳ
ಒಂದಷ್ಟು ಸಂಧಾನ ಮಾದರಿ ಶೈಲಿಯನ್ನು ಅನುಸರಿ
ಅಥವಾ ಮೊದಲಿಂದ ಇರುವ ರೀತಿಯಲ್ಲೇ ಆಕ್ರಮ
ಮನೋಧರ್ಮವನ್ನು ಮುಂದುವರೆಸುತ್ತಾ ಮ
ಧ್ರುವೀಕರಣಗೊಳಿಸುವ ರಾಜಕಾರಣವನ್ನು ಅ
ಕೊಳ್ಳುವರೇ? ಅದು ಹೇಗೇ ಆದರೂ ಈ ಮಾ
11 ಭಾರತದ ರಾಜಕಾರಣದ ಗತಿಯನ್ನು ಬದಲಿ

■ ಕನ್ನಡಕ್ಕೆ: ಶಿವಸುಂ

ಕೃಪೆ: *Economic and Political W*
(February 18, 2017. Vol. 52.

ನಾನು ಬರೆಯುತ್ತೇನೆ ಅಂದುಕೊಂಡಾಗ.



ಬರಹಗಾರನಾಗುವ ಆಸೆಯಿಂದ ನಾನು ಬರೆಯಲು ತೊಡಗಿದವನಲ್ಲ; ಇನ್ನು ನೋವನ್ನು ತಾಳಲಾರೆ, ತಾಳಿದರೆ ಸತ್ತೇ ಹೋಗುತ್ತೇನೆ ಎಂಬ ಭಯದಿಂದ ಹುಟ್ಟಿದ ಆಕ್ರಂದನ ಅದು. ಲೋಕದೆದುರು ಅದು ಪದ್ಯವೋ ಗದ್ಯವೋ ಆಯಿತು.

ಕಂಡ ಹಾಗೆಲ್ಲಾ, ಕಲಿತ ಹಾಗೆಲ್ಲಾ ನೋವು ಉಲ್ಬಣಿಸುವುದ ಕಂಡು ಭಯವಾಗಿ ಬರೆಯಲಾರದೆ ಕೊರಗಿದ್ದೇನೆ. ಅಕ್ಷರಗಳೆಲ್ಲಾ ಹೊಟ್ಟೆಯಲ್ಲಿರುವುದನ್ನೆಲ್ಲಾ ಕಾರಿಕೊಂಡಥವುಗಳಾಗಿ ನನ್ನನ್ನೇ ಕೊಲ್ಲಲು ಹವಣಿಸುವುದ ಕಂಡು ಬೆಚ್ಚಿದ್ದೇನೆ.

ಇಂಥಾ ಸಮಯದಲ್ಲೆಲ್ಲಾ ಊರ ಯಾವುದೇ ಬೀದಿಯಲ್ಲಿ ಸತ್ತುಬಿದ್ದ ನಾಯಿಯನ್ನು ಹಗ್ಗ ಕಟ್ಟಿ ಎಳೆದುಕೊಂಡು ಹೋಗಿ ಹಳ್ಳಕ್ಕೆ ಎಸೆಯುತ್ತಿದ್ದ ನನ್ನಜ್ಜಿ ಮುನಿಯಮ್ಮ ನೆನಪಾಗುತ್ತಾಳೆ. ಇವಳೊಂದಿಗೆ ಅವಳು ತೂರಮ್ಮ ಸೇರಿಕೊಳ್ಳುತ್ತಾಳೆ.

ಆ ಸತ್ತ ನಾಯಿಯ ವಾಸನೆ ನನ್ನ ಹೆಂಡತಿಯೊಡನೆ ಉಣ್ಣಲು ಕೂತಾಗ ಗಫ್ ಅಂತ ಮಿದುಳಿಗೇ ಬಡಿದಂತಾಗಿ ಉಣ್ಣಲು ಹೇಸಿದ್ದೇನೆ.. ನಾನೀಗ ಸರ್ಕಾರಿ ಸಂಬಳದಾರ ಬೇರೆ..

ನನ್ನವ್ವ ಚಟಾಕು ನೊಸ್ಟೆಟಿ ಅಕ್ಕಿಯನ್ನು ಹಸೇಕಲ್ಲಿನ ಮೇಲೆ ಅರೆದು ಅದನ್ನು ರೊಟ್ಟಿ ಮಾಡಿ ಕೊಟ್ಟಾಗ ಬಾರದ ಕಣ್ಣೀರು ಈಗ ಬಂದು ಉಸೂರಾಗುತ್ತೇನೆ..

ಈಗ ಅಕ್ಷರ.. ಅನ್ನ.. ಅರಿವು.. ಎಂದೆಲ್ಲಾ ಮಾತನಾಡುವಾಗ ಓದಲಾಗದ ನನ್ನ ಅಕ್ಕಂದಿರು, ಗಾಣದ ಎತ್ತಿನಂಗೆ ದುಡಿದು ಇಂದಿಗೂ ಕೋಳಿಬಾಡಿನ ಕನಸು ಕಾಣುವ ನನ್ನ ಊರಿನ ಹಟ್ಟಿ ಜನ ನೆನಪಾಗುತ್ತಾರೆ.

ಈ ಎಲ್ಲಾ ನೆನಪು ಬುದ್ಧಿಗೆ ಹರಿದು ಅವೆಲ್ಲಾ ಎಲ್ಲಿ ನನ್ನ ನಾಗರಿಕತನದ ಗಿಲೀಟುಗಳಾಗಿ, ಸೆಮಿನಾರಿನ ರಾತ್ರಿಗಳಲ್ಲಿ ಬಾಡು-ಬೀರಿನ ಜತೆ ನೆಂಚಿಕೆಯಾಗಿಬಿಡುತ್ತವೋ ಅಂತ ಭಯ..

ಬರೆಯಲೇಬೇಕೆಂದು ಪಟ್ಟು ಹಿಡಿದು ಕೂತಾಗ ಬರೆಯಲಾಗದೆ, ಬರೆಯುವುದ ಮರೆತು ನಿರುಮ್ಮಳವಾಗಿ ಬದುಕು ಸಾಗಿಸಹೊರಟಾಗ ಹೇಸಿಗೆ ಎನಿಸಿ ಬರೆಯತೊಡಗಿದರೆ, ಮತ್ತದೇ ವಾಂತಿಯ ಅನುಭವ.

ಅದೇನು ಬರೆಯಲು ಹೊರಟರೂ ನೆನಪಾಗುವ ನಾಗಲಾಪಲ್ಲಿ-ಖೈರ್ಲಾಂಜಿಗಳು ದುತ್ತೆಂದು ಎದುರಿಗೆ ನಿಂತು ಅಕ್ಷರಕ್ಕೆ ಸುಡುವ ಶಕ್ತಿ ಇದ್ದಿದ್ದರೆ ನಾನೇ ದೊಡ್ಡ ಕೊಲೆಗಾರನಾಗುತ್ತಿದ್ದೆನೇನೋ ಅನ್ನಿಸುತ್ತದೆ.
ಸಂದರ್ಭದಲ್ಲಿ ಬುದ್ಧ ಬಾಬಾ ಸಾಹೇಬರು, ಗಾಂಧಿ, ಅಕ್ಕ, ಮಾದೇವ ಯ
ನೆನೆದರೂ ಒಡಲು ತಣಿಯಲಾರದೆ ರೋಗಕ್ಕೆ ಒಳಗಾಗುತ್ತದೆ.

ನಿಜದ ಬರಹಗಾರ ಎಂದರೆ ಯಾರು ಅಂತ ಯೋಚಿಸಿದಾಗೆಲ್ಲಾ
ನಾಗಲಾಪಲ್ಲಿ ರಕ್ತದ ಕಲೆಗಳ ಮೇಲೆ 'ದಲೇಕ' ಏರ್ಪಡಿಸಿದ್ದ ಮೌನಾ
ದಿವಸ ಮಾತನಾಡಬೇಕಿದ್ದ ದೇವನೂರ ಮಾದೇವ ಸರ್ ಮಾತನಾಡದೆ
ಬೀಡಿಯನ್ನು ಮೇಲೆತ್ತಿ ಸಭೆಗೆ ತೋರಿಸಿದ್ದು ನೆನಪಾಗಿ ಬರಹಗಾರನ
ಸುಟ್ಟುಕೊಳ್ಳಲು ಸಿದ್ಧನಾದವನು ಎಂದುಕೊಳ್ಳುತ್ತೇನೆ.

ರಾಮಯ್ಯರ 'ಸೂರು ಸೂರಿನಾ ದೀಪಾ ಆರಿ' ಹಾಡಿನಲ್ಲಿ ಜೀತಕ್ಕೆ ಹ
ಬಾರದ ಮಗ.. ಹಿಂದಕವರೆ ಕಾಳು.. ಹಿಟ್ಟು.. ಗಂಗಾಳ ತುಂಬಿ
ತಾಯಿ.. ಆ ಜೀತಕ್ಕೆ ಹೋದ ಮಗ ತಾನೇ ಎನ್ನುವ ರಾಮಯ್ಯ
ಕೈ-ಕಾಲು ಓಡದಂತಾಗುತ್ತದೆ.

ಎಲ್ಲ ಬರಹಗಾರರಂತೆ ಕೋಮುವಾದ, ಜಾತೀಯತೆ, ಜಾಗತೀ
ಖಾಸಗೀಕರಣಗಳು ನನ್ನ ಮುಂದಿರುವ ದೊಡ್ಡ ಸವಾಲುಗಳು
ಅನ್ನಿಸುವುದಿಲ್ಲ; ಬದಲಿಗೆ ನಾನು ನನ್ನ ಸಮುದಾಯ ಉಳಿಯಬೇಕಾದ
ಅದಕ್ಕಾಗಿ ನಾವು ತೇಯಬೇಕಾದ ಜೀವದ ಚೈತನ್ಯ ನನ್ನನ್ನೇ ನಾನು
ಮಾಡಿಕೊಳ್ಳಲಾರದ ಹಪಹಪಿ ನನ್ನನ್ನು ಕಾಡುತ್ತದೆ..

ಕೊನೆಗೆ ನಾನೊಬ್ಬ ಕಸುವುದಾರನಾಗಬೇಕು ಎಂದುಕೊಂಡಾ
'ಒಡಲಾಳ'ದ ಪುಟಗೌರಿ ಬರೆಯುವ ನವುಲಿನ ಚಿತ್ರ ನೆನ
ಸೋಜಿಗವಾಗುತ್ತದೆ.. ಭಯವಾಗುತ್ತದೆ..

■ ಹುಲಿಕುಂಟೆಮೂ

'ಮಗ' ಜಿಗ್ನೇಶ್ ಮೇವಾನಿಯೊಂದಿಗೆ ಕಳೆದ ಎರಡು ದಿನಗಳು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

...ನೊಂದಿಗೆ ಎರಡು ದಿನಗಳನ್ನು "ಹಾಗೆ ಸುಮ್ಮನೆ" ...ಲು ನನ್ನ 'ಇನ್ನೊಬ್ಬ 'ಮಗ' ಜಿಗ್ನೇಶ್ ಮೇವಾನಿ ...ನೆ ಎಂದು ಎರಡು ವಾರಗಳ ಹಿಂದೆಯೇ ಹೇಳಿದ್ದೆ ...ಲು ಆತ ಗುರುವಾರ ಮತ್ತು ಶುಕ್ರವಾರ ...ಊರಿನಲ್ಲಿ ಇರುತ್ತೇನೆ ಎಂದಿದ್ದ. ಆದರೆ ಕಳೆದ ...ವಾರ ರಾತ್ರಿ ಫೋನ್ ಮಾಡಿ, ಮಂಗಳವಾರ ...ಊರಿಗೆ ಹೋಗುತ್ತೇನೆ, ಬುಧವಾರ ಮತ್ತು ಗುರುವಾರ ...ದಿಗೆ ಇರುತ್ತೇನೆ ಎಂದ. ಕೆಟ್ಟಿತು ಕೆಲಸ ಅಂದು ... ಯಾಕೆಂದರೆ ಈ ನಿಮ್ಮ ಪತ್ರಿಕೆ ಮುದ್ರಣಕ್ಕೆ ...ವುದೇ ಬುಧವಾರ. ಮಗ ಇಲ್ಲಿಗೆ ಬಂದಾಗ ...ಆಫೀಸಿನಲ್ಲಿ ಕೆಲಸ ಮಾಡುತ್ತಾ ಕೂತಿದ್ದರೆ ಹೇಗೆ. ... ನಮ್ಮ ಪತ್ರಿಕೆಯ ತಾಂತ್ರಿಕ ವಿಭಾಗದ ಮುಖ್ಯಸ್ಥ ...ನಿಗೆ ಫೋನ್ ಮಾಡಿ ಈ ವಾರ ಪತ್ರಿಕೆ ...ವಾರವೇ ಮುದ್ರಣಕ್ಕೆ ಹೋಗುತ್ತದೆಂದೂ, ಎಲ್ಲರೂ ...ಸಬೇಕೆಂದೂ ಕೋರಿದೆ.

...ದರೆ ಮಂಗಳವಾರ ರಾತ್ರಿ ಹನ್ನೊಂದುವರೆಗೆ ... ಮಾಡಿದ ಜಿಗ್ನೇಶ್ "ಒಂದು ಸಮಸ್ಯೆ ...ಗಿದೆ. ನಾನು ಮಂಗಳೂರಿನಲ್ಲಿ ಕ್ಯಾಂಪಸ್ ... ಆಫ್ ಇಂಡಿಯಾದ ಕಾರ್ಯಕ್ರಮದಲ್ಲಿ ...ಹಿಸಲು ಒಪ್ಪಿಕೊಂಡಿದ್ದೆ. ಆದರೀಗ ಕೆಲವರು ...ಘಟನೆ ಬಗ್ಗೆ ತಕರಾರು ಎತ್ತುತ್ತಿದ್ದಾರೆ. ಆದ್ದರಿಂದ ...ಊರಿಗೆ ಬರಬೇಕೋ ಬೇಡವೋ ಎಂದು ...ಚಿಸುತ್ತಿದ್ದೇನೆ. ಆ ಸಂಘಟನೆ ಬಗ್ಗೆ ನಿನ್ನ ...ಯ ಏನು?" ಎಂದ.

...ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಎಂಬುದು ...ಪುಲರ್ ಫ್ರಂಟ್ ಆಫ್ ಇಂಡಿಯಾ ಎಂಬ ...ನೆಯ ವಿದ್ಯಾರ್ಥಿ ಘಟಕ. ಈ ಹಿಂದೆ ...ಐ ಸಂಘಟನೆ ಕರ್ನಾಟಕ ಫೋರಮ್ ಫಾರ್ ...ಆಗಿದ್ದಾಗ ಅವರು ನಮ್ಮ ಕರ್ನಾಟಕ ಕೋಮು ...ರ್ಷ ವೇದಿಕೆಯ ಭಾಗವಾಗಿದ್ದರು. ಆದರೆ ...ತರ ಅವರು ಪಿಎಫ್ಐ ಆಗಿ ...ನೆಗೊಂಡಾಗ ಮತ್ತು ಅದರ ಹಲವು ಸದಸ್ಯರು ... ಜಿಲ್ಲೆಗಳಲ್ಲಿ ಅನೈತಿಕ ಪೊಲೀಸ್‌ಗಿರಿಯಲ್ಲಿ ...ಲಾರಂಭಿಸಿದಾಗ ನಮ್ಮ ವೇದಿಕೆ ಅವರನ್ನು ...ಇಟ್ಟಿತು. ಆದರೂ ಹಲವು ಪ್ರತಿಭಟನೆಗಳಲ್ಲಿ ...ಐ ನಮ್ಮ ಜೊತೆ ಸೇರಿದೆ. ಉದಾಹರಣೆಗೆ ... ಘಟನೆ ಮತ್ತು ರೋಹಿತ್ ವೇಮುಲನ ... ಕೊಲೆ ವಿರುದ್ಧದ ಪ್ರತಿಭಟನೆಗಳಿಗೆ ಸಿಪಿಐ, ...ಂ, ಬಿಎಸ್‌ಪಿ ಮತ್ತು ವೇದಿಕೆ ಮಾತ್ರವಲ್ಲ ಪಿಎಫ್ಐ ...ೂ ಬಂದಿದ್ದರು. ಇತ್ತೀಚೆಗೆ 'ಚಲೋ ಉಡುಪಿ' ...ಕ್ರಮದಲ್ಲಿ ಪಿಎಫ್ಐ ಪಾಲ್ಗೊಳ್ಳುವಿಕೆಯನ್ನು ಕೆಲವರು ...ಧಿಸಿದರು. ಆಗ ಆ ಸಂಘಟನೆಯ ಹೆಸರನ್ನು ಸಹಭಾಗಿ ...ನೆಗಳ ಪಟ್ಟಿಯಿಂದ ಕೈಬಿಡಲಾಗಿತ್ತಾದರೂ ಅದರ ...ು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅದೇ ... ಈಗ ಕೊಡಗಿನ ದಿಡ್ಡಳ್ಳಿಯಲ್ಲಿ ಆದಿವಾಸಿಗಳಿಗೆ ...ಕೊಡಿಸಬೇಕೆಂದು ನಡೆಯುತ್ತಿರುವ ಚಳವಳಿಯಲ್ಲೂ ...ಐನ ರಾಜಕೀಯ ಭಾಗವಾದ ಎಸ್‌ಡಿಪಿಐ ...ವಾಗಿದೆ" ಎಂದು ವಿವರಿಸಿದೆ.


...ದೊಳ್ಳೆ ಗೊಂದಲ ಆಯಿತು. ಏನು ಮಾಡೋದೂ ...ೇ ಗೊತ್ತಾಗುತ್ತಿಲ್ಲ, ಇರು, ಕರ್ನಾಟಕದ ನನ್ನ ಇತರ ...ಗೆ ಫೋನ್ ಮಾಡುತ್ತೇನೆ. ನೀನು ಈಗಲೇ ನಿದ್ದೆ ...ವುದಿಲ್ಲ ತಾನೆ?" ಎಂದ ಜಿಗ್ನೇಶ್.

...ನು ಮಲಗೋದು ರಾತ್ರಿ ಒಂದು ಗಂಟೆ ನಂತರವೇ. ...ನೆ ಮಾಡಬೇಡ" ಅಂದೆ.

...ಲ್ಪ ಹೊತ್ತಿನ ನಂತರ ಫೋನ್ ಮಾಡಿದ ಆತ "ಇಲ್ಲ, ಬರೋದು ಬೇಡ ಅಂತ ನಿರ್ಧರಿಸಿದ್ದೇನೆ. ನಮ್ಮ ಕುಟುಂಬದವರು ಯಾರೋ ತೀರಿಕೊಂಡಿದ್ದಾರೆ" ಎಂಬ ನೆಪ ಕೊಡುತ್ತೇನೆ ಎಂದ.

"ಹಾಗೆ ಮಾಡಿದರೆ ಚೆನ್ನಾಗಿರಲ್ಲ. ನಾಳೆ ಬರುತ್ತೇನೆ ಅಂತ ಒಪ್ಪಿಕೊಂಡಿದ್ದೀಯ. ಹೀಗೆ ಕೊನೆಕ್ಷಣ ಬರಲ್ಲ ಎಂದರೆ ಅವರೇನು ಮಾಡಬೇಕು? ಆದ್ದರಿಂದ ಬಾ. ಆದರೆ ನಿನಗೆ ಅನ್ನಿಸಿದ್ದನ್ನು ಮುಲಾಜಿಲ್ಲದೆ ಹೇಳು. ಬೇಕೆಂದರೆ ಎಲ್ಲಾ ಧಾರ್ಮಿಕ ಮೂಲಭೂತವಾದವನ್ನು ನೀನು ವಿರೋಧಿಸುತ್ತೀಯ ಎಂದು ಹೇಳು" ಅಂತ ಅವನಿಗೆ ಸಲಹೆ ಕೊಟ್ಟೆ.

ಆತ ಮಾತನಾಡಿಸಿದ ಕೆಲ ಎಡಪಂಥೀಯರು "ಬರಬೇಡ. ನಾವು ಆ ಸಂಘಟನೆಯನ್ನು ವಿರೋಧಿಸುತ್ತೇವೆ" ಎಂದಿದ್ದರು. ಇನ್ನೂ ಕೆಲವರು "ಅದೊಂದು ಮೂಲಭೂತ ಸಂಘಟನೆ ಅನ್ನುವುದಕ್ಕಿಂತ ಧಾರ್ಮಿಕ ಸಂಘಟನೆ" ಎಂದೂ ಹೇಳಿದ್ದರು. ಇದೆಲ್ಲದರಿಂದ ಜಿಗ್ನೇಶ್ ಗೊಂದಲದಲ್ಲಿದ್ದ.



ಕೊನೆಗೆ ರಾತ್ರಿ ಒಂದೂವರೆಗೆ ನನಗೆ ಫೋನ್ ಮಾಡಿ "ನಾಳೆ ಮಂಗಳೂರಿಗೆ ಬರುತ್ತೇನೆ. ನಾಡಿದ್ದು ಬೆಳಗ್ಗೆ ಎಂಟು ಗಂಟೆಗೆ ಬೆಂಗಳೂರಿಗೆ ಬರುತ್ತೇನೆ" ಎಂದ.

ನಮ್ಮ ತಂಡ ಸಹಕರಿಸಿದ್ದರಿಂದ ಕಳೆದ ಸಂಚಿಕೆಯನ್ನು ಮಂಗಳವಾರವೇ ಮುಗಿಸಿದೆ. ಜಿಗ್ನೇಶನನ್ನು ವಿಮಾನ ನಿಲ್ದಾಣದಿಂದ ನನ್ನ ಮನೆಗೆ ಹರ್ಷಕುಮಾರ್ ಕುಗ್ವೆ ಮತ್ತು ಪ್ರಗತ್ ಕೆ.ಆರ್. ಕರೆದುಕೊಂಡು ಬರಬೇಕೆಂದು ನಿರ್ಧರಿಸಲಾಗಿತ್ತು. ಆಮೇಲೆ ನನ್ನ ಮನೆಯಲ್ಲಿ ನೂರ್ ಶ್ರೀಧರ್ ಮತ್ತು ಇತರೆ ಮಿತ್ರರು ಜಿಗ್ನೇಶನೊಂದಿಗೆ ದಿಡ್ಡಳ್ಳಿ ಹೋರಾಟ ಮತ್ತು 'ತುಮಕೂರು ಚಲೋ' ಕುರಿತು ಚರ್ಚಿಸುವುದು ಎಂದು ಅಂದುಕೊಂಡಿದ್ದೆವು.

ಆದರೆ 'ತುಮಕೂರು ಚಲೋ' ಸಿದ್ಧತೆಯಲ್ಲಿ ಹರ್ಷ ಮುಳುಗಿಹೋಗಿದ್ದರಿಂದ ನಾನೇ ವಿಮಾನ ನಿಲ್ದಾಣಕ್ಕೆ ಹೋಗುವುದೆಂದು ನಿರ್ಧರಿಸಲಾಯಿತು. ಅದಕ್ಕೆ ಜಿಗ್ನೇಶ್ "ನೀನು ಯಾಕೆ ಅಷ್ಟೆಲ್ಲ ಕಷ್ಟ ತೆಗೆದುಕೊಳ್ಳುತ್ತೀಯ. ನಿಲ್ದಾಣದಿಂದ ನಿನ್ನ ಮನೆಗೆ ಯಾವ ಬಸ್ ಬರುತ್ತೆ ಹೇಳು. ಬಸ್ ಹಿಡಿದು ನಾನೇ ಬರುತ್ತೇನೆ" ಎಂದ. "ಅದೆಲ್ಲ ಬೆಂಗಳೂರಿನಲ್ಲಿ ನಡೆಯಲ್ಲ, ಸುಮ್ಮನಿರು" ಎಂದೆ.

ಬುಧವಾರ ಬೆಳಗ್ಗೆ ಪ್ರಗತ್ ನನ್ನ ಮನೆ ಮುಂದೆ ಹಾಜರ್. ಇಬ್ಬರೂ ಕಾರ್ ಏರಿ ಹೊರಟೆವು. ವಿಮಾನ ನಿಲ್ದಾಣದಿಂದ ಸುಮಾರು ನಾಲ್ಕು ಕಿಲೋಮೀಟರ್ ದೂರ ಕಾರ್ ನಿಲ್ಲಿಸಿ "ನೀನು ಲ್ಯಾಂಡ್ ಆದಾಗ ನನಗೆ ಫೋನ್ ಮಾಡು" ಎಂದು ಜಿಗ್ನೇಶನಿಗೆ ಮೆಸೇಜ್ ಮಾಡಿದೆ. ಆದರೆ ಅತ್ತ ಕಡೆಯಿಂದ "ನಾನಿನ್ನೂ ಮಂಗಳೂರಿನಲ್ಲೇ ಇದ್ದೇನೆ" ಎಂಬ ಉತ್ತರ ಬಂತು. ಏನಾಗಿತ್ತೆಂದರೆ ಬೆಂಗಳೂರಿನಲ್ಲಿ ಏರ್ ಇಂಡಿಯಾ ಶೋ ನಡೆಯುತ್ತಿದ್ದರಿಂದ ಎಲ್ಲಾ ವಿಮಾನಗಳ ಟೈಮ್ ಏರುಪೇರಾಗಿತ್ತು. ಟೀ ಕುಡಿಯುತ್ತಾ, ಹರಟೆ ಕೊಚ್ಚುತ್ತಾ ನಾನು ಮತ್ತು ಪ್ರಗತ್ ಕಾಯುತ್ತಾ ಕೂತೆವು. ಕೊನೆಗೂ ಜಿಗ್ನೇಶ್ ಹನ್ನೆರಡೂವರೆಗೆ ಆಗಮಿಸಿದ.

ವಿಮಾನ ನಿಲ್ದಾಣದಿಂದ ಸೀದಾ ಸುದ್ದಿ ಟಿವಿ ಆಫೀಸಿಗೆ ಹೊರಟೆವು. ದಾರಿ ಮಧ್ಯದಲ್ಲಿ ಜಿಗ್ನೇಶ್‌ನಿಗೆ ಗುಬ್ಬಿಯಲ್ಲಿ ದಲಿತ ಯುವಕ ಅಭಿಷೇಕ್‌ನ ಮೇಲೆ ಆದ ಹಲ್ಲೆಯ ವೀಡಿಯೋ ತೋರಿಸಿದೆ. ಅದನ್ನು ನೋಡಿ ದಂಗಾದ ಜಿಗ್ನೇಶ್ "ಇದು ಊನಾ ಪ್ರಕರಣಕ್ಕಿಂತಲೂ ಘೋರವಾದದ್ದು. ಇದು ಯಾಕೆ ರಾಷ್ಟ್ರೀಯ ಸುದ್ದಿ ಆಗಲಿಲ್ಲ" ಎಂದು ಬೇಸರಗೊಂಡ. ಸುದ್ದಿ ಟಿವಿ ಆಫೀಸಿನಲ್ಲಿ ಸಹೋದರ ಟಿ.ಕೆ.ದಯಾನಂದ ಸಿಕ್ಕ. ಜಿಗ್ನೇಶನಿಗೆ ದಯಾನಂದನ ಪರಿಚಯ ಮಾಡಿಕೊಟ್ಟು "ಈ ಹುಡುಗ ಪ್ರತಿಭಾವಂತ ಬರಹಗಾರ. ಈಗಾಗಲೇ ಈತ ಪಿ.ಸಾಯಿನಾಥ್ ಅವರು ಸ್ಥಾಪಿಸಿರುವ ಪ್ರಶಸ್ತಿ ಗೆದ್ದಿದ್ದಾನೆ. ಒಂದು ಸಿನಿಮಾ ನಿರ್ದೇಶಿಸಿದ್ದಾನೆ. ಹೋದವರ್ಷ ರಾಜ್ಯ ಸಾಹಿತ್ಯ ಅಕಾಡಮಿ ಈತನಿಗೆ ಪ್ರಶಸ್ತಿ ಘೋಷಿಸಿತು. ಆದರೆ ಕಲ್ಬುರ್ಗಿ ಅವರ ಕೊಲೆಗಡುಕರನ್ನು ಇನ್ನೂ ಹಿಡಿದಿಲ್ಲ ಎಂದು ಪ್ರತಿಭಟಿಸಿ ಅದನ್ನು ಸ್ವೀಕರಿಸಲು ನಿರಾಕರಿಸಿದ" ಎಂದೆ. ಅದನ್ನು ಕೇಳಿ ಸಂತೋಷಗೊಂಡ ಜಿಗ್ನೇಶ್ "ನೀನು ಅವಾರ್ಡ್ ವಾಪಸಿಯ ಭಾಗಿ! ನಿನ್ನ ಜೊತೆ ನಾನು ಸೆಲ್ಫಿ ತೆಗೆದುಕೊಳ್ಳಲೇ ಬೇಕು" ಎಂದು ಫೋಟೋ ತೆಗೆಸಿಕೊಂಡ.

ಎನ್.ಎಸ್.ಶಂಕರ್ ಅವರು ಜಿಗ್ನೇಶನ ಸಂದರ್ಶನವನ್ನು ರೆಕಾರ್ಡ್ ಮಾಡಿ ಮುಗಿಸುವ ಹೊತ್ತಿಗೆ ಬೆಳಗ್ಗಿನಿಂದ ನಾವ್ಯಾರೂ ಏನನ್ನೂ ತಿಂದಿರದಿದ್ದರಿಂದ ಎಲ್ಲರ ಹೊಟ್ಟೆ ತಾಳ ಹಾಕುತ್ತಿತ್ತು. ಹತ್ತಿರವೇ ಇದ್ದ ಹೋಟೆಲ್‌ಗೆ ಹೋದೆವು. "ಹೋದ ವರ್ಷ ಬೆಂಗಳೂರು ಲಿಟರೇಚರ್ ಫೆಸ್ಟಿವಲ್‌ನಲ್ಲಿ ಭಾಗವಹಿಸಲು ನಾನು, ಆರೀಫ್ ರಾಜ ಮತ್ತು ಒ.ಎಲ್.ನಾಗಭೂಷಣ್ ಒಪ್ಪಿಕೊಂಡಿದ್ದೆವು. ಆದರೆ ಆಗ ಅದರ ಮುಖ್ಯಸ್ಥನಾಗಿದ್ದ ವಿಕ್ರಂ ಸಂಪತ್ ಅವಾರ್ಡ್‌ಗಳನ್ನು ವಾಪಸ್ ಮಾಡಿದ್ದವರನ್ನು ಟೀಕಿಸಿ ಬರೆದಿದ್ದ ಲೇಖನವನ್ನು ಗೌರಕ್ಕ ನಮ್ಮೆಲ್ಲರ ಗಮನಕ್ಕೆ ತಂದರು. ಅದರ ಬಗ್ಗೆ ಅಲ್ಲಿತನಕ ನಮಗೆ ಗೊತ್ತೇ ಇರಲಿಲ್ಲ. ಆನಂತರ ನಾವೆಲ್ಲ ಅದರಲ್ಲಿ ಭಾಗವಹಿಸುವುದಿಲ್ಲ ಎಂದು ನಿರ್ಧರಿಸಿದೆವು" ಎಂದ ದಯಾನಂದ "ಮೊದಲ ಬಾರಿಗೆ ಗೌರಕ್ಕ ಊಟ ಕೊಡಿಸುತ್ತಿದ್ದಾರೆ. ಆದ್ದರಿಂದ ಸರಿಯಾಗಿಯೇ ಖರ್ಚು ಮಾಡಿಸಬೇಕು" ಎಂದು ನನ್ನ ಜೇಬಿಗೆ ಕತ್ತರಿ ಹಾಕಿದ.

ನಾನು ಮತ್ತು ಜಿಗ್ನೇಶ್ ನನ್ನ ಮನೆ ತಲುಪುವ ಹೊತ್ತಿಗೆ ಸಂಜೆ ಐದೂವರೆ ಆಗಿತ್ತು. ಅವತ್ತು ರಾತ್ರಿ ಜಿಗ್ನೇಶನನ್ನು ಭೇಟಿ ಆಗಲು ಹಲವು ಮಿತ್ರರನ್ನು ಮನೆಗೆ ಆಹ್ವಾನಿಸಿದ್ದೆ. "ನೀನು ಸ್ವಲ್ಪ ಹೊತ್ತು ರಿಲಾಕ್ಸ್ ಮಾಡು. ನಾನು ಮನೆ ಸ್ವಚ್ಛ ಮಾಡಬೇಕು" ಎಂದೆ. ಆತನೊಂದಿಗೆ ದಿಡ್ಡಳ್ಳಿ ಹೋರಾಟ ಮತ್ತು 'ತುಮಕೂರು ಚಲೋ' ಬಗ್ಗೆ ಚರ್ಚಿಸಲು ಸಿರಿಮನೆ ನಾಗರಾಜ್, ಹೇಮಕ್ಕ ಮತ್ತು ಗೌರಿ ಏಳು ಗಂಟೆಗೆ ಬಂದರು. ಜಿಗ್ನೇಶನಿಗೆ ಎಷ್ಟು ಸುಸ್ತಾಗಿತ್ತೆಂದರೆ ಆತನ ರೂಮ್ ಬಾಗಿಲನ್ನು ಎಷ್ಟೇ ತಟ್ಟಿದರೂ ಎದ್ದೇಳಲಿಲ್ಲ. ಅರ್ಧ ಗಂಟೆಯ ನಂತರ ಆತನನ್ನು ಎದ್ದೇಳಿಸಿದೆ. ನಾಗರಾಜ್, ಹೇಮಕ್ಕ ಮತ್ತು ಗೌರಿ ಆತನೊಂದಿಗೆ ಮಾತುಕತೆ ಮುಗಿಸುವ ಹೊತ್ತಿಗೆ ಅತಿಥಿಗಳು ಆಗಮಿಸಲಾರಂಭಿಸಿದರು.

ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ಚಂದನ್ ಗೌಡ ಮತ್ತು ಆತನ ಪತ್ನಿ ಮೇಘ, ಕವಯಿತ್ರಿ ಮಮತಾ ಸಾಗರ್ ಮತ್ತು ಆಕೆಯ ಪತಿ ಕಲಾವಿದ ಶ್ಯಾಮ್, ನನ್ನ ತಂಗಿ ಕವಿತಾ (ಆಕೆ ಸುಬ್ಬು ಹೊಲೆಯಾರ್ ಅವರ ಕಿರುಕತೆ ಆಧರಿಸಿ ನಿರ್ದೇಶಿಸಿರುವ 'ಕರಿಯ ಕಣ್ಬಿಟ್ಟ' ಸಿನಿಮಾದ ಸೀಡಿ ಜಿಗ್ನೇಶನಿಗೆ ಕೊಟ್ಟಳು), ಜಾಹೀರಾತು ಸಂಸ್ಥೆಯೊಂದನ್ನು ನಡೆಸುವ ಮಿತ್ರ ವಿಶ್ವಾಸ್ ಶಿವಪುರ್, ಎಕನಾಮಿಕ್ ಟೈಮ್ಸ್‌ನಲ್ಲಿ ಸಹಾಯಕ ಸಂಪಾದಕಿ ಆಗಿರುವ ಸೌಮ್ಯ ಆಜಿ, ಬಿಬಿಸಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಇಮ್ರಾನ್ ಖುರೇಶಿ ಮತ್ತು ದಿ ಹಿಂದೂ ಪತ್ರಿಕೆಯ ಬೆಂಗಳೂರು ಆವೃತ್ತಿಯ ಸಂಪಾದಕರಾಗಿರುವ ವೀರಾ ರಾಘವನ್ ತಮ್ಮೆಲ್ಲ ಕೆಲಸಗಳನ್ನು (ಅವತ್ತು ಶಶಿಕಲಾ ಬೆಂಗಳೂರಿನ ಪರಪ್ಪನ ಅಗ್ರಹಾರ ಸೇರುವುದಿತ್ತು) ಮುಗಿಸಿ ಬಂದರು.

ತಮಾಷೆ ಸ್ವಭಾವದ ಜಿಗ್ನೇಶ್ "ನಾನು 25 ವರ್ಷ ವಯಸ್ಸಿನ ಯುವಕನಾಗಿದ್ದಾಗ ಮೋದಿ ಗುಜರಾತಿನ ಮುಖ್ಯಮಂತ್ರಿ ಆದ. ಮರುವರ್ಷವೇ 2002ರ ಕೋಮು ಗಲಭೆ ನಡೆಯಿತು. ಅವತ್ತೇ ಮೋದಿ ವಿರುದ್ಧ ನನ್ನ ಹೋರಾಟ ಶುರುವಾಯಿತು. ಈಗ ನನ್ನ ವಯಸ್ಸು 37. ಆತ ಪ್ರಧಾನ ಮಂತ್ರಿಯಾಗಿ ಮೊದಲನೆ ಅವಧಿ ಮುಗಿಸುವ ಹೊತ್ತಿಗೆ ನನಗೆ 40 ತುಂಬಿರುತ್ತೆ, ಆತ ಎರಡನೆ ಅವಧಿಗೆ ಆಯ್ಕೆಯಾದರೆ ಅದು ಮುಗಿಯುವ ಹೊತ್ತಿಗೆ ನನಗೆ 45 ಆಗಿರುತ್ತೆ, ಅಂದರೆ ಮೋದಿ ವಿರುದ್ಧದ ಹೋರಾಟದಲ್ಲೇ ನನ್ನ ಯೌವ್ವನ ಕಳೆದುಹೋಗಿರುತ್ತೆ" ಎಂದ. ಕನ್ಹಯ್ಯ ಕುಮಾರನ ಬಗ್ಗೆ ಮಾತನಾಡುತ್ತಾ "ಸಮಸ್ಯೆ ಯಾವುದೆಂದರೆ ಕನ್ಹಯ್ಯ ಯಾವುದೇ ಸಂಘಟನೆಯನ್ನು ಕಟ್ಟಿದರೆ ಎಲ್ಲರೂ ಅದನ್ನು ಎಡಪಂಥೀಯ ಸಂಘಟನೆ ಎಂದೇ ಭಾವಿಸುತ್ತಾರೆ. ಆದರೆ ನಾನು ಹಾಗೆ ಮಾಡಿದರೆ ಅದನ್ನು 'ದಲಿತ ಸಂಘಟನೆ' ಎಂದು ಬ್ರಾಂಡ್ ಮಾಡುತ್ತಾರೆ. ನಾನು ಈ ಹಿಂದೆ ಬೇರೆಬೇರೆ ದಮನಿತರ ಪರವಾಗಿ ಕೆಲಸ ಮಾಡಿದ್ದರೂ ಎಲ್ಲರ ಕಣ್ಣಿಗೆ ಕಾಣಿಸುವುದು ನಾನು ದಲಿತ ಎಂಬ ಅಂಶ ಮಾತ್ರ" ಎಂದು ಬೇಸರ ತೋಡಿಕೊಂಡ.

ಅವತ್ತು ಆತನ ಹೋರಾಟ, ಗುಜರಾತಿನ ವಾಸ್ತವ ಸ್ಥಿತಿಗತಿ, ಇತ್ಯಾದಿಗಳ ಬಗ್ಗೆ ಚರ್ಚಿಸುತ್ತಾ ಎಲ್ಲರೂ ಊಟ ಮುಗಿಸಿಹೋಗುವ ಹೊತ್ತಿಗೆ ರಾತ್ರಿ ಎರಡು ಗಂಟೆ ಆಗಿತ್ತು. ಮನೆಯನ್ನು ಮತ್ತೊಮ್ಮೆ ಸ್ವಚ್ಛ ಮಾಡಿ ನಾನು ನನ್ನ ಕೊಠಡಿ ಸೇರಿದ್ದು ರಾತ್ರಿ ಮೂರು ಗಂಟೆಗೆ.


ಬೆಳಗ್ಗೆ ಮೊದಲೇ ಎದ್ದ ಜಿಗ್ನೇಶ್ ರೆಡಿಯಾಗಿ ಏಳೂವರೆಗೆ ನನ್ನನ್ನು ಎಬ್ಬಿಸಿದ. ನೋಡಿದರೆ ಹಿಂದಿನ ದಿನ ನಾನು ಅವನಿಗೆ ಕೊಟ್ಟಿದ್ದ ಹೊಸ ಬಟ್ಟೆಗಳಲ್ಲಿ ನೀಲಿ ಶರ್ಟ್ ಧರಿಸಿದ್ದ. ನಮ್ಮಿಬ್ಬರನ್ನು ಅವತ್ತು ತುಮಕೂರಿಗೆ ಕರೆದುಕೊಂಡು ಹೋಗಲು ಶಿವಮೊಗ್ಗ ಮೂಲದ ಮಣಿ ಎಂಬ ಯುವ ಡ್ರೈವರ್ ಬಂದ. ದಯಾನಂದ ಕೂಡ ನಮ್ಮ ಜೊತೆ ಸೇರಿಕೊಂಡ. ನನ್ನ ಮೂಲವೂ ಶಿವಮೊಗ್ಗ ಎಂದು ತಿಳಿದು ಮಣಿ ಹರ್ಷಿತನಾದ.

ಅಹಮದಾಬಾದಿಗೆ ಹಿಂದಿರುಗಲು ಗುರುವಾರ ಸಂಜೆ ಜಿಗ್ನೇಶ್ ಸರಿಯಾಗಿ ಐದು ಗಂಟೆಗೆ ವಿಮಾನ ನಿಲ್ದಾಣದಲ್ಲಿ ಇರಬೇಕಿತ್ತು. ಆದ್ದರಿಂದ ಹಿಂದಿನ ದಿನವೇ ಸಹೋದರ ಭಾಸ್ಕರ್ ಪ್ರಸಾದನಿಗೆ "ಜಿಗ್ನೇಶನನ್ನು ಕರೆದುಕೊಂಡು ನಾನು ಸರಿಯಾಗಿ ಎರಡು ಗಂಟೆಗೆ ಹೊರಡುತ್ತೇನೆ. ಆದ್ದರಿಂದ ಕಾರ್ಯಕ್ರಮ ತಡವಾಗುವುದು ಬೇಡ" ಎಂದಿದ್ದೆ.

ಕ್ಯಾತಸಂದ್ರದಲ್ಲಿ ತಟ್ಟೆ ಇಡ್ಲಿ ತಿಂದು ತುಮಕೂರು ತಲುಪುವ ಹೊತ್ತಿಗೆ ಹನ್ನೆರಡು ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿರುವ ಅಭಿಷೇಕನನ್ನು ಭೇಟಿ ಆದ ನಂತರ ಅಲ್ಲಿನ ವೈದ್ಯರೊಂದಿಗೆ ಆತನ ಆರೋಗ್ಯದ ಬಗ್ಗೆ ಚರ್ಚಿಸಿದೆವು. ಆಸ್ಪತ್ರೆಯ ಎದುರೆ ಇರುವ ಹೋಟೆಲ್‌ನಲ್ಲಿ ಒಂದು ರೂಮ್ ಬುಕ್ ಮಾಡಲಾಗಿತ್ತು. ಅಲ್ಲಿಗೆ ಬಂದವರನ್ನೆಲ್ಲ ಮಾತನಾಡಿಸಿದ ನಂತರ ಜಿಗ್ನೇಶ್ ಮತ್ತೆ ಎರಡು ಬಾರಿ ಅಭಿಷೇಕನ ವೀಡಿಯೋ ವೀಕ್ಷಿಸಿ ಸಾರ್ವಜನಿಕ

▶▶ 05

ಅರ್ಥಪೂರ್ಣ ಅಮರಾವತಿ



ತಾವು ಬಾಡಿಗೆಗಿದ್ದ ಮನೆಯನ್ನು ಖಾಲಿ ಮಾಡಿಕೊಂಡು ಹೋದ ಆ ಬ್ಯಾಚುಲರ್ ಬಾಡಿಗೆದಾರರು ಬಿಟ್ಟು ಹೋಗಿದ್ದು ಎರಡನ್ನೇ. ಒಂದು ಸಾಕಿಕೊಂಡಿದ್ದ ಲ್ಯಾಬ್ರೋಡಾರ್ ತಳಿಯ ಕೆನೆಬಣ್ಣದ ನಾಯಿ, ಮತ್ತೊಂದು ಗಬ್ಬು ನಾರುತ್ತಿದ್ದ ಆ ಮನೆಯ ಟಾಯ್ಲೆಟ್ಟು. ಕಟ್ಟಿಕೊಂಡಿದ್ದ ಟಾಯ್ಲೆಟ್ಟಿಗೆ ಬಿದಿರಿನ ದಬ್ಬೆ ಹೆಚ್ಚೆ ಸಿಕ್ಕಾಕಿಕೊಂಡ ನ್ಯಾಪ್‌ಕಿನ್ ಹೊರತೆಗೆಯಲು ಈತ ತನ್ನ ಹೆಣಗಾಟ ಮುಂದುವರಿಸಿದ್ದಾನೆ-


ಸಮಾಜದ ಕಣ್ಣಿಗೆ ಇವನೊಬ್ಬ ಭಂಗಿ. ಜಾಡಮಾಲಿ. ಪೌರಕಾರ್ಮಿಕ, ಕಕ್ಕಸ್ಸು ಮೋರಿ ಕ್ಲೀನರ್, ಪಾಯಿಖಾನೆಯವ, ಜಲಗಾರ- ಹೀಗೆ ಏನೆಲ್ಲಾ ಅಸಹ್ಯದ ಉಪಮೆಗಳಿವೆಯೋ ಅದರ ಪ್ರತೀಕದಂತಿರುವ ಈತನಿಗೆ ಕಟ್ಟಿಕೊಂಡಿದ್ದ ಟಾಯ್ಲೆಟ್ ತೆರವುಗೊಳಿಸಿದರೇನೇ ಆವತ್ತಿನ ಹೊಟ್ಟೆಪಾಡು. ಹಾಗಂತ ಟಾಯ್ಲೆಟ್ಟಿಗೆ ಕಟ್ಟಿಕೊಂಡಿದ್ದ ಸ್ಯಾನಿಟರಿ ನ್ಯಾಪ್‌ಕಿನ್ ಹೊರಬರಬೇಕಲ್ಲ, ಬಿದರಿನ ದಬ್ಬೆ ತುರುಕಿ ಎಷ್ಟೇ ಜಗ್ಗಾಡಿದರೂ ಸರಿಹೋಗುತ್ತಿಲ್ಲ, ಕೈಹಾಕಲೇಬೇಕು. ಆ ಗಲೀಜಿನೊಳಕ್ಕೆ ಕೈ ಹಾಕುವುದೆಂದರೆ ಸಣ್ಣ ಮಾತೆ?

ಆದಕ್ಕೆ ತನ್ನ ಜೇಬಿನಲ್ಲಿದ್ದ ಸಲ್ಯೂಷನ್ನಿನಿಂದಲೇ ಪರಿಹಾರವೆಂಬಂತೆ ಈತ ತನ್ನ ಜೇಬಿನಿಂದ ಒಂದಷ್ಟು ಕಾಟನ್ ವೇಸ್ಟ್ ತೆಗೆದು ಅದರೊಳಕ್ಕೆ ಟ್ಯೂಬಿನಲ್ಲಿದ್ದ ಫೇಸ್ಟ್ ಹಾಕಿ ಮೂಗಿಗೊತ್ತಿಗೊಳ್ಳುತ್ತಾನೆ. ಸಲ್ಯೂಷನ್ನಿನ ಘಾಟು ನೆತ್ತಿಗೇರಿದ್ದೇ ನಶೆಯೇರುತ್ತದೆ. ಹೋಗಿದ್ದೇ ಟಾಯ್ಲೆಟ್ಟಿನೊಳಕ್ಕೆ ಕೈಹಾಕಿ ಬಟ್ಟೆಯ ಗಂಟಿನಂತಿದ್ದ ಸ್ಯಾನಿಟರಿ ನ್ಯಾಪ್‌ಕಿನ್ ಹೊರತೆಗೆಯುತ್ತಾನೆ. ಟಾಯ್ಲೆಟ್ಟೂ ಕ್ಲೀನು ಬಾಡಿಗೆಗೆ ಬಿಟ್ಟದ್ದ ಮನೆ ಮಾಲೀಕರ ಮುಖವೂ ನಿರಾಳ. ಇಷ್ಟೆಲ್ಲಾ ಅಸಹ್ಯಕ್ಕೆ ಕಾರಣವಾಗಿದ್ದ ಪಾಯಿಖಾನೆಯನ್ನು ಸುಗಮಗೊಳಿಸಿದ ಈತನಿಗೆ ಆತನ ಕೂಲಿ ಕೊಡುವುದಕ್ಕೂ ಚೌಕಾಸಿ ಮಾಡುವ ಮಾಲೀಕನಿಗೆ ಬಾಡಿಗೆದಾರರು ಬಿಟ್ಟು ಹೋಗಿದ್ದ ನಾಯಿಯನ್ನೇನು ಮಾಡುವುದೆಂಬ ತಲೆಬಿಸಿ ಬೇರೆ.

ಆದರೆ ಟಾಯ್ಲೆಟ್ ಸರಾಗವಾಗಿಸಲು ಬಂದಿದ್ದ ಈತನಿಗೆ ಆ ನಾಯಿಯನ್ನು ಮುಟ್ಟಬೇಕೆಂಬ ಚಪಲ. ಏಕೆಂದರೆ ಅದು ಜಾತಿನಾಯಿ!

ಮುಟ್ಟುತ್ತಾನೆ. ಅದೂ ಮುಟ್ಟಿಸಿಕೊಳ್ಳುತ್ತದೆ ಈತನ ಕೈ ನೆಕುತ್ತದೆ. ಇದನ್ನು ಕಂಡ ಆ ಜುಗ್ಗಾ ಮನೆ ಮಾಲೀಕ 'ನೋಡಪ್ಪಾ ಈ ನಾಯೀನ್ ಎಲ್ಲಾದ್ರು ಕರಕೊಂಡು ಹೋಗಿ ಬಿಟ್ಟು ಬಿಡಪ್ಪಾ, ಹಾಳಾದ ಬಾಡಿಗೆಯವರು ಟಾಯ್ಲೆಟ್ಟನ್ನೂ ಗಬ್ಬೆಬ್ಬಿಸಿದ್ದಾರೆ. ಸಾಲದು ಅಂತ ಈ ನಾಯೀನೂ ಬಿಟ್ಟು ಹೋಗಿದ್ದಾರೆ' ಎಂದು ಶಾಪ ಹಾಕುತ್ತಿದ್ದಾನೆ. 'ಹಾಗಾದ್ರೆ ನಿಮಗೆ ನಾಯಿ ಬೇಡವಾ?' ಎಂದು ಈತ ಪ್ರಶ್ನಿಸುತ್ತಾನೆ. 'ಹಾಳಾದ ನಾಯಿ ಕಟ್ಟಿಕೊಂಡು ನಾನೇನಪ್ಪಾ ಮಾಡ್ಲೀ....? ಎಲ್ಲಾದ್ರೂ ಕರಕೊಂಡು ಹೋಗಿ ಬಿಟ್ಟುಬಿಡಪ್ಪಾ' ಎನ್ನುತ್ತಾನೆ ಮನೆ ಮಾಲೀಕ. ಜಾಡ ಮಾಲಿಗೂ ಇಷ್ಟೇ ಸಾಕಿತ್ತು, ಅವನ ಆತ್ಮಸಂಗಾತಕ್ಕೊಂದು ನಾಯಿ ಬೇಕಿತ್ತು, ಕಟ್ಟಿ ಹಾಕಿದ್ದ ಬೆಲ್ಟನ್ನು ಬಿಚ್ಚಿದ್ದೇ ನಾಯಿಯನ್ನು ಜೊತೆಗೊಯ್ಯಲು ಅಣಿಯಾಗಿ ನಿಲ್ಲುತ್ತಾನೆ. ಮತ್ತು ಆ ನಾಯಿಯ ತಲೆ ನೇವರಿಸಿ ಹೇಳುತ್ತಾನೆ-ನೀನು ಜಾತಿ ನಾಯಿ. ನಾನು ನಾಯಿ ಜಾತಿ.....!

ಇದು ಬಿ.ಎಂ. ಗಿರಿರಾಜ್ ನಿರ್ದೇಶನದ 'ಅಮರಾವತಿ' ಚಿತ್ರದ ಉಪಶೀರ್ಷಿಕೆ ಕೂಡ. ಅಮರಾವತಿ ಬಿಡುಗಡೆಯಾಗಿ ಇನ್ನೇನು ಎರಡು ವಾರ ತುಂಬುತ್ತಿದೆ. ದೊಡ್ಡ ಹೀರೋಗಳಿಲ್ಲ, ಸೆಕ್ಸಿ ಹೀರೋಯಿನ್ನು, ದೊಡ್ಡ ಬ್ಯಾನರ್, ದೊಡ್ಡ ಬಜೆಟ್ಟು ಯಾವುದೂ ಇಲ್ಲದೆಹೋದರೂ 'ಅಮರಾವತಿ' ತನ್ನದೇ ಆದ 'ವೈಶಿಷ್ಟ್ಯದ ಕಾರಣಕ್ಕೆ ನಾಡಿನ ಪ್ರಜ್ಞಾವಂತರ ಮನ ಕಲಕುತ್ತಿದೆ. ಅದು ಪೌರಕಾರ್ಮಿಕರ ದುರಂತ ಕತೆಯೂ ಹೌದೂ ಭಾಗ್ಯವಂತರ ನಗರಿ ಬೆಂಗಳೂರೆಂಬುದು ಗಾರ್ಬೇಜ್ ಸಿಟಿಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ



ಅಪಖ್ಯಾತಿಗೀಡಾಗಿದ್ದರ ಧುರಿತವೂ ಕೂಡ.

ಅಮರಾವತಿಯೆಂದರೆ ಅದು ದೇವಾನುದೇವತೆಗಳ ರಾಜ ಇಂದ್ರನ ರಾಜಧಾನಿ. ಅಲ್ಲಿರುವವರೆಲ್ಲರೂ ದೇವತೆಗಳಂತೆ. ರಂಭೆ ಮೇನಕ ಊರ್ವಶಿ ತಿಲೋತ್ತಮೆಯಂಥ ಅಪ್ಸರೆಯರು ಅಲ್ಲಿ ನರ್ತಿಸುತ್ತಿರುತ್ತಾರೆ. ತಬಲದವರು ಸಂಗೀತ ನುಡಿಸುತ್ತಿರುತ್ತಾರೆ. ಅಲ್ಲಿ ಮದಿರೆಯಿದೆ. ಸುಖವಿದೆ. ವೈಭವವಿದೆ ನಿಜ. ಆದರೆ ದೇವತೆಗಳ ರಾಜಧಾನಿ ಅಮರಾವತಿಯಲ್ಲೂ ಟಾಯ್ಲೆಟ್ಟುಗಳಿರಲೇಬೇಕಲ್ಲವೆ? ಅದರ ಕೊಚ್ಚೆ ಹರಿಯಲು ಮೋರಿಯಿರಲೇಬೇಕಲ್ಲವೆ?

ಹಾಗಾದರೆ ಅಮರಾವತಿಯ ಟಾಯ್ಲೆಟ್ಟುಗಳನ್ನು ತೊಳೆಯುವವರ್‍ಯಾರು? ಅಲ್ಲಿನ ಮೋರಿಯ ಕೊಚ್ಚೆಯನ್ನು ಶುಚಿಗೊಳಿಸುವವರ್‍ಯಾರು? ಏಕೆ ಪುರಾಣಗಳಲ್ಲಿ ಈ ಶೌಚ ಶುದ್ಧಕರೂ, ದೇವಲೋಕದ ಜಲಗಾರರು, ಇಂದ್ರನ ಆಸ್ಥಾನದ ಕಸ ಗುಡಿಸುವವರು, ಬಚ್ಚಲು ತೊಳೆಯುವವರ ಕುರಿತು ಯಾವುದೇ ಪ್ರಸ್ತಾಪವಿಲ್ಲ?

ಅಮರಾವತಿಗೆ ಅದರ ಕೊಳಕಿನ ಕತೆ ಬೇಕಿಲ್ಲ, ಕೊಳೆಯನ್ನು ತೊಳೆಯುವವರ ಕಣ್ಣೀರೂ ಕಾಣಿಸುವುದಿಲ್ಲ, ಕನ್ನಡದ ಮಟ್ಟಿಗೆ ಅಂತಃಕರಣದ ನಿರ್ದೇಶಕರೆಂದೇ ಚಾಲ್ತಿಯಲ್ಲಿರುವ ಬಿ.ಎಂ. ಗಿರಿರಾಜ್ ಹೇಳಲು ಹೊರಟಿರುವುದು ಭಾಗ್ಯವಂತರ ನಗರಿ ಬೆಂಗಳೂರೆಂಬ ಅಮರಾವತಿಯ ಮತ್ತೊಂದು ಮುಖವನ್ನು, ಅದು ನಾಯಿ ಜಾತಿಯವರು ಅಂದರೆ ನಾಯಿಪಾಡಾದ ಹತಭಾಗ್ಯ ಜಲಗಾರರ ಕಣ್ಣೀರ ಕತೆ. ಟಾಯ್ಲೆಟ್ಟಿಗೆ ಕೈಹಾಕಿ ಗಬ್ಬುನಾರುತ್ತಿದ್ದ ಸ್ಯಾನಿಟರಿ ನ್ಯಾಪ್‌ಕಿನ್ ಹೊರತೆಗೆದಷ್ಟೇ ದುರ್ಗತಿಯಿಂದ ಲೋಲುಪರು ತೊರೆದುಹೋಗಿದ್ದ ನಾಯಿಯನ್ನಪ್ಪಿ ಹೇಳುತ್ತಾನೆ-ನೀನು ಜಾತಿ ನಾಯಿ ನಾನು ನಾಯಿ ಜಾತಿ!

ಇಲ್ಲಿ ನಾಯಿ ದುರ್ಗತಿಯ ಸಂಕೇತ. ದಲಿತರ ಸಂಕೇತ. ಜಾತಿಹೀನತೆಯ ರೂಪಕ. ತನ್ನನ್ನು ತಾನೇ 'ನಾಯಿ ಜಾತಿ' ಎಂದು ವಿಷಾದದಿಂದ ಹೇಳಿಕೊಂಡ, ಹೇಳಿಕೊಳ್ಳುವ ಶಿವಪ್ಪ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗಿಂತಲೂ ಅಸಹ್ಯದ ಮ್ಯಾನುವಲ್ ಸ್ಕ್ಯಾವೆಂಜರ್. ಅಂದರೆ ಜಲಗಾರ. ಯಾವುದೇ ಮೋರಿ ಕಟ್ಟಿಕೊಂಡರೂ ಗಬ್ಬು ನಾರುವ ಮಲರಾಶಿಯನ್ನೂ ಲೆಕ್ಕಿಸದೇ ಅದರೊಳಕ್ಕಿಳಿದು ಕೊಚ್ಚೆಗೆ ಕೈಹಾಕುವಂತಹ ಕಸುಬ... ಯಾವುದೇ ಐಷಾರಾಮಿ ನಗರದ ಮುನ್ಸಿ... ಸೂಟುಬೂಟು ತೊಟ್ಟ ಐಎಎಸ್‌ಗಳು, ಕೆಎ... ಗುಮಾಸ್ತರು, ಮ್ಯಾನೇಜರ್‌ಗಳು, ಅಧಿಕಾರಿಗಳು ಬಿ... ಸಿಗಬಹುದು. ಆದರೆ ಕಟ್ಟಿಕೊಂಡ ಮೋರಿಯ ರಾಶಿಯೊಳಕ್ಕಿಳಿದು ಕೊಚ್ಚೆಗೆ ಕೈಹಾಕಿ ಎಳೆಯುವ... ಸಿಗಬೇಕಲ್ಲ-

ಆದಕ್ಕೆ ನಾಯಿ ಪಾಡಾದವರೇ ಬೇಕು. ... ದುರ್ಗತಿಯೇ ಅವರನ್ನು ಕೊಚ್ಚೆಗೂ ಇಳಿಸುತ್ತದೆ ... ಕೈಹಾಕಿಸುತ್ತದೆ. ನಗರವಾಸಿಗಳಿಗೆ ಸೋಕಾಲ್ಡ್ ... ಜನಸಮೂಹಕ್ಕಿದು ಅಸಹ್ಯದ ಕೆಲಸವೆ. ತಮ್ಮ ದೇ... ತೀರಿದರಷ್ಟೇ ಅವರ ಸಮಸ್ಯೆ ಮುಗಿದಂತೆಯೇ. ... ತಮ್ಮ ಹೊಲಸಿನ ತಮ್ಮ ಕೊಳೆಯ ಗೊಡವೆ ... ಆದರೆ ಕೊಳೆಯಲ್ಲೇ ಅರಳಿದ ಬದುಕುಗಳಿ... ಅವರನ್ನು ನಾಗರಿಕ ಸಮಾಜ ತಮ್ಮಂತೆ ಮನು... ಬಗೆಯದೇ ಹೋದರೂ ಅವರಿಗೂ ಹೊಟ್ಟೆಯಿದ... ಹಾಗೆಯೇ ಭಾಗ್ಯವಂತರ ನಗರಿ ಬೆಂಗಳೂರಿನ ಕೊ... ಜಲಗಾರ ಶಿವಪ್ಪನ ಬದುಕೂ ಅರಳಿ ನಿಂತಿದೆ. ಬೆಂ... ಪರಮ ಕೊಳಕಾದ ಕೊಳಗೇರಿಯೊಂದರಲ್ಲಿ.

ಅದು ಶುರುವಾಗುವುದು ಫೋಟೋ ಸ್ಟುಡಿಯ... ಬಸವಳಿದ ತಾಯೊಬ್ಬಳು ಫೋಟೋ ಸ್ಟುಡಿಯೋ ... ಬಂದು ಮಗುವಿನ ಸಮೇತ ತನ್ನ ಫೋಟೋ ತೆಗೆ... ದುಡ್ಡು ಎಷ್ಟಾಗುತ್ತದೆ ಎಂದು ಕೇಳುತ್ತಾಳೆ. ಸ್ಟುಡಿಯ... ನೂರು ರೂಪಾಯಿಗೆ ಕಮ್ಮಿ ಇಲ್ಲ ಅನ್ನುತ್ತಾನೆ. ... ಬಳಿಯಿರುವುದು ಮೂವತ್ತೇ ರೂಪಾಯಿ. ಫೋಟೋ ಬರಲ್ಲ ಎನ್ನುತ್ತಾನೆ ಸ್ಟುಡಿಯೋದವ. ... ತಾಯಿ ಕಣ್ಣೀರಿಡುವುದನ್ನು ಬಿಟ್ಟಿಲ್ಲ, ತಾನು ಹೆಚ... ಬದುಕುಳಿಯುವುದಿಲ್ಲ, ಮಾರಕ ಕಾಯಿಲೆ... ಬದುಕುಳಿಯುವುದು ಸಾಧ್ಯವೂ ಇಲ್ಲ, ಡಾಕ್ಟರ್ ಈ... ಸಾವಿನ ಖಾತರಿ ಮಾಡಿದ್ದಾಗಿದೆ. ನನ್ನನ್ನು ನಿನ್ನ... ಎಂದು ತಿಳಿದುಕೊಂಡಾದರೂ ಈ ಮೂ... ರೂಪಾಯಿಗೊಂದು ಫೋಟೋ ತೆಗೆದುಕೊಡು. ... ನಾಳೆ ದಿನ ಬೆಳೆದು ದೊಡ್ಡವನಾದ ನನ್ನ ಮಗನಿ... ತಾಯಿ ಹೇಗಿದ್ದಳೆಂದಾದರೂ ಗೊತ್ತಾಗಲಿ... ... ಕಣ್ಣೀರಿಡುವ ಆ ತಾಯಿಯ ದುರ್ಗತಿಗೆ ಸ್ಟುಡಿಯೋ... ಮನ ಕಲಕುತ್ತದೆ....

ಹಾಗೇ ಫೋಟೋ ತೆಗೆಸಿಟ್ಟು ಕಣ್ಣು ಮುಚ್ಚ... ನತದೃಷ್ಟ ತಾಯಿಯ ಅನಾಥಮಗುವೇ ಚನ್ನಬಸ... ಕಾಲೇಜು ವಿದ್ಯಾರ್ಥಿ. ಈತ ಜಲಗಾರ ಶಿವಪ್ಪನ ... ಅಂದರೆ ಮೊದಲ ಪತ್ನಿ ಕಾಯಿಲೆಗೆ ಬಿದ್ದು ... ಗತಿಯಿಲ್ಲದೆ ಸತ್ತ ನಂತರ ಶಿವಪ್ಪ ಮತ್ತೊಂದು ಹೆ... ತಂದು ಮನೆಯಲ್ಲಿಟ್ಟುಕೊಂಡಿದ್ದಾನೆ. ಆಕೆಗೆ ಶಿವ... ಇಬ್ಬರು ಮಕ್ಕಳು. ಮೊದಲ ಪತ್ನಿ ಮಗ ... ತಂದಿಟ್ಟುಕೊಂಡವಳ ಮಕ್ಕಳೂ ಸೇರಿದಂತೆ ತನ್ನ ... ಮಕ್ಕಳ ಸಮೇತ ಸ್ಲಮ್ಮೊಂದರಲ್ಲಿ ಬದುಕು ಸಾ... ಶಿವಪ್ಪನ ಬದುಕಲ್ಲಿ ನಾಯಿಯ ಪ್ರವೇಶವಾಗಿದ್ದೇ ಚಿತ್ರ... ಬದಲಾವಣೆಗಳಾಗುತ್ತವೆ. ಅವರ ಪ್ರೀತಿಯೆಂಬುದು ... ಪಾಲಿಕೆಯ ಆರೋಗ್ಯ ವಿಭಾಗದ ಮುಖ್ಯಾಧಿಕಾ... ಕೆಂಗಣ್ಣಿಗೆ ಬಲಿಯಾಗುವಂತೆ ಮಾಡುತ್ತದೆ. ಅಧಿಕಾ... ಮಕ್ಕಳು ಶಿವಪ್ಪನ ನಾಯಿಯನ್ನು ತಮಗೆ ಬೇಕೆಂದು ... ಬಿದ್ದಾಗ ಶಿವಪ್ಪ 'ಪ್ರಾಣ ಬೇಕಾದರೂ ಕೊಟ್ಟೇನು... ನಾಯಿಯನ್ನು ದೂರ ಮಾಡಬ್ಯಾಡ್ರೀ.....' ಎಂದು ... ನಿಲ್ಲುತ್ತಾನೆ.

ಆ ಅಧಿಕಾರಿ ನಾಗರಿಕ ಸಮಾಜದ ಬಹು... ಭಾಗ್ಯವಂತರಂತೆಯೇ ತಣ್ಣನೆಯ ಕ್ರೂರಿ. ... ಮಾತಾಡುವುದೇ ಅಸಹ್ಯ, ಭ್ರಷ್ಟಾಚಾರ ಆತನ ರಕ್ತ... ಸರ್ಕಾರದ ಮೇಲಧಿಕಾರಿಗಳು, ಪಾಲಿಕೆಯ ಆಡಳಿತ ... ಗಾರ್ಬೇಜ್ ಕಂಟ್ರಾಕ್ಟರುಗಳು, ಅವರಿಗೆ ಪೌರಕಾರ್ಮಿಕ... ಸರಬರಾಜು ಮಾಡುವ ಲೇಬರ್ ಕಂಟ್ರಾಕ್ಟರ್...



ಪಾಳು ಬಂಗಲೆಯ ಚಪ್ರಾಸಿಯಲ್ಲಿ 'ದೇವರು' ಮೂಡಿದ ರೀತಿ

ಅವನ ಹೆಸರು ದೇವರು. ಕೊಳಗೇರಿಯಂಚಿನ ಪಾಳು ಕಟ್ಟಡವೊಂದರಲ್ಲಿ ಬಚ್ಚಿಟ್ಟುಕೊಂಡಿದ್ದಾನೆ. ಆಡಲು ಬರುವ ಮಕ್ಕಳನ್ನು ಹೆದರಿಸುತ್ತಾನೆ. ಅವರ ಕೈಯಲ್ಲೇ ಸಾರಾಯಿ ಮತ್ತು ಚಾಕಣಾ ತರಿಸಿಕೊಂಡು ತಿನ್ನುತ್ತಾನೆ. ನೀನು ಯಾರೆಂದು ಕೇಳಿದ ಮಗುವಿಗೆ ನನ್ನ ಹೆಸರು 'ದೇವರು' ಎನ್ನುತ್ತಾನೆ!


ದೇವರೆಂದ ಮೇಲೆ ಬೇಡಿದ ವರವನ್ನು ನೀಡಲೇಬೇಕಲ್ಲ, 'ನಮ್ಮಪ್ಪನ ಕುಡಿತ ಬಿಡಿಸು ಮತ್ತ...?' ಎನ್ನುತ್ತದೆ ಸಾರಾಯಿ ತಂದುಕೊಟ್ಟ ಮಗು. ಕಾಕತಾಳೀಯವೋ ಎಂಬಂತೆ 'ಭಂಗಿ' ಶಿವಪ್ಪನ ಬದುಕಲ್ಲಿ ನಾಯಿಯ ಎಂಟ್ರಿಯಾಗಿ ಆತ ಕುಡಿತ ಬಿಡುತ್ತಾನೆ. ಮಗುವಿಗೆ ದೇವರು ಅಪ್ಪನ ಕುಡಿತ ಬಿಡಿಸಿದನೆಂಬ ನಂಬಿಕೆ. ಮತ್ತೊಮ್ಮೆ ಜಲಗಾರನನ್ನು ಪೊಲೀಸರು ಎಳೆದೊಯ್ದಾಗ ಹೊಟ್ಟೆಗಿಲ್ಲದೆ ಹಸಿದು ಕೂತಿದ್ದ ಮಕ್ಕಳಿಗೆ ಅದೇ ದೇವರು ಊಟದ ಪಾರ್ಸಲ್ ಕಟ್ಟಿಸಿಕೊಂಡು ತಂದುಕೊಡುತ್ತಾನೆ. 'ಊಟ ತಂದುಕೊಟ್ಟಿದ್ದು ಯಾರು' ಎಂದು ಕೇಳಿದ ತಾಯಿಗೆ ಮಕ್ಕಳು 'ದೇವರು' ಎನ್ನುತ್ತಾರೆ. ಮಕ್ಕಳಿಗೆಲ್ಲೋ ತಲೆ ಕೆಟ್ಟಿರಬೇಕೆಂದು




ತಾಯಿ ಭಾವಿಸುತ್ತಾಳೆ.

ಆದರೆ ಅದೇ ದೇವರು ಬಂದು ಜಲಗಾರ ಶಿವಪ್ಪನ ಸಹ... ಆತನ ಮಡದಿ ಮಕ್ಕಳ ಪ್ರಾಣ ಉಳಿಸುತ್ತಾನೆ. ಡಾನ್ ... ಪ್ರತೀಕಾರಕ್ಕಾಗಿ ಇನ್ನೇನು ಇಡೀ ಕುಟುಂಬವನ್ನೇ ಜೀವಂತ ಗು... ಹಾಕಿ ಹೂತುಹಾಕಬೇಕೆನ್ನುವಷ್ಟರಲ್ಲಿ ಅದೇ ದೇವರು ಬ... ರೌಡಿಗಳ ವಿರುದ್ಧ ಸೆಣಸಾಡುತ್ತಾನೆ ಮತ್ತು ಅಂತಿಮವಾಗಿ ಪೊಲಿ... ಗುಂಡಿಗೆ ಬಲಿಯಾಗುತ್ತಾನೆ. ತಾನು ಪ್ರಾಣತೆತ್ತಾದರೂ ನಂಬಿದ... ಪ್ರಾಣ ಉಳಿಸುವ ಈ ದೇವರಿಲ್ಲಿ ಒಳಿತಿನ ಸಂಕೇತ. ದೇವ... ಕೆ.ಎಸ್. ಪರಮೇಶ್ವರ ಮನೋಜ್ಞ ಅಭಿನಯ ನೀಡಿದ್ದಾರೆ. ದೇ... ಕುಡಿಯುತ್ತಾನೆ. ಚಾಕಣಾ ತಿನ್ನುತ್ತಾನೆ. ಪಾಳು ಬಂಗಲೆ... ದೆವ್ವದಂತೆ ಅಡಗಿ ಕೂತಿದ್ದಾನೆ. ಆದರೆ ಮಕ್ಕಳ ಮುಗ್ಧತೆಗೆ ... ಚಪ್ರಾಸಿ ಕೂಡ ದೇವರಾಗಿಬಿಡುತ್ತಾನೆ.

ನಿರ್ದೇಶಕ ಗಿರಿರಾಜ್ ಸೃಷ್ಟಿಸಿದ ಈ ದೇವರ... ನೋಡಲಿಕ್ಕಾದರೂ 'ಅಮರಾವತಿ'ಯನ್ನೊಮ್ಮೆ ನೋಡಲೇಬೇ...







ಪೌರ ಕಾರ್ಮಿಕರ ಕಣ್ಣೀರು

...ಂಡು ಸೃಷ್ಟಿಯಾದ ಮಾಫಿಯಾ ಸಭ್ಯತೆಯ ...ವಾಡ ಧರಿಸಿದೆ. ಗಾರ್ಬೇಜ್ ಗುತ್ತಿಗೆದಾರರ ನಾಯಕನೇ ... ಈತನ ಬಲಗೈ ಬಂಟನೇ ಡಾನ್. ಈತನ ರೌಡಿ ...ಅಸಹಾಯಕ ಯುವತಿ ಬಲಿಯಾಗಿದ್ದಾಳೆ. ಆಕೆಯ ... ನಿಂತವನು ಜಲಗಾರ ಶಿವಪ್ಪನ ಮಗ ಚೆನ್ನ. ...ಜಿನಲ್ಲಿ ಕೊಳಗೇರಿಯ ಬದುಕನ್ನು ಕುರಿತ ...ಮೆಂಟರಿ ಮಾಡುವಂತೆ ವಹಿಸಿದ ಜವಾಬ್ದಾರಿಯೇ ...ನ್ನ ಇಲ್ಲಸಲ್ಲದ ಅಪಾಯಕ್ಕೊಡ್ಡಿದೆ.


...ಂದೆಡೆ ಕೊಚ್ಚೆಗಿಳಿಯುವವರ ಬದುಕನ್ನು ತನ್ನ ...ದಲ್ಲಿ ದಾಖಲಿಸಿಕೊಳ್ಳುತ್ತಾ ನಗರವಾಸಿಗಳ ನಾಗರಿಕ ...ವಾಡವನ್ನು ಒಂದೊಂದಾಗಿ ಕಳಚುತ್ತಾ ಹೋಗುವ ... ಆಕಸ್ಮಿಕವಾಗಿ ರೌಡಿ ಗುಂಪಿಗೆ ಸಿಲುಕಿದ ...ತಿಯೊಬ್ಬಳನ್ನು ಕಾಪಾಡುತ್ತಾನೆ. ಆಕೆಯ ಗಂಡನನ್ನು ...ಗಲೇ ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ ...ಸಿದ್ದಾರೆ.

...ಲೀಸರಿಂದ ಹತನಾದ ಆ ರೌಡಿಯನ್ನು ಪ್ರೀತಿಸಿ ...ವೆಯಾದ ತಪ್ಪಿಗೆ ಈಕೆಗೆ ಒಂದೆಡೆ ಪೊಲೀಸರ ... ಮತ್ತೊಂದೆಡೆ ರೌಡಿಗಳ ಕಾಟ. ಇದೆಲ್ಲವನ್ನು ...ಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆಕೆಯ ... ನ್ಯಾಯ ಕೊಡಿ ಎಂದು ಚೆನ್ನ ತನ್ನಲ್ಲಿದ್ದ ವೀಡಿಯೋ ...ಸರಿಗೊಪ್ಪಿಸುತ್ತಾನೆ. ಅದು ಡಾನ್ ಜಾನ್‌ನ ಬಂಟರನ್ನು ...ಪಾಲಾಗಿಸುತ್ತದೆಯಾದರೂ ಆ ಮೂಲಕ ಜಲಗಾರನ ...ಚೆನ್ನನ ಮೇಲೆ ಜಾನ್ ಕೆಂಗಣ್ಣು ಬೀಳುತ್ತದೆ.

...ನ್ ಸಾಮಾನ್ಯನಲ್ಲ. ಒಂದಾನೊಂದು ಕಾಲಕ್ಕೆ ...ನಾಟಿಕೆಯಲ್ಲಿದ್ದು ಆ ಪಾಪದ ದುಡ್ಡಲ್ಲೇ ಪಾಲಿಕೆಗೆ ... ಕಾಂಟ್ರಾಕ್ಟ್ ದಂಧೆಗಿಳಿದವನು. ಶಿವಪ್ಪ ಕೂಡಾ ... ಚೇಲಾನ ಕಂಟ್ರಾಕ್ಟರ್ ಒಬ್ಬನ ಆಡಿಯಾಳು. ತಮ್ಮ ...ವನ್ನು ಖಾತರಿಗೊಳಿಸುವಂತೆ, ಹೊಟ್ಟೆ ...ವಷ್ಟಾದರೂ ಸಂಬಳ ನೀಡುವಂತೆ ಪೌರ ಕಾರ್ಮಿಕರು ...ಳಿಂದಲೂ ಹೋರಾಡುತ್ತಿದ್ದರೂ ಯಾರೊಬ್ಬರಿಗೂ ... ದುರ್ಗತಿ ಕಾಣಿಸದು. ಸುಪ್ರೀಂಕೋರ್ಟ್ ತನಕ ...ರೂ ಸಂಬಳದಲ್ಲಿ ಸಾವಿರ ರೂಪಾಯಿ ಹೆಚ್ಚಿಸಲು ...ಗೂ ಇಷ್ಟವಿಲ್ಲ. ಏಕೆಂದರೆ ಹೆಚ್ಚಿಗೆ ಸಂಬಳ ಕೊಟ್ಟರೆ ...ರೂ ಈ ಅಸಹ್ಯದ ಕೆಲಸಕ್ಕೆ ಬರುವುದಿಲ್ಲ!

...ದು ಪಾಲಿಕೆಯ ಮುಖ್ಯಾಧಿಕಾರಿಯೊಬ್ಬನ ವಾದ. ...ದ್ದರ ನಡುವೆಯೇ ಜಾನ್‌ನ ಬಂಟರನ್ನು ಪೌರ ...ಕರ ಮಗನೇ ಜೈಲಿಗೆ ಹಾಕಿಸಿದನೆಂದರೆ ಡಾನ್ ಸುಮ್ಮನಿರುತ್ತಾನಾ?

ಜಾನ್ ಮತ್ತಾತನ ರೌಡಿ ಪಡೆ ಕೊಳಗೇರಿಗೆ ನುಗ್ಗಿದ್ದೇ ಶಿವಪ್ಪನ ಮನೆಯನ್ನು ಚಿಂದಿಯೆಬ್ಬಿಸುತ್ತದೆ. ಪೆಟ್ಟಿಗೆ ಸಿಲುಕಿದ ಶಿವಪ್ಪನ ಮಗ ತನ್ನ ಎರಡು ಕಣ್ಣು ಕಳೆದುಕೊಳ್ಳುತ್ತಾನೆ. ರೌಡಿಗಳ ದಾಳಿಗೆ ಸಿಲುಕಿದ ಶಿವಪ್ಪನ ಪ್ರೀತಿಯ ಆ ನಾಯಿ ಕಾದಾಡಿ ಹೆಣವಾಗುತ್ತದೆ. ಈ ಎಲ್ಲಾ ಹೆಣಗಾಟಗಳ ಪರಮಾವಧಿಯಂತೆ ರೋಸತ್ತ ಪೌರ ಕಾರ್ಮಿಕರೆಲ್ಲ ತಾವು ಕಸ ಎತ್ತುವುದಿಲ್ಲ, ಮೋರಿಗೆ ಇಳಿಯುವುದಿಲ್ಲ ಎಂದು ಮುಷ್ಕರಕ್ಕಿಳಿಯುತ್ತಾರೆ. ಮುಷ್ಕರಕ್ಕಿಳಿದ ಪೌರ ಕಾರ್ಮಿಕರ ಬಗ್ಗೆ ನಾಗರಿಕ ಸಮಾಜಕ್ಕೆ ಯಥಾವತ್ತಿನ ತಾತ್ಸಾರ. ಮಾಧ್ಯಮಗಳ್ಯಾವುದಕ್ಕೂ ಪೌರ ಕಾರ್ಮಿಕರ ಕಷ್ಟ ಬೇಕಿಲ್ಲ. ಇಡೀ ಬೆಂಗಳೂರು ಕಸದ ತಿಪ್ಪೆಗುಂಡಿಯಾಗಿ ಹೋಗುತ್ತದೆ. ಒಂದೆಡೆ ಪೊಲೀಸರನ್ನು ಛೂಬಿಟ್ಟು ಪೌರ ಕಾರ್ಮಿಕರ



ಭಂಗಿಯಾಗಿ ಅಚ್ಯುತ ಕುಮಾರ್

ಮುಷ್ಕರವನ್ನು ಬಗ್ಗುಬಡಿಯಲೆತ್ನಿಸುವ ವ್ಯವಸ್ಥೆ ಮತ್ತೊಂದೆಡೆ ಗಾರ್ಬೇಜ್ ಮಾಫಿಯಾ ಗೂಂಡಾಗಿರಿಗೆ ಇಡೀ ಮುಷ್ಕರವೇ ತಲ್ಲಣಿಸುತ್ತದೆ.

ವ್ಯವಸ್ಥೆಯೊಂದು ನಾಗರಿಕ ಸಮಾಜದ ಸೋಗಿನಲ್ಲಿ ಏನೆಲ್ಲಾ ಕ್ರೌರ್ಯಗಳನ್ನು ರಕ್ತಗತವಾಗಿಸಿಕೊಂಡಿರುತ್ತದೆ ಮತ್ತು ತನ್ನ ಕೊಳಕನ್ನು ತೊಳೆದು ಶುಚಿಯಾಗಿಸುವ ಅತ್ಯಂತ ಮಹತ್ತರ ಕಾರ್ಯ ನಿರ್ವಹಿಸುವವರನ್ನು ಹೇಗೆಲ್ಲಾ ದಮನಿಸಿ ತನ್ನ ಜೀತಕ್ಕಿಟ್ಟುಕೊಳ್ಳುತ್ತದೆ ಎಂಬುದನ್ನು ಬಿಡಿಬಿಡಿಯಾಗಿ ಬಗೆದಿಡುತ್ತದೆ 'ಅಮರಾವತಿ'. ನಿರ್ದೇಶಕ ಬಿ.ಎಂ. ಗಿರಿರಾಜ್ ಈ ಹಿಂದೆ 'ಜಟ್ಟ' ಎಂಬ ಚಿತ್ರದಲ್ಲಿ ನಾಗರಿಕ ಸಮಾಜದ ಆತ್ಮವಂಚನೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಹಾಗೆಯೇ 'ಅಮರಾವತಿ'ಯಲ್ಲೂ ಬಿಳಿ ಕಾಲರ್ ಜನರ ಮುಖವಾಡವನ್ನು ಕಿತ್ತೆಸೆಯುತ್ತಾರೆ.

ಮ್ಯಾನುವಲ್ ಸ್ಕ್ಯಾವೆಂಜಿಂಗ್ ಅನ್ನು ಹೈಕೋರ್ಟ್ ನಿಷೇಧಿಸಿ ವರ್ಷಗಳೇ ಕಳೆದಿವೆಯಾದರೂ ಕರ್ನಾಟಕದ ಅನೇಕ ನಗರಗಳಲ್ಲಿನ್ನೂ ಆ ಪದ್ಧತಿ ಜೀವಂತವಾಗಿದೆ. ಇದಕ್ಕೆ ತಕ್ಕಂತೆಯೇ ಪೌರ ಕಾರ್ಮಿಕರಿಗಿನ್ನೂ ನ್ಯಾಯಬದ್ಧ ಸಂಬಳವೆಂಬುದು ಕನಸಾಗಿಯೇ ಉಳಿದಿದೆ. ಆದರೆ ಟಾಯ್ಲೆಟ್ಟೊಂದು ಕಟ್ಟಿಕೊಂಡರೆ, ಮೋರಿಯೊಂದು ಮುಚ್ಚಿಕೊಂಡರೆ ಊರಿಗೆ ಊರೇ ಮೋರಿಯಾಗುತ್ತದೆ ಮತ್ತು ಮನೆಯೆಂಬುದು ಅಕ್ಷರಶಃ ಪಾಯಿಖಾನೆಯಾಗಿ ಗಬ್ಬು ನಾರುತ್ತದೆ.

ಅಭಿವೃದ್ಧಿಯೆಂಬುದು ಕೇವಲ ಭಾಗ್ಯವಂತರ ಅಭಿವೃದ್ಧಿಯಾದರೆ ಸಮಾಜ ಇವತ್ತಲ್ಲ ನಾಳೆ ಅದಕ್ಕೆ ಹೇಗೆಲ್ಲಾ ದಂಡ ಕಟ್ಟಬೇಕಾಗುತ್ತದೆ ಎಂಬುದನ್ನು ಮನ ಮಿಡಿಯುವಂತೆ ಚಿತ್ರಿಸಿದ್ದಾರೆ ಗಿರಿರಾಜ್. ಕಸದ ಸಮಸ್ಯೆಯಿಂದ ಬೆಂಗಳೂರು ಪಾಠ ಕಲಿಯಲಿಲ್ಲ, ಇಲ್ಲಿನ ಸೋಕಾಲ್ಡ್ ನಾಗರಿಕರಿಗೂ ಗಾರ್ಬೇಜ್ ದುರಂತದ ಮೂಲವಾದ ಪೌರಕಾರ್ಮಿಕರ ಹೊಟ್ಟೆಸಂಕಟ ಅರ್ಥವಾಗಲಿಲ್ಲ. ಅದು ಕೇವಲ ಕಸ ಗುಡಿಸುವವರ ಅಥವಾ ಮೋರಿಗಿಳಿಯುವವರ ನಿಟ್ಟುಸಿರಷ್ಟೇ ಅಲ್ಲ ಅಭಿವೃದ್ಧಿಯ ಅವನತಿಗೆ ಸಿಲುಕಿದ ನಾಡಿನ ಸಮಸ್ತ ರೈತಾಪಿ ಸಮೂಹದ ದುರಂತವಾಗಿಸುವುದರಲ್ಲಿ 'ಅಮರಾವತಿ'ಯ ಸಾರ್ಥಕತೆಯಿದೆ.

ಇಂಥ ಚಿತ್ರವನ್ನು ಪ್ರಜ್ಞಾವಂತ ಸಮೂಹ ಮಿಸ್ ಮಾಡಿಕೊಳ್ಳಬಾರದು. ಕನಿಷ್ಠ ತಮ್ಮ ಆತ್ಮಸಂತೃಪ್ತಿಗಾದರೂ ಒಮ್ಮೆ ನೋಡಲೇಬೇಕಾದ ಚಿತ್ರ 'ಅಮರಾವತಿ'. ಪೌರ ಕಾರ್ಮಿಕರ ಬದುಕಿನ ಕುರಿತಂತೆ ತಾನು ಮಾಡಿದ ಡಾಕ್ಯುಮೆಂಟರಿಯನ್ನು ನೆರೆದ ಗಣ್ಯರೆದುರು ಬಿಚ್ಚಿಡುವ ಚೆನ್ನಬಸವ ಹೇಳುತ್ತಾನೆ. **'Thats exactly why draining stinks.** ಚರಂಡಿಗಳು ಅದಕ್ಕೆ ಅಷ್ಟು ಗಬ್ಬು ನಾರುತ್ತೆ, ಏಕೆಂದರೆ ಅಲ್ಲಿ ನಮ್ಮಪ್ಪನ ಹೆಣ ಮತ್ತು ದೊಡ್ಡ ಜನರ ಮನುಷ್ಯತ್ವ ಎರಡೂ ಕೊಳೀತಾ ಬಿದ್ದಿದೆ.....!'

ಇದು ಜಲಗಾರ ಶಿವಪ್ಪನ ಮಗನ ಬಾಯಿಂದ ಗಿರಿರಾಜ್ ಹೊರಡಿಸುವ ಮಾತು. ಅದು ಎಲ್ಲಾ ದಮನಿತ ಸಮೂಹಗಳ ಆಕ್ರೋಶವಾಗಿ ಧ್ವನಿಸುತ್ತದೆ. ಹಾಗೇ ಮುಂದುವರಿದ ಚೆನ್ನ ಹೇಳುತ್ತಾನೆ-

.....And thats why ಹಲ್ಕಾ ಬೀದಿ ನಾಯಿಗಳು ನಿಮ್ಮ ಗಾಡಿಗಳ ಹಿಂದೆ ಅಟ್ಟಿಸಿಕೊಂಡು ಬರುತ್ತಲೇ ಇರುತ್ತವೆ. ಏಕೆಂದರೆ ನೀವು ನಿಮ್ಮ ಹೋಂಡ, ಹುಂಡೈಯ್, ಬಿಎಂಡಬ್ಲ್ಯೂ, ಬೆಂಜ್ ಯಾವುದೇ ಗಾಡಿಯಲ್ಲಿ ಸೇಫ್ ಆಗಿ ಎಸಿ ಹಾಕಿಕೊಂಡು ಕೂತ್ಕೊಂಡು ಹೋಗಬಹುದು. ಆದರೆ ಯಾವಾಗ ಈ ಹಲ್ಕಾ ಬೀದಿ ನಾಯಿಗಳು ನಿಮ್ಮ ಕಿಟಕಿ ಆಚೆ ನಿಮ್ಮ ಮುಖ ನೋಡಿ ಅಟ್ಟಿಸಿಕೊಂಡು ಬರುತ್ತವ್ರೋ... ನಿಮಗೆ ಭಯವಾಗುತ್ತೆ. **Our ugliness scares you** ಮತ್ತು **no matter** ನೀವು ಎಷ್ಟೇ ವೇಗವಾಗಿ ನಿಮ್ಮ **development** ಸೌಧದೆಡೆಗೆ ನಿಮ್ಮ **posh** ಗಾಡಿಗಳಲ್ಲಿ ಯಾವಾಗೆಲ್ಲ ಹೋಗ್ತಿರೋ ಆಗೆಲ್ಲ ನಾವು ಕುರೂಪಿಗಳಾಗಿ ನಿಮ್ಮ ಗಾಡಿಯ ಕಿಟಕಿ ಆಚೆ ಬೊಗಳ್ತಾ ಅಟ್ಟಿಸಿಕೊಂಡು ಬರ್ತಾನೇ ಇರ್ತೀವಿ ಮತ್ತು ನಿಮಗೆ ಹೆದರಿಸ್ತಾನೇ ಇರ್ತೀವಿ....!

ಇದು 'ಅಮರಾವತಿ' ಎಂಬ ಚಿತ್ರವೊಂದು ಇಡೀ ನಾಗರಿಕ ಸಮಾಜವನ್ನೇ ನಿಲ್ಲಿಸಿ ಕೇಳುವ ಪ್ರಶ್ನೆಯಂತಿಲ್ಲವೇ?

■ ರಾ. ಸೋಮನಾಥ್

⏮ 'ಮಗ' ಜಿಗ್ನೇಶ್

...ಲ್ಲಿ ಮಾತನಾಡಲು ತಯಾರಿ ಮಾಡಿಕೊಂಡ. ...ನಾ ಮೆರವಣಿಗೆ ಮುಗಿಯುವ ಹೊತ್ತಿಗೆ ಒಂದೂ ...ಲು ಗಂಟೆ ಆಗಿತ್ತು. ಸಭೆ ಇದ್ದ ಲೈಬ್ರರಿ ಆವರಣದ ...ನಕ್ಕೆ ಹೋದಾಗ ಜಿಗ್ನೇಶನನ್ನು ಸ್ವಾಗತಿಸಲು ...ಮ್ಯಾನ, ದಲಿತ ಮತ್ತು ಇತರೆ ಯುವಕರು ...ರಿದರು.

...ತ್ತು ಮೀರುತ್ತಿತ್ತು. ಸಭೆಯ ಆಯೋಜಕರು ...ರು ಐವತ್ತು ಜನರನ್ನು ಒಬ್ಬೊಬ್ಬರಾಗಿ ವೇದಿಕೆಗೆ ...ಸಲಾರಂಭಿಸಿದರು. ನಾನು ವೇದಿಕೆಯ ಮೇಲಿದ್ದ ...ಗೆ "ಇನ್ನು ಹದಿನೈದು ನಿಮಿಷಗಳಲ್ಲಿ ನಾನು ...ನನ್ನು ಕರೆದುಕೊಂಡು ಹೊರಡುತ್ತೇನೆ" ಎಂದು ...ದೆ. ಆಗ ಅವಸರ ಮಾಡಿದರು. ಮೊದಲು ಭಾಸ್ಕರ್ ... ಪ್ರಾಸ್ತಾವಿಕ ಮಾತುಗಳನ್ನು ಆಡಿದ. ಆಮೇಲೆ ... ತಮಟೆ ಬಾರಿಸುವ ಮೂಲಕ ಕಾರ್ಯಕ್ರಮವನ್ನು ...ಟಿಸಿದ. ಅವತ್ತು ಜಿಗ್ನೇಶ್ ಮಾಡಿದ ಭಾಷಣ ...ವಾಗಿತ್ತು, ಅದರ ಪೂರ್ಣಪಾಠವನ್ನು ಈ ಸಂಚಿಕೆಯಲ್ಲಿ ...ದ್ದೇವೆ.

...ರಡೂವರೆಗೆ ಜಿಗ್ನೇಶ್ ಮಾತು ಮುಗಿಯಿತು. ...ನ್ನ ವೇದಿಕೆಯಿಂದ ಇಳಿಸಿ ಕಾರ್ ಹತ್ತಿಸಲು ...ಹಾಗ ಆತನ ಕೈಕುಲುಕಲು, ಸೆಲ್ಫಿ ತೆಗೆದುಕೊಳ್ಳಲು ...ಗುಳಿಯೇ ಸೇರಿತು. ಆದರೆ ಅದ್ಯಾವುದಕ್ಕೂ ...ವಿರಲಿಲ್ಲ. ಜಿಗ್ನೇಶನನ್ನು ಕಾರಿಗೆ ಹತ್ತಿಸಿಕೊಂಡು ...ೆ. ದಾರಿ ಮಧ್ಯೆ ಊಟಕ್ಕೆ ನಿಲ್ಲಲೂ ಅಳುಕು. ...ದರಿ ಆಕಸ್ಮಾತ್ ಯಲಹಂಕದಲ್ಲೋ ಅಥವಾ ಏರ್ ...ಾ ರೋಡಿಂದಾಗಿ ಟ್ರಾಫಿಕ್‌ನಲ್ಲೋ ಸಿಕ್ಕಿಹಾಕಿ ಕೊಂಡರೆ ಆತನ ಫ್ಲೈಟ್ ಮಿಸ್ ಆಗುತ್ತಿತ್ತು.

ಡ್ರೈವರ್ ಮಣಿ ಜಿಗ್ನೇಶನ ಭಾಷಣ ಕೇಳಿ ಪುಳಕಿತನಾಗಿದ್ದ. ಆತನಿಗೆ ಜಿಗ್ನೇಶ್, ಊನಾ ಪ್ರಕರಣ, ಜೆಎನ್‌ಯು, ಕನ್ಹಯ್ಯ ಇತ್ಯಾದಿಗಳ ಬಗ್ಗೆ ಗೊತ್ತಿರಲಿಲ್ಲವಾದ್ದರಿಂದ ಆತನಿಗೆ ಅವುಗಳ ಕುರಿತು ಹೇಳಿದೆ. ಆತ ಎಷ್ಟು ಇಂಪ್ರೆಸ್ ಆದ ಎಂದರೆ "ನಾನೂ ಇವರ ಜೊತೆ ಸೆಲ್ಫಿ ತೆಗೆದುಕೊಳ್ಳಬೇಕು" ಎಂದ.

ಜಿಗ್ನೇಶ್ "ನಿಮ್ಮ ಇನ್ನೊಬ್ಬ ಪುತ್ರನಿಗೆ ಫೋನ್ ಮಾಡುತ್ತೇನೆ: ನಾವಿಬ್ಬರೂ ಅವನನ್ನು ಮಾತನಾಡಿಸೋಣ" ಎಂದು ಕನ್ಹಯ್ಯ ಕುಮಾರ್‌ಗೆ ಕರೆ ಮಾಡಿದ. ಆದರೆ ಕನ್ಹಯ್ಯನ ಫೋನ್ ಸ್ವಿಚ್ ಆಫ್ ಆಗಿತ್ತು. ವಿಮಾನ ನಿಲ್ದಾಣ ಹತ್ತಿರ ಬಂದಾಗ ನಾಲ್ಕುವರೆ ಆಗಿತ್ತು. ಇನ್ನೂ ಅರ್ಧ ಗಂಟೆ ಇದ್ದಿದ್ದರಿಂದ ಅಲ್ಲೇ ಒಂದು ಹೋಟೆಲ್‌ನಲ್ಲಿ ಬಿರಿಯಾನಿ ತಿಂದೆವು. ಮಣಿ ತನ್ನ ಸೆಲ್ಫಿ ಕ್ಲಿಕ್ಕಿಸಿಕೊಂಡ. ಇವತ್ತು ಬಹಳಷ್ಟು ಪ್ರಗತಿಪರ ಯುವಕರು ಹೇಳುತ್ತಿರುವಂತೆ ಮಣಿ ಕೂಡ "ಮೇಡಂ. ನೀವು ನನ್ನನ್ನೂ ನಿಮ್ಮ ಮಗ ಅಂತ ಸ್ವೀಕರಿಸಬೇಕು" ಎಂದ!

ಸರಿಯಾಗಿ ಐದು ಗಂಟೆಗೆ ವಿಮಾನ ನಿಲ್ದಾಣ ತಲುಪಿದೆವು. ಜಿಗ್ನೇಶನನ್ನು ಅಪ್ಪಿ, ಅವನ ಗಲ್ಲಗಳಿಗೆ ಮುತ್ತು ಕೊಟ್ಟು ಬೀಳ್ಕೊಟ್ಟೆ.

ಅಹಮದಾಬಾದ್ ತಲುಪುತ್ತಿದ್ದಂತೆ ಜಿಗ್ನೇಶ್ ಒಂದು ಎಸ್‌ಎಮ್‌ಎಸ್ ಕಳುಹಿಸಿದ. ಅದರಲ್ಲಿ "ಈಗತಾನೇ ಅಹಮದಾಬಾದ್ ತಲುಪಿದೆ. ಬೆಂಗಳೂರಿನಲ್ಲಿ ನಿನ್ನಿಂದಾಗಿಯೇ ನನಗೆ ಅದ್ಭುತ ಅನುಭವವಾಯಿತು. ಥ್ಯಾಂಕ್ಸ್ ಟು ಯು. ದೊಡ್ಡ ಅಪ್ಪುಗೆ ನಿನಗೆ. ಬೆಂಗಳೂರಿಗೆ ಮತ್ತೆಮತ್ತೆ ಬರುತ್ತೇನೆ, ಮತ್ತೆ ಮತ್ತೆ ನಿನ್ನ ಮನೆಯಲ್ಲಿಯೇ ಇರುತ್ತೇನೆ" ಎಂದ.

ಮೂರನೆ ದಿನ 'ತುಮಕೂರು ಚಲೋ' ಕಾರ್ಯಕ್ರಮದಲ್ಲಿ ಆತನ ಭಾಷಣದ ಬಗ್ಗೆ ಪ್ರಕಟಗೊಂಡ ಪತ್ರಿಕಾ ವರದಿಗಳನ್ನು ಅವನಿಗೆ ವಾಟ್ಸ್‌ಆಪ್ ಮೂಲಕ ಕಳುಹಿಸಿದೆ.

ಮಾರ್ಚ್ 12ರಂದು ದಾವಣಗೆರೆಯಲ್ಲಿ ಹಮ್ಮಿಕೊಂಡಿರುವ 'ಲಂಕೇಶ್ 82' ಕಾರ್ಯಕ್ರಮದಲ್ಲಿ ಭಾಗವಹಿಸಲಾಗುತ್ತದೆಯೇ ಎಂದು ನಾನು ಆತನನ್ನು ಕೇಳಿದ್ದೆ. "ಆಗಲ್ಲ ಅನ್ನಿಸುತ್ತೆ, ಯಾಕೆಂದರೆ ಮಾರ್ಚ್ 9ರಿಂದ ಗುಜರಾತಿನಲ್ಲಿ ಒಂದು ತಿಂಗಳ ಪಾದಯಾತ್ರೆಯನ್ನು ಹಮ್ಮಿಕೊಂಡಿದ್ದೇವೆ. ಆದರೂ ಅದು ಪಕ್ಕಾ ಆದಕೂಡಲೆ ನಿನಗೆ ತಿಳಿಸುತ್ತೇನೆ" ಎಂದಿದ್ದಾನೆ.

ಭಾನುವಾರ ಜಿಗ್ನೇಶ್ ಕನ್ಹಯ್ಯನಿಗೆ ಫೋನ್ ಮಾಡಿ ತನ್ನ ಬೆಂಗಳೂರು ಪ್ರವಾಸದ ಬಗ್ಗೆ ಹೇಳಿದ್ದಾನೆ. ಆದ್ದರಿಂದ ಅವತ್ತು ರಾತ್ರಿ ಕನ್ಹಯ್ಯ ನನಗೆ ಫೋನ್ ಮಾಡಿದ. "ಹೇಗಿದ್ದೀರಿ?" ಎಂದ ಕನ್ಹಯ್ಯ. "ನಾನು ಚೆನ್ನಾಗಿದ್ದೀನಿ. ನೀನು ಹೇಗೆ ಇದ್ದೀಯ. ಡಾಕ್ಟರೇಟ್ ಥೀಸೀಸ್ ಕೆಲಸ ಹೇಗೆ ಸಾಗಿದೆ?" ಎಂದೆ.

"ಅದರಲ್ಲೇ ನಿರತನಾಗಿದ್ದೇನೆ. ಕೆಲಸ ಸಾಗಿದೆ" ಎಂದ.

"ಫೆಬ್ರವರಿ ತಿಂಗಳಲ್ಲಿ ಹೇಳುತ್ತೇನೆ ದಾವಣಗೆರೆಗೆ ಬರಲು ಸಾಧ್ಯವೋ ಇಲ್ಲವೋ ಅಂತ. ಬರಲಿಕ್ಕೆ ಆಗುತ್ತಾ?" ಎಂದೆ.

"ತುಂಬಾ ತುಂಬಾ ಸಾರಿ, ಆಗಲ್ಲ, ಮುಂದಿನ ಬಾರಿ ಖಂಡಿತಾ ಬರುತ್ತೇನೆ" ಅಂದ.

"ನೀನು ನನಗೆ ಮಾತು ಕೊಟ್ಟಂತೆ ದೆಹಲಿಯಿಂದ ಎಲ್ಲೂ ಕದಲುತ್ತಿಲ್ಲ ತಾನೆ?"

"ಇಲ್ಲ, ನಾನು ಎಲ್ಲಿಗೂ ಹೋಗುತ್ತಿಲ್ಲ, ಇಲ್ಲೇ ಇದ್ದು ಈ ಡಾಕ್ಟರೇಟ್ ಥೀಸೀಸ್ ಮುಗಿಸಲು ನಿರ್ಧರಿಸಿದ್ದೇನೆ."

"ಆಗಲಿ. ನಾನು ಹೇಗೂ ಪತ್ರಿಕೆಯಲ್ಲಿ ಬರೆದು ಆಗಿದೆ. ಮಗ ಡಾಕ್ಟರೇಟ್ ಮುಗಿಸಲಿ ಎಂಬ ತಾಯಿ ಗೌರಿಯ ಆಶೆ ಗೆದ್ದು ಆಕೆಯೇ ಸಂಪಾದಕಿ ಗೌರಿಯ ಕಾರ್ಯಕ್ರಮಕ್ಕೆ ಬರಬೇಡ ಎಂದಳು ಅಂತ."

"ಸೋ ನೈಸ್ ಆಫ್ ಯು. ನೀವು ಕೊಟ್ಟಿರುವ ಬಟ್ಟೆ ಧರಿಸಿರುವ ಫೋಟೋ ಕಳುಹಿಸುತ್ತೇನೆ."

"ಪರವಾಗಿಲ್ಲ. ಆದರೆ ನಾನು ಹೇಳಿದಂತೆ ನಿನಗೆ ಕೊನೆಯಲ್ಲಿ ಥೀಸೀಸ್ ಮುಗಿಸಲು ನೆಮ್ಮದಿಯ ಸ್ಥಳ ಬೇಕು ಅನ್ನಿಸಿದರೆ ನನ್ನ ಮನೆಗೆ ಬರಬಹುದು" ಎಂದೆ.

"ನಿಮ್ಮಿಂದ ಯಾವುದೇ ಸಹಾಯ ಬೇಕಾದರೆ ಯಾವ ಹಿಂಜರಿಕೆಯೂ ಇಲ್ಲದೆ ಕೇಳುತ್ತೇನೆ."


"ಜಿಗ್ನೇಶ್ ಬೆಂಗಳೂರಿಗೆ ಬಂದಿದ್ದ. ನನ್ನ ಮನೆಯಲ್ಲೇ ಉಳಿದುಕೊಂಡಿದ್ದ. 'ಕನ್ಹಯ್ಯನೂ ನಿನ್ನ ಮನೆಯಲ್ಲಿ ಇದ್ದನಾ?' ಅಂತ ಆತ ಕೇಳಿದ. ಅದಕ್ಕೆ ನಾನು 'ಇಲ್ಲ, ಸೆಕ್ಯೂರಿಟಿ ಕಾರಣಗಳಿಂದ ಆತ ಪಾರ್ಟಿ ಆಫೀಸಿನಲ್ಲಿ ಉಳಿದುಕೊಂಡಿದ್ದ' ಅಂತ ಹೇಳಿದೆ" ಎಂದೆ.

ಅದನ್ನು ಕೇಳಿ ಜೋರಾಗಿ ನಕ್ಕ ಕನ್ಹಯ್ಯ "ಮುಂದಿನ ಬಾರಿ ನಮ್ಮ ಪಕ್ಷದವರಿಗೆ ಹೇಳದೆ ನೇರ ನಿಮ್ಮ ಮನೆಗೆ ಬಂದು ನಿಮ್ಮ ಜೊತೆ ಇರುತ್ತೇನೆ" ಎಂದ.


(ಇದನ್ನು ಓದಿ ಕಾಮ್ರೇಡ್ ಸಿದ್ದನಗೌಡ ಪಾಟೀಲರು ಕೋಲು ಹಿಡಿದು ನನ್ನನ್ನು ಹೊಡೆಯಲು ಬಾರದಿದ್ದರೆ ಸಾಕು!)

ದಾವಣಗೆರೆ ಕಾರ್ಯಕ್ರಮಕ್ಕೆ ಕನ್ಹಯ್ಯ ಬರಲ್ಲ ಎಂದಾಯಿತು. ಜಿಗ್ನೇಶ್ ಕೂಡ ಡೌಟು. ಮುಂಕಣ್ಣು ಮೇಲ್ಪಲನೇ ಗಬ್ಬ ಅನ್ನಿಸುತ್ತಿದೆ... ■

ನಂಜನಗೂಡು ಜೆಡಿಎಸ್ ಸಮಾವೇಶದಲ್ಲಿ ಕುಮಾರಣ್ಣನ ಹೈಡ್ರಾಮಾ!


ದೇವೇಗೌಡ




ಶ್ರೀನಿವಾಸ್ ಪ್ರಸಾದ್

ಜೆಡಿಎಸ್ ಪಾರ್ಟಿಯ ನಸೀಬೆ ಅಂತದ್ದೊ ಅಥವಾ ಕುಮಾರಣ್ಣನ ಹೆಜ್ಜೆ ಅಂತದ್ದೋ ಇಲ್ಲವೇ ದೇವೇಗೌಡರ ಚಾಣಾಕ್ಷ ರಾಜಕಾರಣದ ದಾಳಗಳೇ ಅಂತವ್ರೋ ಗೊತ್ತಿಲ್ಲ, ಒಟ್ಟಿನಲ್ಲಿ ಜೆಡಿಎಸ್ ಪಾರ್ಟಿ ಇತ್ತೀಚಿನ ದಿನಗಳಲ್ಲಿ ಯಡವಟ್ಟುಗಳ ಮೇಲೆ ಯಡವಟ್ಟುಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದೆ. 2004ರಲ್ಲಿ ಕಾಂಗ್ರೆಸ್‌ನ ಜೊತೆಗೂಡಿ 'ತೂಕ'ದ ಮನುಷ್ಯ ಧರಂಸಿಂಗ್ ಸಾರಥ್ಯದಲ್ಲಿ ಮೈತ್ರಿ ಅಧಿಕಾರದ ರುಚಿ ಅನುಭವಿಸುವವರೆಗೆ ಎಲ್ಲವೂ ನೆಟ್ಟಗಿತ್ತು. ಆದರೆ ಅದ್ಯಾವಾಗ ಕುಮಾರಣ್ಣ 'ಕಮಲ'ದ 'ದಳ'ಗಳಿಗೆ ಜೋತುಬಿದ್ದು ಸಿಎಂ ಕನಸು ಕಂಡರೋ ಅಲ್ಲಿಂದಾಚೆಗೆ ಜೆಡಿಎಸ್‌ನ ವರ್ಚಸ್ಸೇ ಪಾತಾಳಕ್ಕಿಳಿದುಹೋಗಿದೆ. ಅವಕಾಶವಾದಿ ಪಾರ್ಟಿ ಅನ್ನೋ ಕೆಟ್ಟ ಹೆಸರು ಜೋತು ಬಿದ್ದಿದೆ. ನಂಜನಗೂಡು ಉಪಚುನಾವಣೆಯಲ್ಲಿ ಅದು ಮತ್ತೊಮ್ಮೆ ಸಾಬೀತಾಗುವಂತೆ ಕಾಣುತ್ತಿದೆ.


ಇಷ್ಟುದಿನ ಶ್ರೀನಿವಾಸ್ ಪ್ರಸಾದ್‌ಗೆ ನಂಜನಗೂಡಿನಲ್ಲಿ ಪ್ರಬಲ ಪೈಪೋಟಿ ಒಡ್ಡುತ್ತಿದ್ದುದ್ದು ಜೆಡಿಎಸ್‌ನ ಕಳಲೆ ಕೇಶವಮೂರ್ತಿ. ಆದರೆ ಇದೀಗ ಸದರಿ ಕಳಲೆ, ಕಾಂಗ್ರೆಸ್‌ನ ಹುರಿಯಾಳಾಗುವುದು ಬಹುತೇಕ ನಿಕ್ಕಿಯಾಗಿದೆ. ಕಳಲೆ ಕೇಶವಮೂರ್ತಿಯ ಪಕ್ಷಾಂತರ ಪರ್ಯಟನೆಯನ್ನು ಗಮನಿಸಿದರೆ ಅದು ಆತ ಅಚಾನಕ್ಕಾಗಿ ತೆಗೆದುಕೊಂಡ ನಿರ್ಧಾರ ಅಂತನ್ನಿಸುವುದಿಲ್ಲ. ಯಾಕೆಂದರೆ ನಂಜನಗೂಡಿನಲ್ಲಿ ತಮ್ಮ ಪುತ್ರನನ್ನು ಕಣಕ್ಕಿಳಿಸಲು ಮಂತ್ರಿ ಮಹದೇವಪ್ಪ ಅದೇನಲ್ಲ ಕಸರತ್ತು ಮಾಡಿದ್ದಾರೆನ್ನುವುದು ಕಳಲೆ ಖುದ್ದು ಕಂಡಿದ್ದರು. ಇನ್ನು ನಂಜನಗೂಡಿನಲ್ಲಿ ಶ್ರೀನಿವಾಸ್ ಪ್ರಸಾದ್‌ಗೆ ಪಕ್ಷಕ್ಕೂ ಮೀರಿದ ತನ್ನದೇ ವೈಯಕ್ತಿಕ ಮತ ಸಮೂಹವಿರುವುದೂ ಕಳಲೆಗೆ ಗೊತ್ತು. ಇಂಥಾ ಸಂದಿಗ್ಧತೆಯಲ್ಲಿ ಆತ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಮನಸ್ಸು ಮಾಡಿದ್ದಾರೆಂದರೆ ಅದರ ಹಿಂದೆ ಕೇವಲ ಆಡಳಿತಾರೂಢ ಪಕ್ಷದ ಆಫರ್ ಮಾತ್ರವಲ್ಲ, ಮತ್ತೂ ಒಂದಷ್ಟು ರಾಜಕೀಯ 'ಹಿತನುಡಿ'ಗಳು ಇವೆ ಎನ್ನುವುದು ಖಾತ್ರಿಯಾಗುತ್ತದೆ. ಅದನ್ನೇನೂ ಆತ ಮುಚ್ಚಿಟ್ಟುಕೊಂಡಿಲ್ಲ. ಹೋದಬಂದ ಸಭೆಯಲ್ಲೆಲ್ಲ "ನನ್ನ ಪೂಜ್ಯ ಸಮಾನರಾದ ದೇವೇಗೌಡರು ಮತ್ತು ಕುಮಾರಣ್ಣನ ಆಶೀರ್ವಾದ ಪಡೆದು, ಅವರ ಮಾರ್ಗದರ್ಶನದಂತೆಯೇ ಕಾಂಗ್ರೆಸ್ ಸೇರಿದ್ದೇನೆ" ಅಂತ ಹೇಳಿಕೊಂಡು ತಿರುಗಾಡುತ್ತಿದ್ದಾರೆ.

ದೇವೇಗೌಡರು ಸಹ ಆರಂಭದಲ್ಲೇ "ನಮ್ಮದು ಪ್ರಾದೇಶಿಕ ಪಾರ್ಟಿ, ರಾಷ್ಟ್ರೀಯ ಪಕ್ಷಗಳು ದುಡ್ಡು ಚೆಲ್ಲಿ ಎಲೆಕ್ಷನ್ ಎದುರಿಸುತ್ತವೆ. ನಮಗೆ ಆ ಶಕ್ತಿಯಿಲ್ಲ, ಹಾಗಾಗಿ ಉಪ ಚುನಾವಣೆಗೆ ನಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಸ್ಪಷ್ಟ ನಿರ್ಧಾರ ತಗೊಂಡಿಲ್ಲ" ಅನ್ನುವ ಮೂಲಕ ಈಗ ಕಳಲೆ ಕೇಶವಮೂರ್ತಿ ಹೇಳಿಕೊಂಡು ಬರುತ್ತಿರುವುದಕ್ಕೆ ಮುನ್ನುಡಿ ಬರೆದಿದ್ದರು. ಹಾಗಾದರೆ ಜೆಡಿಎಸ್ ಪಕ್ಷ ಇದುವರೆಗೆ ಯಾವ ಉಪಚುನಾವಣೆಯನ್ನೂ ಎದುರಿಸಿಲ್ಲವೇ? ತೀರಾ ಹಿಂದಿನ ಇತಿಹಾಸ ಬೇಡ, ಕಳೆದ ವರ್ಷವಷ್ಟೇ ನಡೆದ ಹೆಬ್ಬಾಳ, ಬೀದರ್, ದೇವದುರ್ಗ ಉಪಚುನಾವಣೆಯಲ್ಲಿ ಸ್ಪರ್ಧಿಸುವಾಗ ಜೆಡಿಎಸ್ ಶ್ರೀಮಂತ ಪಾರ್ಟಿಯಾಗಿತ್ತೇ ಅಥವಾ ಅವು ದುಡ್ಡು ಚೆಲ್ಲಾಡುವ ಎಲೆಕ್ಷನ್‌ಗಳಾಗಿರಲಿಲ್ಲವೇ? ತಮ್ಮ ಪ್ರಾಬಲ್ಯವೇ ಇರದ ಉತ್ತರ ಕರ್ನಾಟಕದ ದೇವದುರ್ಗ, ಬೀದರ್‌ನಂತಹ ಕ್ಷೇತ್ರಗಳ ಉಪಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ, ತಮ್ಮ ಪ್ರಾಬಲ್ಯವಿರುವ ಹಳೇ ಮೈಸೂರು ಭಾಗದ ಉಪಚುನಾವಣೆಯನ್ನು ಹೊರೆ ಎನ್ನುತ್ತಾರೆಂದರೆ ಏನರ್ಥ? ಅಷ್ಟೆಲ್ಲ ಯಾಕೆ, ಪಕ್ಷದ ಸುಪ್ರಿಮೋಗಳಾದ ದೇವೇಗೌಡರು ಮತ್ತು ಕುಮಾರಣ್ಣನೇ ಅದೆಷ್ಟು ಉಪಚುನಾವಣೆಗಳಲ್ಲಿ ಸ್ಪರ್ಧಿಸಿಲ್ಲ? ಹೀಗಿದ್ದೂ ಗೌಡರು ಕಾಸಿನ ಕನಿಕರದ ಅಕೌಂಟು ಕೊಟ್ಟು ನಂಜನಗೂಡು ಕದನದಿಂದ ಹಿಂದಕ್ಕೆ ಸರಿಯುತ್ತಾರೆಂದರೆ ಅದರ ಹಿಂದೆ ಬೇರೆಯದ್ದೇ ಲೆಕ್ಕಾಚಾರ ಇರುವುದು ಸಾಬೀತಾಗುತ್ತದೆ. ಅಲ್ಲಿಗೆ ಕಳಲೆ ಕಾಂಗ್ರೆಸ್ ಗೃಹಪ್ರವೇಶ ಗೈದಿರುವುದರ ಹಿಂದೆ ಜೆಡಿಎಸ್ ವರಿಷ್ಠರ ತಂತ್ರ ಇದ್ದೇ ಇರುತ್ತೆ ಅದನ್ನೇ ಆತ ಹೇಳಿಕೊಂಡು ತಿರುಗಾಡುತ್ತಿರೋದು.

ಶ್ರೀನಿವಾಸ್ ಪ್ರಸಾದ್‌ರನ್ನು ಮಟ್ಟ ಹಾಕುವುದರ ಜೊತೆಗೆ ಮುಂದಿನ ಸಾರ್ವತ್ರಿಕ ವಿಧಾನಸಭಾ ಚುನಾವಣೆ ವೇಳೆಗೆ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಅವಕಾಶವನ್ನು ಅಣಿಗೊಳಿಸಿಕೊಳ್ಳುವುದು ಜೆಡಿಎಸ್‌ನ ಇರಾದೆ ಇದ್ದಂತೆ ಕಾಣುತ್ತೆ. ಹಾಗಂತ ತನ್ನನ್ನು ಕಾಂಗ್ರೆಸ್‌ಗೆ ಕಳಿಸಿದ್ದೇ ದೇವೇಗೌಡರು ಮತ್ತು ಕುಮಾರಣ್ಣ ಅಂತ ಕಳಲೆ ಹೇಳಿಕೊಳ್ಳುತ್ತಿರುವಾಗ ತಾವು ಮೌನವಾಗಿ ಉಳಿದುಬಿಟ್ಟರೆ ಪಕ್ಷಕ್ಕೆ ಈಗಾಗಲೇ ಅಂಟಿರುವ 'ಅವಕಾಶವಾದಿ' ಸ್ಲೋಗನ್ನು ಮತ್ತಷ್ಟೂ ಗಟ್ಟಿಯಾಗಿಬಿಡುತ್ತೆ ಅಂತಲೇ ಮೊನ್ನೆ ಕುಮಾರಣ್ಣ ನಂಜನಗೂಡಿನಲ್ಲಿ ಸಣ್ಣದೊಂದು ಹೈಡ್ರಾಮಾ ಮಾಡಿ ಹೋಗಿದ್ದಾರೆ. ಕಾರ್ಯಕರ್ತರ ಸಮಾವೇಶದ ನೆಪದಲ್ಲಿ ಕಳಲೆ ಕೇಶವಮೂರ್ತಿಯನ್ನು ಹಿಗ್ಗಾಮುಗ್ಗಾ ಬೈದು ತಾವು ಮುಗ್ಧರೆನಿಸಿಕೊಳ್ಳಲು ಕುಮಾರಣ್ಣ ಮಾಡಿದ ಪ್ರಯತ್ನಗಳೆಲ್ಲವೂ ಅದ್ಯಾಕೋ ಕಾಮಿಡಿ ತುಣುಕುಗಳಂತೆ ಕಂಡದ್ದು ವಿಪರ್ಯಾಸ!

ನಾಯಕರೇ ಇಲ್ಲದ ಜೆಡಿಎಸ್ ಸಮಾವೇಶ


ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಸೇರಿಕೊಂಡ ನಂತರ ಮೊದಲ ಬಾರಿಗೆ ನಂಜನಗೂಡಿಗೆ ಆಗಮಿಸಿದ್ದ ಕುಮಾರಸ್ವಾಮಿಗೆ ದಾರಿ ಮಧ್ಯೆ ಮೈಸೂರಿನಲ್ಲೇ ಜೆಡಿಎಸ್ ಜನ 'ಏನಣ್ಣ ಇದು ನಂಜನಗೂಡು ಕಥೆ. ಕಳಲೆಯನ್ನು ನೀವೇ ಕಾಂಗ್ರೆಸ್‌ಗೆ ಕಳಿಸಿದ್ದೀರಂತೆ' ಅಂತ ಬ್ಯಾಸರ ಬಿಸಾಕಿದ್ದರು. ಅಸಲಿಗೆ ಕುಮಾರಣ್ಣ ಆ ಪ್ರವಾಸ ಹಮ್ಮಿಕೊಂಡದ್ದೂ ಕೂಡಾ ಕಾರ್ಯಕರ್ತರ ಈ ಬ್ಯಾಸರ ಹೋಗಲಾಡಿಸಲೆಂದೇ. ಅತ್ತ ನಂಜನಗೂಡಿಗೆ ಹೋದರೆ ಅಲ್ಲಿ ಸಮಾವೇಶದಲ್ಲಿ ಜೆಡಿಎಸ್‌ನ ಯಾವ ಸ್ಥಳೀಯ


ಮಹದೇವಪ್ಪ

ಜನಪ್ರತಿನಿಧಿಗಳೂ ಕಾಣಿಸಿಕೊಳ್ಳಲಿಲ್ಲ. ನಂಜನಗೂಡಿನ ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ ಹಾಗೂ ಪುರಸಭೆಯ ಜೆಡಿಎಸ್‌ನ ಸದಸ್ಯರು ಯಾರೂ ಸಮಾವೇಶದಲ್ಲಿ ಕಾಣಿಸಿಕೊಳ್ಳಲಿಲ್ಲ. ನಂಜನಗೂಡು ನಗರಸಭೆಯೊಂದರಲ್ಲೇ 9 ಜನ ಜೆಡಿಎಸ್ ಸದಸ್ಯರಿದ್ದಾರೆ, ಯಾರಾದರೂ ಸಮಾವೇಶದಲ್ಲಿ ಕಾಣಿಸಿಕೊಳ್ಳಬಾರದೆ? ಕಳಲೆ ಜೊತೆ ಅವರೆಲ್ಲ ಹೋಲ್‌ಸೇಲಾಗಿ ಕಾಂಗ್ರೆಸ್ ಪಡಸಾಲೆಯಲ್ಲಿ ನಿಂತಿರೋದರಿಂದ ಅವತ್ತು ಇತ್ತ ಮುಖ ಮಾಡಲಿಲ್ಲ.

ಜೆಡಿಎಸ್ ದಿಗ್ಗಜರು ಲೆಕ್ಕ ಹಾಕಿದ್ದೇ ಒಂದು ಆದರೆ ಅಲ್ಲಿ ಆಗಿದ್ದೇ ಇನ್ನೊಂದು. ಶ್ರೀನಿವಾಸ್ ಪ್ರಸಾದ್‌ರನ್ನು ಸೋಲಿಸುವುದಕ್ಕೆ ಮತ್ತು ಕಾಂಗ್ರೆಸ್ ಜೊತೆ ಮೈತ್ರಿ ಹಾದಿ ಸುಗಮ ಮಾಡಿಕೊಳ್ಳುವುದಕ್ಕಷ್ಟೇ ಕಳಲೆ ಈ ಸಲ ಕಾಂಗ್ರೆಸ್ ಅಭ್ಯರ್ಥಿಯಾಗಬೇಕು. ಸೋತರೆ ಚುನಾವಣೆ ಮುಗಿದ ತಕ್ಷಣವೇ ಜೆಡಿಎಸ್ ಸೇರಿಕೊಳ್ಳಬೇಕು. ಒಂದೊಮ್ಮೆ ಗೆದ್ದರೆ ಅವಧಿ ಮುಗಿವವರೆಗೆ ಶಾಸಕನಾಗಿದ್ದು ನಂತರ ಜೆಡಿಎಸ್‌ಗೆ ವಾಪಾಸ್ ಬರಬೇಕು ಅಂತೆಲ್ಲ ಉಪದೇಶ ಮಾಡಿಯೇ ಕಳಲೆಯನ್ನು ಕಾಂಗ್ರೆಸ್‌ಗೆ ಬೀಳ್ಕೊಡಲಾಗಿತ್ತಂತೆ. ಆದರೆ ಕಳಲೆ ತನ್ನೊಟ್ಟಿಗೆ ಇಡೀ ಜೆಡಿಎಸ್ ಬೆಟಾಲಿಯನ್ನನ್ನೇ ಕರೆದುಕೊಂಡು ಹೋಗಿದ್ದರಿಂದ ನಂಜನಗೂಡಲ್ಲಿ ಜೆಡಿಎಸ್ ಬಣಗುಡುತ್ತಿರೋದನ್ನು ಕಂಡ ಕುಮಾರಣ್ಣನ ಹೊಟ್ಟೆ ಆ ಕ್ಷಣಕ್ಕೆ ಚುರ್ ಎಂದಿರಬಹುದು ಅಥವಾ ಆಗನ್ನಿಸಿದಂತೆ ತೋರಿಸಿಕೊಳ್ಳುವ ಅನಿವಾರ್ಯತೆಯನ್ನು ಮೊದಲೇ ಸೃಷ್ಟಿಸಿಕೊಂಡು ಬಂದಿರಬಹುದು, ಹಾಗಾಗಿಯೇ ಸಮಾವೇಶದಲ್ಲಿ ಕಳಲೆಯನ್ನು ಚೆನ್ನಾಗೆ ತರಾಟೆಗೆ ತೆಗೆದುಕೊಂಡಿದ್ದರು.

"ಕಳಲೆ ಕೇಶವಮೂರ್ತಿ ಪಕ್ಷ ಬಿಡುವ ಬಗ್ಗೆ ದೇವೇಗೌಡರು, ಕುಮಾರಸ್ವಾಮಿ ಅವರಿಂದ ಅನುಮತಿ ಪಡೆದಿದ್ದೆ ಎಂದು ಹೇಳಿರುವುದು ತುಂಬಾ ನೋವಾಗಿದೆ. ಆತ ನನ್ನಿಂದ ಯಾವುದೇ ಅನುಮತಿ ಪಡೆದಿಲ್ಲ, ಆತ ಒಬ್ಬ ಸಜ್ಜನ ಎಂದುಕೊಂಡಿದ್ದೆ. ಆದರೆ ಅವನೊಬ್ಬ ಅಪಾಯಕಾರಿ ವ್ಯಕ್ತಿ. ಆತನಿಗೆ ಆಶೀರ್ವಾದ ಮಾಡಿ ಕಳಿಸಲು ನನಗೇನು ತಲೆ ಕೆಟ್ಟಿದೆಯೆ. ಬೇರೆ ಪಕ್ಷಕ್ಕೆ ಹೋಗುವವರನ್ನು ತಡೆಯಲು ಸಾಧ್ಯವಿಲ್ಲ, ಹಾಗಂತ ಆಶೀರ್ವಾದ ಮಾಡಿದ್ದೇವೆ ಎಂಬುದು ಅಪ್ಪಟ ಸುಳ್ಳು. ಅವರೊಂದಿಗೆ ಕಾಂಗ್ರೆಸ್ ಸೇರಿದ ಜೆಡಿಎಸ್‌ನ ನಗರಸಭಾ ಸದಸ್ಯರೆಲ್ಲರೂ ಕಾಂಗ್ರೆಸ್ ಪಕ್ಷದ ಆಮಿಷಕ್ಕೆ ಮನಸೋತು ಪಕ್ಷಾಂತರ ಮಾಡಿದ್ದಾರೆ. ಇಂತಹವರಿಗೆ ಪಾಠ ಕಲಿಸಲು ನಂಜನಗೂಡಿನ ಜನತೆ ಕಾಯುತ್ತಿದ್ದಾರೆ" ಎಂದೆಲ್ಲ ಕುಮಾರಣ್ಣ ಕಥೆ ಬಿಡುತ್ತಿದ್ದರೆ


ಕಳಲೆ ಕೇಶವಮೂರ್ತಿ

ಹಿಂದೆ ನಡೆದಿದ್ದ ಘಟನೆಗಳೆಲ್ಲ ಒಂದಕ್ಕೊಂದು ತಾಳೆಯಾಗದೆ ದಿಕ್ಕಾಪಾಲಾಗುತ್ತಿದ್ದವು.

ಕೇಶವಮೂರ್ತಿ ಹಾಗೂ ಕೆಲವು ಬೆಂಬಲಿಗರು ಕಾಂಗ್ರೆಸ್ ಸೇರಿದ ಮಾತ್ರಕ್ಕೆ ನಂಜನಗೂಡು ತಾಲ್ಲೂಕಿನ ಜೆಡಿಎಸ್ ಕಾರ್ಯಕರ್ತರು ಅವರ ಹಿಂದೆ ಹೋಗಿಲ್ಲವಲ್ಲ, ಹಾಗಾಗಿ ತಾಲ್ಲೂಕಿನಲ್ಲಿ ಜೆಡಿಎಸ್ ಇನ್ನೂ ಬಲಿಷ್ಠವಾಗಿದೆ ಎಂಬ ವಾದ ಮುಂದಿಟ್ಟ ಕುಮಾರಣ್ಣ ಸದ್ಯದಲ್ಲೇ ಕಾರ್ಯಕರ್ತರ ಸಭೆ ನಡೆಸಿ ನಂಜನಗೂಡು ಉಪಚುನಾವಣೆಯ ಸ್ಪರ್ಧೆಯ ಕುರಿತು ತೀರ್ಮಾನಿಸಲಾಗುವುದು ಎಂದು ಹೇಳುತ್ತಲೇ ಎರಡೂ ರಾಷ್ಟ್ರೀಯ ಪಕ್ಷಗಳು ಚುನಾವಣೆಯಲ್ಲಿ ಹಣದ ಹೊಳೆ ಹರಿಸುತ್ತವೆ, ಆದರೆ ನಾವು ಸಾಲಸೋಲ ಮಾಡಿ ಚುನಾವಣೆ ನಡೆಸಬೇಕಾಗಿದೆ ಎನ್ನುವ ದೇವೇಗೌಡರ ಹಳೇ ಡೈಲಾಗನ್ನೇ ತಿರುವಿಹಾಕಿ ಜನರನ್ನು ಮತ್ತೂ ಕನ್‌ಫ್ಯೂಷನ್‌ಗೆ ದೂಡಿದ್ದಾರೆ.

ಕುಮಾರಸ್ವಾಮಿ ನಂಜನಗೂಡು, ಗುಂಡ್ಲುಪೇಟೆಯ[...] ದಿಢೀರ್ ಕಾರ್ಯಕರ್ತರ ಸಮಾವೇಶ ಮಾಡಲು, ಜನರ[...] ಹೀಗೆ ಕನ್‌ಫ್ಯೂಷನಲ್ಲಿಡಲು ಬಹಳಷ್ಟು ಕಾರಣಗಳಿ[...] ಮೊದಲನೆಯದಾಗಿ ದೇವೇಗೌಡರು ಮತ್ತು ಕುಮಾರಸ್ವಾ[...] ಅವರೇ ಕಳಲೆಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟದ್ದೂ ಅ[...] ಹೊರಗಿನ ಪ್ರಪಂಚಕ್ಕೆ ಗೊತ್ತಾದರೆ ಮುಂದೆ ನಂಜನಗೂಡಿ[...] ಜೆಡಿಎಸ್ ಮತ್ತೆ ಪ್ರಾಬಲ್ಯ ಸ್ಥಾಪಿಸಲು ಸಾಧ್ಯವಾಗುವುದಿ[...] ಎಂಬ ಅಳುಕೂ ಅವರಿಗಿದೆ. ಒಪ್ಪಂದದ ಪ್ರಕಾರ ಮುಂದಿ[...] ಚುನಾವಣೆ ವೇಳೆಗೆ ಕಳಲೆ ಜೆಡಿಎಸ್‌ಗೆ ಮರಳಬೇಕ[...] ಆದರೆ ಕಳಲೆಗೆ ಕಾಂಗ್ರೆಸ್‌ನಲ್ಲಿ ಸೂಕ್ತ ಸ್ಥಾನಮಾನ ದೊರ[...] ಮುಂದಿನ ಚುನಾವಣೆಯಲ್ಲೂ ಕಳಲೆಗೇ ಕಾಂಗ್ರೆಸ್‌ನಿಂ[...] ಟಿಕೆಟ್ ಸಿಗುವಂತಾದರೆ ಮುಂದೆ ಎಂದೂ ಅ[...] ಜೆಡಿಎಸ್‌ನತ್ತ ಮುಖ ಮಾಡುವುದಿಲ್ಲ. ಅಂಥಾ ಪರಿಸ್ಥಿ[...] ಎದುರಾದರೆ ಪಕ್ಷ ನಂಜನಗೂಡಿನಲ್ಲಿ ಸಾರಾಸಗಟು ತ[...] ಬೇಸ್ ಕಳೆದುಕೊಳ್ಳದಂತಾಗಲಿ ಎನ್ನುವ ಕಾರಣ[...] ಕಾರ್ಯಕರ್ತರ ತಲೆ ನೇವರಿಸುವ ಸಾಂತ್ವನ ಕೆಲಸ ಜರೂರಾ[...] ಆಗಬೇಕಿತ್ತು, ಅದು ಕುಮಾರಣ್ಣನ ಸಮಾವೇಶದ ಮೂಲ[...] ಆದಂತಾಗಿದೆ. ಕಳಲೆ ಕೇಶವಮೂರ್ತಿ ಜೆಡಿಎಸ್ ಬಿಟ್ಟು[...] ಕಾಂಗ್ರೆಸ್ ಸೇರಿದ ಮೇಲೆ ಆತನೊಂದಿಗೆ ಜೆಡಿಎಸ್[...] ಮುಕ್ಕಾಲು ಪಾಲು ಕಾರ್ಯಕರ್ತರು, ಸ್ಥಳೀಯ[...] ಜನಪ್ರತಿನಿಧಿಗಳು ಕಾಂಗ್ರೆಸ್ ಸೇರಿದ್ದಾರಂತೆ ಎನ್ನುವ ಸು[...] ಮೈಸೂರು ಭಾಗದ ಜನರ ಬಾಯಲ್ಲಿ ಹರಿದಾಡುತ್ತಿ[...] ಈ ಸ್ಟೇಟ್‌ಮೆಂಟ್ ಕೇವಲ ನಂಜನಗೂಡಿಗೆ ಮಾತ್ರವಲ್ಲ[...] ಮೈಸೂರು ಭಾಗದಲ್ಲೇ ಪಕ್ಷಕ್ಕೆ ಡ್ಯಾಮೇಜ್[...] ತಂದೊಡ್ಡಬಲ್ಲದಾಗಿತ್ತು, ಅದಕ್ಕೊಂದು ಬ್ರೇಕ್ ಬಿಗಿಯು[...] ಕೆಲಸವೂ ಕುಮಾರಣ್ಣನ ಸಮಾವೇಶದಿಂದ ಆದಂತಾಗಿ[...] ಇಲ್ಲದೇ ಹೋಗಿದ್ದರೆ, ದೇವೇಗೌಡ್ರೆ ತನ್ನನ್ನು ಕಾಂಗ್ರೆಸ್[...] ಕಳಿಸಿದ್ದಾರೆ ಅಂತ ಕಳಲೆ ಹೇಳಿಕೆ ಕೊಟ್ಟಾಗಲೇ ಕುಮಾರ[...] ಮತ್ತು ದೇವೇಗೌಡ್ರು ಇಬ್ಬರೂ ಅದನ್ನು ರಾಜಾರೋಷವಾ[...] ವಿರೋಧಿಸಬೇಕಿತ್ತು. ಅದಕ್ಕೋಸ್ಕರ ಇಂತದ್ದೊಂದು[...] ಸಮಾವೇಶದವರೆಗೆ ಕಾಯುವ ಜರೂರಿತ್ತೇ?

ಮಹದೇವಪ್ಪನ ಮುನಿಸು

ಇನ್ನು ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಸೇರಿ[...] ಮೇಲೆ ಅವರ ಮೇಲೆ ವಿಷ ಕಾರುತ್ತಿರುವ ಎಚ್.ಸಿ.[...] ಮಹದೇವಪ್ಪನವರ ಪುತ್ರ ಸುನಿಲ್ ಬೋಸ್ ನಂಜನಗೂಡು[...] ಕ್ಷೇತ್ರದ ಉಪಚುನಾವಣೆಗೆ ನಾನೂ ಕೂಡ ಪ್ರಬಲ ಆಕಾಂಕ್ಷಿ[...] ಎಂದು ಹೇಳಿ ಟಿಕೆಟ್ ಕನಸನ್ನು ಜೀವಂತವಾಗಿ[...] ಸಿಕೊಂಡಿದ್ದಾರೆ. ಮಹದೇವಪ್ಪನವರೇ ಹೇಳುವ ಪ್ರಕಾ[...] ಕಳಲೆ ಕೇಶವಮೂರ್ತಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್[...] ಪಕ್ಷದ ಅಭ್ಯರ್ಥಿಯೆಂಬುದು ಗಾಳಿಸುದ್ದಿಯಂತೆ.

ಸುನೀಲ್ ಬೋಸ್ ನಡೆ ನೋಡಿದರೆ ಅಪ್ಪ ಮಕ್ಕ[...] ಕೊನೆಯ ಕ್ಷಣದ ತನಕವೂ ಟಿಕೆಟ್‌ಗೆ ತಂತ್ರ[...] ರೂಪಿಸುತ್ತಿರುವಂತಿದೆ. ಮಹದೇವಪ್ಪನವರ ಟಿಕೆಟ್[...] ಕನವರಿಕೆಯ ಹಿಂದೆ ಕೇವಲ ನಂಜನಗೂಡು ಗದ್ದು[...] ಮಾತ್ರವಲ್ಲ, ಅದಕ್ಕೂ ವಿಶಾಲ ಆಲೋಚನೆ ಇದ್ದಂತಿದೆ[...] ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇತ್ತೀಚೆಗೆ[...] ದಲಿತ ನಾಯಕನಾಗಿ ಸಂಸದ ಆರ್.ಧ್ರುವನಾರಾಯಣ[...] ತಮ್ಮ ನೆಲೆಯನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ. ಕಳಲೆ[...] ಕೇಶವಮೂರ್ತಿಯ ಕಾಂಗ್ರೆಸ್ ಸೇರ್ಪಡೆ ಧ್ರುವನಾರಾಯಣ್[...] ನಾಯಕತ್ವಕ್ಕೆ ಪೂರಕವಾದಂತಿದೆ. ಇಲ್ಲಿ ಒಮ್ಮೆ ಕಳಲೆ[...] ಗೆದ್ದುಬಿಟ್ಟರೆ ನಂಜನಗೂಡು ಎಚ್.ಸಿ.ಮಹದೇವಪ್ಪ ಅವ[...] ಹಿಡಿತದಿಂದ ಕೈಜಾರಿ ಧ್ರುವ ಕೈಗೆ ಬೀಳಲಿದೆ.[...] ಇದನ್ನರಿತಿರುವ ಮಹದೇವಪ್ಪ ಅಂಡ್ ಸನ್ ನಂಜನಗೂಡನ್ನು[...] ಉಳಿಸಿಕೊಳ್ಳಲು ಟೊಂಕಕಟ್ಟಿ ನಿಂತಿದ್ದಾರೆ.

ಆದಕ್ಕಾಗಿ ಪಕ್ಷದ ಸಂಘಟನೆಗೆಂದು ನಂಜನಗೂಡಿಗೆ[...] ಬಂದಿಳಿದ ಮಹದೇವಪ್ಪ ಪಟ್ಟಣದ ಕೆಎಚ್‌ಬಿ[...] ಕಾಲೋನಿಯಲ್ಲಿರುವ ತಮ್ಮ ಮನೆಯಲ್ಲಿ ಪಕ್ಷದ ಚಟುವಟಿಕೆ[...] ಪ್ರಾರಂಭಿಸಿದ್ದಾರೆ. ಸುನೀಲ್ ಬೋಸ್‌ನ ಕಟೌಟ್‌ಗಳು[...] ರಾರಾಜಿಸಲು ಶುರು ಮಾಡಿವೆ. ಇದನ್ನೆಲ್ಲ ನೋಡಿದರೆ[...] ಚುನಾವಣೆ ನಡೆದು ಫಲಿತಾಂಶ ಹೊರಬೀಳುವ ವೇಳೆಗೆ[...] ನಂಜನಗೂಡು ಇನ್ನೂ ಏನೇನೆಲ್ಲ ಹೈಡ್ರಾಮಾಗಳಿಗೆ[...] ಸಾಕ್ಷಿಯಾಗುತ್ತೋ ಗೊತ್ತಿಲ್ಲ.



ದಿಡ್ಡಳ್ಳಿ ಹೋರಾಟ

ಸರ್ಕಾರಕ್ಕೆ ಮಸಿ ಬಳಿಯುತ್ತಿದೆ ಅಧಿಕಾರ ವರ್ಗ

ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ ...ಡಗು ಜಿಲ್ಲೆಗೆ ಆಗಮಿಸುವ ವೇಳೆ ಅವರನ್ನು ಜಿಲ್ಲಾಡಳಿತ ...ರ ಮಾಡಿಕೊಂಡದ್ದು ಸೆಕ್ಷನ್ 144ನ್ನು ಜಾರಿಗೊಳಿಸುವ ...ೂಲಕ. ದಿಡ್ಡಳ್ಳಿಯ ಆದಿವಾಸಿಗಳ ಪರವಾಗಿ ಕೊಡಗು ...ಲ್ಲೆಯಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಭೂಮಿ ...ತ್ತು ವಸತಿ ವಂಚಿತರ ಹಕ್ಕು ಹೋರಾಟ ಸಮಿತಿಯ ...ತಿಯಿಂದ ದಿಡ್ಡಳ್ಳಿಯಲ್ಲಿ ಒಂದು ಸಭೆಯನ್ನು ...ಮ್ಮಿಕೊಳ್ಳಲಾಗಿತ್ತು. ಈ ಸಮಿತಿಯ ಪ್ರಮುಖರಾದ ...ೊರೆಸ್ವಾಮಿ ಮತ್ತು ಎ.ಕೆ.ಸುಬ್ಬಯ್ಯನವರು ಕಾರ್ಯಕ್ರಮದಲ್ಲಿ ...ಗವಹಿಸಿ, ಸರಕಾರವನ್ನು ಎಚ್ಚರಿಸುವ ಕಾರ್ಯಕ್ಕೆ ...ಸ್ಥತೆಯನ್ನು ಮಾಡಿಕೊಳ್ಳಲಾಗಿತ್ತು. ಫೆಬ್ರವರಿ 13ರಂದು ...ಡ್ಡಳ್ಳಿಯಲ್ಲಿ ಸಭೆ ಹಾಗೂ 14ರಂದು ಮಡಿಕೇರಿಯಲ್ಲಿ ...ಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವ ...ದ್ದೇಶ ಇಟ್ಟುಕೊಳ್ಳಲಾಗಿತ್ತು.

ಈ ಹಿಂದೆಯೂ ಜಿಲ್ಲಾಡಳಿತ ದಿಡ್ಡಳ್ಳಿಯಲ್ಲಿ ಪ್ರತಿಭಟನೆ ...ಸುವ ವೇಳೆಯಲ್ಲಿ, ಅದರಲ್ಲಿಯೂ ವಿಶೇಷವಾಗಿ ಸಮಾಜ ...ಲ್ಯಾಣ ಸಚಿವ ಆಂಜನೇಯರವರು ಜಿಲ್ಲೆಗೆ ಆಗಮಿಸುವ ...ನದಂದು ಸೆಕ್ಷನ್ 144ನ್ನು ಜಾರಿಗೊಳಿಸಿದ್ದರು. ಅವತ್ತು ...ವರು ಅಲ್ಲಿಗೆ ತೆರಳುವ ವೇಳೆಗೆ ಕೆಲವು ಗಂಟೆಗಳ ...ಲ ನಿಷೇಧಾಜ್ಞೆಯನ್ನು ಸಡಿಲಗೊಳಿಸಿದ್ದರು. ದಿಡ್ಡಳ್ಳಿ ಭಾಗಕ್ಕೆ ...ೊರಗಿನವರು ಯಾರೂ ಪ್ರವೇಶಿಸುವಂತೆ ಇಲ್ಲ ಎಂದು ...ಲ್ಲಾಡಳಿತ ಪ್ರಕಟಣೆಯನ್ನು ಹೊರಡಿಸಿತ್ತು.


ಸೆಕ್ಷನ್ 144ರ ಪ್ರಕಾರ ನಾಲ್ವರಿಗಿಂತ ಹೆಚ್ಚು ಜನ ...ನೂನುಬಾಹಿರವಾಗಿ ಗುಂಪು ಸೇರುವಂತೆ ಇಲ್ಲ, ಸಭೆ ...ಮಾರಂಭಗಳನ್ನು ನಡೆಸುವಂತೆ ಇಲ್ಲ ಮತ್ತು ...ರಕಾಸ್ತ್ರಗಳನ್ನು ಒಯ್ಯುವಂತೆ ಇಲ್ಲ ಎಂಬ ನಿಯಮ ...ದೆ. ಆದರೆ ಯಾವುದೇ ಪ್ರದೇಶಕ್ಕೆ ಭಾರತದ ಪ್ರಜೆಯೊಬ್ಬರು ...ೋಗಬಾರದು ಎಂಬ ನಿಯಮ ಸೆಕ್ಷನ್ 144ರಲ್ಲಿ ...ಲ್ಲ. ಆದರೆ ಕೊಡಗು ಜಿಲ್ಲಾಡಳಿತ ಇಂತಹ ನಿರ್ಬಂಧವನ್ನು ...ನೂನುಬಾಹಿರವಾಗಿ ಹೇರುವ ಮೂಲಕ ದಿಡ್ಡಳ್ಳಿಯನ್ನು ...ಂದು ರೀತಿಯ ಭಯೋತ್ಪಾದನಾ ಕೇಂದ್ರ ಎನ್ನುವಂತೆ ...ಬಿಸಲು ಪ್ರಯತ್ನಿಸಿತು. ಕೊನೆಗೆ ಇದಕ್ಕೆ ಅವರು ನೀಡಿದ ...ರಣ ಇಲ್ಲಿಗೆ ನಕ್ಸಲಿಯರು ನುಸುಳುವ ಸಾಧ್ಯತೆ ಇದೆ ...ಬುದಾಗಿತ್ತು. ರಾಜ್ಯ ಸರಕಾರದ ಆಶಯದಂತೆ ...ಖ್ಯವಾಹಿನಿಗೆ ಬಂದ ಶಂಕಿತ ನಕ್ಸಲರು ಎನಿಸಿಕೊಂಡ ...ಮನೆ ನಾಗರಾಜ್ ಮತ್ತು ನೂರ್ ಶ್ರೀಧರ್‌ರವರು ...ಪ್ರಜಾತಾಂತ್ರಿಕ ಹಾದಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದರೂ ...ಮಾಲೆ ಕಣ್ಣಿನ ಕೊಡಗು ಜಿಲ್ಲಾಡಳಿತಕ್ಕೆ ಅವರು ಇನ್ನೂ ...ಲಿಯರೇ ಆಗಿರುವುದು ಆಶ್ಚರ್ಯಕರವಾದ ವಿಚಾರ.

ಅಧಿಕಾರಶಾಹಿ ಹಾಗೂ ಭೂಮಾಲಿಕರ ಸಂಚು

ದಿಡ್ಡಳ್ಳಿಯಲ್ಲಿ ಆದಿವಾಸಿಗಳಿಗೆ ಜಮೀನು ನೀಡಬಾರದು ...ನ್ನುವ ಷಡ್ಯಂತ್ರ ಪ್ರಬಲವಾಗಿ ನಡೆಯುತ್ತಿದೆ. ದಿಡ್ಡಳ್ಳಿಯಲ್ಲಿ ...ತ್ರವಲ್ಲ, ಎಲ್ಲಿಯೂ ನಿರಾಶ್ರಿತರಿಗೆ, ಆದಿವಾಸಿಗಳಿಗೆ, ...ತರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಸರಕಾರಿ ಜಮೀನು ...ಬಾರದು ಎನ್ನುವುದು ಅಧಿಕಾರಿ ವರ್ಗದವರ ಮತ್ತು ...ಮಾಲಿಕರ ಸಂಚಾಗಿದೆ. ಇದರ ಒಂದು ಭಾಗವೇ ...ಡಗು ಜಿಲ್ಲೆಯ ದಿಡ್ಡಳ್ಳಿಯ ಹೋರಾಟಕ್ಕೆ ಪ್ರತಿರೋಧವನ್ನು ...ವಾಗುತ್ತಿರೋದು.

ಸಮಾಜ ಕಲ್ಯಾಣ ಸಚಿವ ಆಂಜನೇಯ ಹಾಗೂ ...ದಾಯ ಸಚಿವ ಕಾಗೋಡು ತಿಮ್ಮಪ್ಪನವರು ದಿಡ್ಡಳ್ಳಿ ...ೋರಾಟದ ಸಂದರ್ಭದಲ್ಲಿ ಕೊಡಗಿಗೆ ಆಗಮಿಸಿದ್ದರು. ...ಣ್ಯ ಇಲಾಖೆಯವರು ಮತ್ತು ಕಂದಾಯ ಇಲಾಖೆಯವರು ...ಳ್ಳಿಯ ಜಮೀನನ್ನು ಅರಣ್ಯ ಎಂದು ಪ್ರತಿಪಾದಿಸುತ್ತಿದ್ದು ...ಂದ ಅಲ್ಲಿಯ ನಿರಾಶ್ರಿತರಿಗೆ ಬದಲಿ ವ್ಯವಸ್ಥೆಯನ್ನು ...ಸಬೇಕು, ಹಾಗಾಗಿ ಸರಕಾರಿ ಜಮೀನು ಕೊಡಗಿನಲ್ಲಿ ...ದೆ ಎಂಬುದನ್ನು ಗುರುತಿಸಿ ಪಟ್ಟಿ ಮಾಡುವಂತೆ ...ಚಿಸಿದ್ದರು. ಆದರೆ ಅಧಿಕಾರಿಗಳು ಒಂದುಹೆಜ್ಜೆ ...ಂದೆಹೋಗಿ ಜಮೀನನ್ನು ಗುರುತಿಸುವುದು ಮಾತ್ರವಲ್ಲ, ...ಟರಿ ಮೂಲಕ ಆದಿವಾಸಿಗಳಿಗೆ ಹಂಚಿಕೆಯ ಕಾರ್ಯ ...ಕೂಡ ಮಾಡಿದರು. ಅದಕ್ಕೆ ದಿಡ್ಡಳ್ಳಿ ಆದಿವಾಸಿಗಳ ...ರೋಧ ಇದ್ದಾಗ್ಯೂ! ಇದು ವ್ಯವಸ್ಥಿತ ಸಂಚಾಗಿತ್ತು, ...ಡ್ಡಳ್ಳಿಯಲ್ಲಿ ಜಮೀನನ್ನು ನೀಡಲೇಬಾರದು ಎಂಬ ...ಮಾಲಿಕರ ಒತ್ತಡಕ್ಕೆ ಮಣಿದು, ಜಿಲ್ಲಾಡಳಿತ ...ಕೊಂಡ ಕ್ರಮ ಇದಾಗಿತ್ತು.

ಕೊಡಗು ಜಿಲ್ಲೆಯಲ್ಲಿ ಈ ಹೋರಾಟವನ್ನು ...ಂತವಾಗಿಡಲು ಪ್ರಯತ್ನಿಸುತ್ತಿರುವ ಸುಬ್ಬಯ್ಯನವರು ...ಡಳಿತದ ಈ ಕ್ರಮವನ್ನು ಖಂಡಿಸಿದ್ದಲ್ಲದೆ, ದಿಡ್ಡಳ್ಳಿಯ ...ವಾಸಿಗಳು ಲಾಟರಿ ಪ್ರಕ್ರಿಯೆಯಲ್ಲಿ ಪಾಲುದಾರರಾಗು ...ಲ್ಲ ಎಂದು ಬಹಿರಂಗ ಹೇಳಿಕೆ ನೀಡಿದ್ದರು. ಅಷ್ಟಾದರೂ ...ಡಳಿತ ಲಾಟರಿ ಮೂಲಕ ಫಲಾನುಭವಿಗಳನ್ನು ...ಗುರುತಿಸಿತ್ತು, ಜಿಲ್ಲಾಡಳಿತ ಗುರುತಿಸಿದ್ದ ಪ್ರದೇಶದಲ್ಲಿ ...ವುದೇ ಮೂಲಸೌಕರ್ಯಗಳಿಲ್ಲ ಮತ್ತು 577 ಕುಟುಂಬ ...ಹತ್ತು ಹಲವು ಕಡೆ ನಿವೇಶನ ಒದಗಿಸಬೇಕಾಗುತ್ತದೆ. ...ಯಾವುದೇ ಕಾರಣಕ್ಕೂ ಕಾರ್ಯಸಾಧುವಲ್ಲ, ಅಲ್ಲದೇ



ದಿಡ್ಡಳ್ಳಿಯಲ್ಲಿ ಜಮೀನು ನೀಡದೆ ಇರಲು ಯಾವುದೇ ಸಕಾರಣವಿಲ್ಲ ಎಂಬುದು ಸುಬ್ಬಯ್ಯನವರ ನಿಲುವಾಗಿತ್ತು. ಇದನ್ನು ಅವರು ಭೂಮಿ ಮತ್ತು ವಸತಿವಂಚಿತರ ಹಕ್ಕು ಹೋರಾಟ ಸಮಿತಿಯ ಮುಂದೆ ಪ್ರಸ್ತಾಪಿಸಿದ್ದರು. ಈ ಮುಂಚೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಸಲಾಗುವುದು ಎಂದು ತಿಳಿಸಿದ್ದರೂ ಈ ನಿಟ್ಟಿನಲ್ಲಿ ಪ್ರಗತಿ ಕಾಣದೇ ಇದ್ದುದರಿಂದ ದಿಡ್ಡಳ್ಳಿಯಲ್ಲಿಯೇ ಮತ್ತೊಂದು ಸುತ್ತಿನ ಪ್ರತಿಭಟನೆ ನಡೆಸುವುದಾಗಿ ಅವರು ತಿಳಿಸಿದ್ದರು.

ಈ ಹೋರಾಟ ಮತ್ತಷ್ಟು ಶಕ್ತಿಯುತವಾಗಿ ಆಗಬೇಕು ಮತ್ತು ಯಶಸ್ಸು ಕಾಣಬೇಕು ಎನ್ನುವ ಉದ್ದೇಶದಿಂದ ತೊಂಬತ್ತೊಂಬತ್ತರ ಇಳಿವಯಸ್ಸಿನ ಹಿರಿಯ ಗಾಂಧಿವಾದಿ ದೊರೆಸ್ವಾಮಿಯವರು ತಾನೇ ಖುದ್ದಾಗಿ ಕೊಡಗಿಗೆ ಭೇಟಿ ನೀಡಿ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಿ ಬಹಳ ದಿನಗಳ ಹಿಂದೆಯೇ ಪ್ರಕಟಿಸಿದ್ದರು. ದೊರೆಸ್ವಾಮಿಯವರು ಭೇಟಿ ನೀಡುತ್ತಾರೆ ಎಂದಾಗ, ಜಿಲ್ಲಾಡಳಿತ ಮತ್ತು ಸರಕಾರ ಎಚ್ಚೆತ್ತುಕೊಂಡು ಕ್ರಮಕ್ಕೆ ಮುಂದಾಗಬೇಕಾಗಿತ್ತು, ಆದರೆ ಕೊಡಗು ಜಿಲ್ಲಾಡಳಿತ ದೊರೆಸ್ವಾಮಿಯವರ ಭೇಟಿಯನ್ನು ಬಹಳ ಲಘುವಾಗಿ ತೆಗೆದುಕೊಂಡಿತ್ತು, ಅವರು ಕೂಡ ದಿಡ್ಡಳ್ಳಿಗೆ ಭೇಟಿ ನೀಡದಂತೆ ಸೆಕ್ಷನ್ 144ನ್ನು ಜಾರಿಗೊಳಿಸುವ ಮೂಲಕ, ತನ್ನ ಪಾಳೇಗಾರಶಾಹಿ ಧೋರಣೆಯನ್ನು ಜಿಲ್ಲಾಡಳಿತ ಪ್ರದರ್ಶಿಸಿದೆ.

ಕರ್ನಾಟಕದಲ್ಲಿ ಹೇಗೆ ಆಡಳಿತ ನಡೆಯುತ್ತದೆಂಬುದೇ ಅಚ್ಚರಿಯ ವಿಚಾರ. ಸರಕಾರಕ್ಕೂ, ಅಧಿಕಾರಿಗಳಿಗೂ ತಾಳಮೇಳವೇ ಇಲ್ಲದಂತಾಗಿದೆ. ಸ್ವತಃ ಮುಖ್ಯಮಂತ್ರಿಗಳೇ ಒಂದು ಹೇಳಿಕೆ ನೀಡಿದರೆ, ಅಧಿಕಾರಿ ವರ್ಗ ಅದಕ್ಕೆ ವಿರುದ್ಧ ರೀತಿಯಲ್ಲಿ ಕಾರ್ಯಾಚರಣೆಗಿಳಿಯುತ್ತೆ ಅಂದರೆ ಏನೆನ್ನಬೇಕು. ಕೊಡಗಿಗೆ ದೊರೆಸ್ವಾಮಿಯವರು ಭೇಟಿ ನೀಡುವಾಗ ಸೆಕ್ಷನ್ 144ನ್ನು ಜಾರಿಗೊಳಿಸುತ್ತಿರುವ ವಿಚಾರ ಗೃಹ ಇಲಾಖೆಗಾಗಲಿ ಅಥವಾ ಮುಖ್ಯಮಂತ್ರಿಗಳ ಗಮನಕ್ಕಾಗಲಿ ಬಂದಿರಲೇ ಇಲ್ಲವಂತೆ. ಏಕಾಏಕಿ ಜಿಲ್ಲಾಡಳಿತ ನಿಷೇಧಾಜ್ಞೆ ಹೇರಿತ್ತು, ಇದು ಮುಖ್ಯಮಂತ್ರಿಗಳ ಗಮನಕ್ಕೆ ಬರುತ್ತಿದ್ದಂತೆ ಜಿಲ್ಲಾಧಿಕಾರಿಗಳನ್ನು ಹಾಗೂ ಪೊಲೀಸ್ ವರಿಷ್ಠಾಧಿಕಾರಿಯವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಹಾಗಾಗಿ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ದೊರೆಸ್ವಾಮಿಯವರನ್ನು ಭೇಟಿಯಾಗಿ ಕ್ಷಮಾಪಣೆ ಕೇಳುವಂತಾದದ್ದು.

ರಸ್ತೆಯಲ್ಲೇ ತಡೆದರು..

ಫೆಬ್ರವರಿ 13ರಂದು ದೊರೆಸ್ವಾಮಿ ಮತ್ತು ಸುಬ್ಬಯ್ಯನವರು ಕುಶಾಲನಗರದಿಂದ ದಿಡ್ಡಳ್ಳಿಗೆ ತೆರಳುವಾಗ ಮಾಲ್ದಾರೆ ಬಳಿ ಅವರ ವಾಹನಗಳನ್ನು ತಡೆದು, ದಿಡ್ಡಳ್ಳಿಗೆ ಹೋಗುವಂತಿಲ್ಲ ಬೇಕಿದ್ದರೆ ದೊರೆಸ್ವಾಮಿ, ಸುಬ್ಬಯ್ಯ ಮತ್ತು ಯಾರಾದರೊಬ್ಬರು ಹೋಗಲು ಜಿಲ್ಲಾಡಳಿತ ಅನುಮತಿಯನ್ನು ನೀಡಿದೆ ಎಂದು ಅವರಿಗೆ ತಿಳಿಸಲಾಯಿತು. ಇದರಿಂದ ಸಿಟ್ಟಿಗೆದ್ದ ಸುಬ್ಬಯ್ಯನವರು "ಸೆಕ್ಷನ್ 144ನ್ನು ಮುರಿದು ಅಲ್ಲಿಗೆ ತೆರಳುವುದು ನಮಗೆ ಗೊತ್ತಿದೆ, ಆದರೆ ನಾವು ಹಾಗೆ ಮಾಡುವುದಿಲ್ಲ, ಯಾಕೆಂದರೆ ಕಾನೂನನ್ನು ಗೌರವಿಸುತ್ತೇವೆ" ಎಂದು ಎದುರುತ್ತರ ನೀಡಿ ಜಿಲ್ಲಾಡಳಿತಕ್ಕೆ ಮಂಗಳಾರತಿ ಎತ್ತಿದ್ದರು.

ದೊರೆಸ್ವಾಮಿಯವರು ಈ ಎಲ್ಲಾ ಕ್ರಮಗಳ ಬಗ್ಗೆ ಬಹಳ ಆಕ್ರೋಶವನ್ನು ವ್ಯಕ್ತಪಡಿಸಿದ್ದರು. "ಆದಿವಾಸಿಗಳ ಪರವಾಗಿ ನಾವು ಕೊಡಗಿಗೆ ಬಂದಾಗ, ಹೊರಗಿನವರು ಜಿಲ್ಲೆಗೆ ಬರಬಾರದು ಎಂದು ಭೂ ಮಾಲಿಕರು ಹೇಳಿಕೆ ನೀಡುತ್ತಾರೆ. ನಾವು ಭಾರತೀಯರು ಮತ್ತು ಕನ್ನಡಿಗರು. ಆದಿವಾಸಿಗಳ ಪರವಾಗಿ ಇಲ್ಲಿಗೆ ಬಂದಿದ್ದೇವೆ ಮತ್ತು ಭಾರತದ ಯಾವುದೇ ಭಾಗಕ್ಕೂ ನ್ಯಾಯದ ಪರವಾಗಿ ಹೋರಾಟ ಮಾಡಲು ಮುಂದಾಗುತ್ತೇವೆ. ಪ್ಲಾಂಟರ್‌ಗಳು ನಮ್ಮನ್ನು ಹೊರಗಿನವರು, ಹಾಗಾಗಿ ಬರಬಾರದು ಎಂದರೆ ಅವರೂ ಕೂಡ ಹೊರಗಿನವರೇ ಆಗಿದ್ದಾರೆ. ಅವರೂ ಕೂಡ ಅಲ್ಲಿಂದ ಹೋಗಲಿ" ಎಂದು ಸವಾಲು ಹಾಕಿದ್ದರು.

ಈ ನಡುವೆ ಮುಖ್ಯಮಂತ್ರಿಗಳು ಖುದ್ದಾಗಿ ದೂರವಾಣಿ ಮೂಲಕ ದೊರೆಸ್ವಾಮಿಯವರೊಂದಿಗೆ ಮಾತನಾಡಿ, ಪ್ರತಿಭಟನೆಯನ್ನು ಕೈಬಿಟ್ಟು ಬೆಂಗಳೂರಿಗೆ ಬರುವಂತೆ ಮನವಿ ಮಾಡಿದ್ದಲ್ಲದೆ, ಸೌಹಾರ್ದಯುತವಾಗಿ ಸಮಸ್ಯೆಯನ್ನು ಬಗೆಹರಿಸಲು ಉನ್ನತ ಮಟ್ಟದ ಸಭೆ ಕರೆಯುವುದಾಗಿ ತಿಳಿಸಿದ್ದರಿಂದ ಮಾರನೇ ದಿನ ಫೆಬ್ರವರಿ 14ರಂದು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನಡೆಸಬೇಕಿದ್ದ ಪ್ರತಿಭಟನೆಯನ್ನು ಕೈಬಿಡಲಾಯಿತು.

ಅರಣ್ಯ ಇಲಾಖೆಯ ಷಡ್ಯಂತ್ರ

ದಿಡ್ಡಳ್ಳಿಯಲ್ಲಿ ಅರಣ್ಯ ಇಲಾಖೆಯ ಅಕ್ರಮದಿಂದಾಗಿ ನಿರಾಶ್ರಿತರಾಗಿರುವವರಿಗೆ ಯಾವುದೇ ಕಾರಣಕ್ಕೂ ದಿಡ್ಡಳ್ಳಿಯಲ್ಲಿ ಜಮೀನನ್ನು ನೀಡಬಾರದು ಎನ್ನುವುದು ಸ್ಥಳೀಯ ಭೂ ಮಾಲಿಕರ ಹುನ್ನಾರವಾಗಿದೆ. ಇದಕ್ಕೆ ಭಯೋತ್ಪಾದನೆ, ನಕ್ಸಲ್ ಚಟುವಟಿಕೆ ಮುಂತಾದ ಹಣೆಪಟ್ಟಿಗಳನ್ನು ಕಟ್ಟಲಾಗುತ್ತಿದೆ. ಅರಣ್ಯ ಇಲಾಖೆ 577 ಕುಟುಂಬಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ ಬೀದಿಪಾಲು ಮಾಡಿದಾಗ, ಇದು ಅರಣ್ಯ ಪ್ರದೇಶ ಹಾಗಾಗಿ ತಾವು ತೆರವುಗೊಳಿಸಿದ್ದೇವೆ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿತ್ತು.


ಒಂದುವೇಳೆ ಆ ಪ್ರದೇಶ ಅರಣ್ಯವೇ ಆಗಿದ್ದರೂ ಕೂಡ, ಅವರಿಗೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು, ಆ ನಂತರವಷ್ಟೇ ಅವರನ್ನು ಅಲ್ಲಿಂದ ತೆರವುಗೊಳಿಸಬೇಕಾಗಿತ್ತು, ಹಾಗೆ ಮಾಡದೆ ಅರಣ್ಯ ಇಲಾಖೆ ಬದುಕುವ ಹಕ್ಕನ್ನು ಇಲ್ಲದಂತೆ ಮಾಡಿದ್ದರು. ಹಾಗಾಗಿಯೇ ಸುಬ್ಬಯ್ಯ ಮಧ್ಯಪ್ರವೇಶಿಸಿ, ಅಲ್ಲಿಯ ಆದಿವಾಸಿಗಳ ಪರವಾಗಿ ಧ್ವನಿ ಎತ್ತಿದ್ದರು.

ಅರಣ್ಯ ಇಲಾಖೆಯ ಹೇಳಿಕೆಯಲ್ಲಿ ಸುಬ್ಬಯ್ಯನವರಿಗೆ ನಂಬಿಕೆ ಇರಲಿಲ್ಲ, ಹಾಗಾಗಿ ಅವರು ಸಂಬಂಧಪಟ್ಟ ದಾಖಲೆ

▶▶ 13



ಭಾರತೀಯ ಮುಸಲ್ಮಾನರನ್ನು ಕುರಿತು ಎರಡು ಕವನಗಳು



ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರತೀಯ ಮುಸಲ್ಮಾನರನ್ನು ಕುರಿತು ಎರಡು ಕವನಗಳು ವೈರಲ್ ಆಗಿವೆ. ಮೊದಲನೆಯದು ಹುಸೇನ್ ಹೈದರಿ ಎಂಬ ಮುಂಬೈನ ಯುವಕವಿ ವಾಚಿಸಿದ 'ಹಿಂದೂಸ್ತಾನಿ ಮುಸಲ್ಮಾನ್' ಎಂಬ ಉರ್ದು ಕವನ. ಇದು ಕೆಲವೇ ದಿನಗಳಲ್ಲಿ ಎಲ್ಲರ ಗಮನ ಸೆಳೆಯಿತು. ಅದು ಒಂದು ರೀತಿಯಲ್ಲಿ ಭಾರತೀಯ ಮುಸಲ್ಮಾನರು ಎಂಥವರು ಎಂದು ವಿವರಿಸುವ ಕವನ.

ಕೆಲ ದಿನಗಳಲ್ಲಿ ಇನ್ನೊಂದು ಕವನವೂ ಹೊರಬಿತ್ತು. ಚೆನ್ನೈ ಮೂಲದ, ಆದರೀಗ ಜಪಾನಿನಲ್ಲಿ ವಾಸಿಸುತ್ತಿರುವ, ಅಬ್ದುಲ್ ಕಲಂ ಆಜಾದ್ ಎಂಬುವವರು ಬರೆದಿರುವ 'ನಾಟ್ ಯುವರ್ ಹಿಂದೂಸ್ತಾನಿ ಮುಸಲ್ಮಾನ್' ಎಂಬ ಇಂಗ್ಲಿಷ್ ಕವನ. ಆಜಾದ್ ಅವರ ಕವನ ಹುಸೇನ್ ಹೈದರಿ ಅವರ ಕವನಕ್ಕೆ ಪ್ರತಿಕ್ರಿಯೆ ಆಗಿದ್ದು, ಭಾರತದ ಮುಸಲ್ಮಾನರ ವಾಸ್ತವ ಸ್ಥಿತಿಗತಿಗಳನ್ನು ಸೆರೆಹಿಡಿಯುವ ಕವನ.

ಈ ಎರಡೂ ಕವನಗಳನ್ನು 'ಪತ್ರಿಕೆ'ಗೆ ಅನುವಾದ ಮಾಡಿಕೊಡುತ್ತೇನೆಂದು ಹೇಳಿದ್ದ ಮಿತ್ರ ಶಶಿಧರ ಹೆಮ್ಮಾಡಿ ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ನಮ್ಮ ಫೋನ್ ಕರೆಗಳಿಗೆ ಸಿಗದೆ ತಲೆತಪ್ಪಿಸಿಕೊಂಡರು. ಕೂಡಲೇ ಮತ್ತೊಬ್ಬ ಮಿತ್ರ ಸಂವರ್ತ ಸಾಹಿಲ್ ಹೈದರಿ ಅವರ ಉರ್ದು ಕವನವನ್ನು ಅನುವಾದಿಸಿ ಕಳುಹಿಸಿದರು. ಸಂಪಾದಕಿ ಗೌರಿ ಲಂಕೇಶರು ಆಜಾದ್ ಅವರ ಕವನವನ್ನು ಅನುವಾದಿಸಿದ್ದಾರೆ. ಇಲ್ಲಿ ಎರಡನ್ನೂ ನಮ್ಮ ಓದುಗರಿಗೆ ಕೊಡುತ್ತಿದ್ದೇವೆ.

ಹುಸೇನ್ ಹೈದರಿ ಅವರ 'ಹಿಂದೂಸ್ತಾನಿ ಮುಸಲ್ಮಾನ' ಕವಿತೆ

ರಸ್ತೆ ಬದಿಯಲ್ಲಿ ನಿಂತು
ಸಿಗರೇಟ್ ಸೇದುವ ಹೊತ್ತು
ಅಜಾನ್ ಕೇಳಿ ತಿಳಿಯಿತು
ಸಮಯ ಎಷ್ಟಾಯಿತು ಎಂದು
ಮನಸ್ಸಲ್ಲಿ ಮೂಡಿತು ಪ್ರಶ್ನೆ
ನಾನು ಎಂತಾ ಮುಸಲ್ಮಾನ?

ಶೀಯಾವೋ ಇಲ್ಲ ಸುನ್ನಿಯೋ,
ಖೋಜಾನೋ ಇಲ್ಲ ಬೊಹರಿಯೋ
ಹಳ್ಳಿಯವನೋ ಪಟ್ಟಣದವನೋ
ವಿದ್ರೋಹಿಯೋ ಸೂಫಿಯೋ
ಧಾರ್ಮಿಕನೋ ಇಲ್ಲಾ ಢೋಂಗಿಯೋ
ನಾನು ಎಂತಾ ಮುಸಲ್ಮಾನ?
ನಾನು ಎಂತಾ ಮುಸಲ್ಮಾನ?

ಸಜ್ದ ಮಾಡುವಾತನೋ
ಜಟ್ಕ ತಿನ್ನುವಾತನೋ
ಟೋಪಿ ತೊಡುವಾತನೋ
ಗಡ್ಡ ಬೋಳಿಸುವಾತನೋ
ಆಯಸ್ ಎದೆಗೆ ಒತ್ತಿ ಓದುವವನೋ
ಸಿನಿಮಾ ಹಾಡು ಹಲುಬುವಾತನೋ

ಅಲ್ಲಾಹು ನಾಮ ಸ್ಮರಿಸುವವನೋ
ಧರ್ಮ ಗುರುವಿನೊಂದಿಗೆ ಜಗಳವಾಡುವವನೋ
ಎಂತಾ ಮುಸಲ್ಮಾನ ನಾನು
ಎಂತಾ ಮುಸಲ್ಮಾನ ನಾನು?

ಹಿಂದೂಸ್ತಾನಿ ಮುಸಲ್ಮಾನ ನಾನು
ದಕನ್‌ನಿಂದ ಬಂದವನು
ಯುಪಿಯಿಂದ ಬಂದವನು
ಭೋಪಾಲ್, ದಿಲ್ಲಿಗೆ ಸೇರಿದವನು
ಕಾಶ್ಮೀರಿ, ಗುಜರಾತ್ ಮೂಲದವನು
ಉಚ್ಚ ನೀಚ ಜಾತಿಗೆ ಸೇರಿದವನು
ನಾನು ನೇಕಾರನೂ, ನಾನು ಮೋಚಿಯೂ
ಡಾಕ್ಟರ್ ಸಹ ಆಗಿರುವೆ
ದರ್ಜಿಯೂ ಆಗಿರುವೆ.

ನನ್ನೊಳಗೆ ಗೀತೆಯ ಸಾರವಿದೆ
ಉರ್ದು ಪತ್ರಿಕೆಯ ಸಾಲುಗಳಿವೆ
ಒಂದು ತಿಂಗಳು ರಂಜಾನ್ ನನಗೆ
ನಾನು ಗಂಗೆಯಲ್ಲೂ ಮಿಂದಿರುವೆ.

ಮನಸ್ಸಿಚ್ಛೆಯಂತೆ ಬದುಕುತ್ತೇನೆ
ಸಿಗರೇಟ್ ಸೇದುತ್ತೇನೆ
ಮದಿರೆ ಸೇವಿಸುತ್ತೇನೆ
ಯಾವ ನಾಯಕನಿಗೂ ನಾನು ಗುಲಾಮನಲ್ಲ
ಯಾವ ಪಾರ್ಟಿಗೂ ನಾನು ಸೇರಿದವನಲ್ಲ

ಖೂನಿ ದರ್ವಾಜ ನನ್ನ ಒಳಗಿದೆ
ಒಂದು ಒಗಟು ನಾನು
ಬಾಬ್ರಿಯ ಒಂದು ಗುಮ್ಮಟ ನಾನು
ಊರಿನ ಒಳಗೆ ಒಂದು ಸರಹದ್ದು ನಾನು
ಜೋಪಡಿಯಲ್ಲಿ ಬದುಕುವ ಬಡತನ ನಾನು
ಮದರಸಗಳ ಮುರಿದ ಮಾಳಿಗೆ ನಾನು
ದಂಗೆಗಳಲ್ಲಿ ಉರಿದ ಬೆಂಕಿ ನಾನು
ಕುರ್ತಾದ ಮೇಲಿನ ರಕ್ತದ ಕಲೆ ನಾನು
ಹಿಂದೂಸ್ತಾನಿ ಮುಸಲ್ಮಾನ ನಾನು
ಹಿಂದೂಸ್ತಾನಿ ಮುಸಲ್ಮಾನ ನಾನು.


ಮಂದಿರದ ಹೊಸ್ತಿಲು ನನ್ನದು
ಮಸೀದಿಯಲ್ಲಿ ನಮಾಜಿನ ದಿಕ್ಕು ನನ್ನದು
ಗುರುದ್ವಾರದ ದರ್ಬಾರು ನನ್ನದು
ಏಸುವಿನ ಇಗರ್ಜಿ ನನ್ನದು.

ನೂರರಲ್ಲಿ ಹದಿನಾಲ್ಕು ಮಾತ್ರವಾದರೂ
ಕಡಿಮೆ ಏನಲ್ಲ ಈ ಹದಿನಾಲ್ಕು
ನೂರರಲ್ಲಿ ಒಂದಾಗಿರುವೆ
ನೂರು ನನ್ನಲ್ಲೊಂದಾಗಿದೆ
ಒಂದೇ ದೃಷ್ಟಿಯಲ್ಲಿ ನೋಡಬೇಡ ನನ್ನನ್ನು
ಒಂದಲ್ಲ ನೂರು ಮುಖವಿದೆ ಇಲ್ಲಿ
ನೂರು ಬಣ್ಣ ಹೊತ್ತ ಪಾತ್ರ ನನ್ನದು
ನೂರು ಶಾಹಿಯಲ್ಲಿ ಬರೆದ ಕತೆ ನನ್ನದು
ನಾನು ಎಷ್ಟು ಮುಸಲ್ಮಾನನೋ
ಅಷ್ಟೇ ಹಿಂದೂಸ್ತಾನಿಯೂ

ಹಿಂದೂಸ್ತಾನಿ ಮುಸಲ್ಮಾನ ನಾನು
ನಾನೊಬ್ಬ ಹಿಂದೂಸ್ತಾನಿ ಮುಸಲ್ಮಾನ.

■ ಕನ್ನಡಕ್ಕೆ: ಸಂವರ್ತ ಸಾಹಿಲ್





ಅಬ್ದುಲ್ ಕಲಂ ಆಜಾದ್ ಅವರ 'ನಾಟ್ ಯುವರ್ ಹಿಂದೂಸ್ತಾನಿ ಮುಸಲ್ಮಾನ್' ಕವನ

ಬಂಧನಕ್ಕೊಳಗಾಗಿರುವ ನನ್ನ ನಾಲಿಗೆಯ
ರಂಧ್ರಗಳನ್ನು ಮೂತ್ರ ತುಂಬುತ್ತಿದೆ
ಬಂದೀಖಾನೆಯ ಗೋಡೆಗಳಡಿ
ಇರುವ ರಂಧ್ರಗಳ ಮೂಲಕ ಅಜಾನ್ ತೂರಿಬಂದಾಗ.

ಮುಸಲ್ಮಾನನಾದ ನನ್ನ ಗಡಿಯಾರ ಸ್ಥಗಿತಗೊಳ್ಳುತ್ತದೆ
ನನ್ನ ವಿರುದ್ಧ ಜಡಿದಿರುವ ಭಯೋತ್ಪಾದನೆ ಕೇಸುಗಳಡಿ.
ತೃತೀಯ ಮಟ್ಟದ ಖೋಲಿಗಳಿಂದ
ಬರುವ ಅನುರಣನಗಳಿಗೆ ನನ್ನ ಕಿವಿಗಳು ಮರಗಟ್ಟಿವೆ.

ನನ್ನ ಮೂಳೆಗಳು
ದಾದ್ರಿಯ ಇಟ್ಟಿಗೆಗಳಿಗೆ ಮೇವಾಗಿವೆ.
ನನ್ನ ಭ್ರೂಣ ಗುಜರಾತಿನ
ತ್ರಿಶೂಲಗಳಿಗೆ ಕಿರೀಟವಾಗಿದೆ.
ಹಶೀಮಪುರದಲ್ಲಿ ಉರುಳಿದ ತಲೆಗಳಿಗೆ
ನನ್ನ ಹಸ್ತಗಳು ಎತ್ತಿದ ದಿಂಬುಗಳಾಗಿವೆ.

ನಾನೆಂತಹ ಮುಸಲ್ಮಾನನೆಂದರೆ
ನೆರೆಹೊರೆಯ ದೇವಾಲಯಗಳ
ಧ್ವನಿವರ್ಧಕಗಳಿಂದ ಹಾವಿನಂತೆ
ಸುರುಳಿಕೊಂಡು ಹಬ್ಬಿರುವ ಕಪ್ಪುತಂತಿಯನ್ನು
ನನ್ನ ಉಸಿರಾಟ ಅವಲಂಬಿಸಿದೆ.

ನನ್ನ ಪಾದಗಳು ಎಂದೂ ಗಂಗೆಯ ತುಟಿಗಳನ್ನು ಮುಟ್ಟಲಿಲ್ಲ
ಯಾಕೆಂದರೆ ನಾನು ಅಸುರರೊಂದಿಗೆ ದನದ ಮಾಂಸ ತಿನ್ನುತ್ತಿದ್ದೆ
ನನ್ನ ಕಣ್ಣುಗಳು ಎಂದೂ ಗೀತೆಯನ್ನು ಓದಲಿಲ್ಲ,
ಯಾಕೆಂದರೆ ಅವರು ಏಕಲವ್ಯರ ಹೆಬ್ಬೆಟ್ಟುಗಳಿಗೆ
ಹುಡುಕಾಡುತ್ತಿದ್ದರು.

ನಾನೆಂತಹ ಮುಸಲ್ಮಾನನೆಂದರೆ,
ಮನುಸ್ಮೃತಿಯ ಪುಟಗಳ ನಡುವೆ
ಅಸ್ಪೃಶ್ಯರ ಬೆರಳುಗಳು ಮುರಿದಾಗ
ನನ್ನ ಮುಷ್ಟಿ ಮೊದಲು ಬಿಗಿಗೊಳ್ಳುತ್ತದೆ.
ನನ್ನ ಪ್ರೇಮಿ ನಾಪತ್ತೆಯಾಗುತ್ತಾಳೆ
ಶವಗಳ ಗಿಡಗಂಟೆಗಳ ನಡುವೆ
ಹೆಸರು ಮತ್ತು ಕಥೆಗಳು ಇಲ್ಲದೆ
ಝೀಲಂ ನದಿಯ ಗರ್ಭದಲ್ಲಿ.

ನಾನು ಆ ಮುಸಲ್ಮಾನ...
ಆಕ್ರಮಿತ ರಾತ್ರಿಗಳಲ್ಲಿ
ಸಿಡಿದ ಕೋವಿಮದ್ದಿನ ವಾಸನೆ
ಇನ್ನೂ ನನ್ನ ಕಿಟಕಿಯ ಗಾಜಿಗೆ ಅಂಟಿಕೊಂಡಿದೆ.

ಮೂರು ತಲೆಯ ಧ್ವಜಗಳು
ತಮ್ಮ ಕೇಸರಿ ಕೋರೆಹಲ್ಲುಗಳನ್ನು
ನನ್ನ ತುಟಿಗಳಿಗೆ ತಿವಿಯುತ್ತಿವೆ
ಅವರ ಗೀತೆಗಳನ್ನು ಅನುಕರಿಸಬೇಕೆಂದು.

ಆಗಂತುಕನೊಬ್ಬ ಯಾವುದೋ
ಗ್ರಹದಲ್ಲಿ ಬಾಂಬ್ ಸ್ಫೋಟಿಸಿದಾಗ
ನನ್ನ ಗಡ್ಡ ಹಿಡಿದು
ಭಯದಿಂದ ಗಡಗಡ ನಡುಗುವ ಮುಸಲ್ಮಾನ ನಾನು

ಪ್ರತಿ ಮನೆ ಮಾಲೀಕ
ಓಡಿಸುವ ಬಾಡಿಗೆದಾರ ನಾನು
ಪ್ರತಿ ಗಡಿಯಲ್ಲಿ ತಿರಸ್ಕೃತನಾಗುವ
ನಿರಾಶ್ರಿತ ನಾನು.

ನಾನು ನಿಮ್ಮ ಹಿಂದೂಸ್ತಾನಿ ಮುಸಲ್ಮಾನನಲ್ಲ
ಆ ಬಾಗಿಲನ್ನು ನಾನು ಬಲವಂತದಿಂದ ತಟ್ಟಬೇಕಿದೆ
ಆ ಬಾಗಿಲು ಎಂದೂ ತೆರೆಯುವುದೇ ಇಲ್ಲ.

ನಾನು ನಿಮ್ಮ ಹಿಂದೂಸ್ತಾನಿ ಮುಸಲ್ಮಾನನಲ್ಲ
ಯಾಕೆಂದರೆ ನಾನು ಕೊಲ್ಲಲ್ಪಡುತ್ತೇನೆ
ಹಿಂದೂಸ್ತಾನಿ ಮುಸಲ್ಮಾನನಲ್ಲ ಎಂಬ ಕಾರಣಕ್ಕೆ.
ನಾನು ನಿಮ್ಮ ಹಿಂದೂಸ್ತಾನಿ ಮುಸಲ್ಮಾನನಲ್ಲ,
ನಾನು ನಿಮ್ಮ ಹಿಂದೂಸ್ತಾನಿ ಮುಸಲ್ಮಾನನಲ್ಲ

■ ಕನ್ನಡಕ್ಕೆ: ಗೌರಿ ಲಂಕೇಶ್

ಥೂತ್ತೇರಿ

ಯಾಹೂ

...ದ್ದರಾಮಯ್ಯನ ವಿರುದ್ಧ ಪ್ರತಿಭಟನೆ ಮಾಡ್ರಿ!

...ಮಂಡ್ಯದಲ್ಲೊಂದು ಜಿಲ್ಲಾ ಸಾಹಿತ್ಯ ಸಮ್ಮೇಳನ. ... ನಡೆಸಿದವನು ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ ...ಲಾಪುರ. ಈತ ಸಾಹಿತ್ಯ ಸಮ್ಮೇಳನ ನಡೆಸಲು ... ಎತ್ತುವಳಿ ನೋಡಿದ ಮಂಡ್ಯದ ಎತ್ತುವಳಿ ಜನಗಳೇ ...ಬಡಿದು ಹೋದರಂತಲ್ಲಾ. ನೋಡಲು ಬಾಟಂ ... ಜೆಡಿಎಸ್ ಲೀಡರಂತೆ ಕಾಣುವ ಈತ, ಸಮ್ಮೇಳನ ...ಟನೆಗೆಂದು ಕರೆದದ್ದು ಜೆಡಿಎಸ್ ರಾಜ್ಯಾಧ್ಯಕ್ಷರಾದ ...ರಸ್ವಾಮಿಯವರನ್ನು. ಸದ್ಯ ಕುಮಾರಣ್ಣ ಈತನ ಆಳ ... ಅರಿತವರಂತೆ ಉದ್ಘಾಟನೆಗೆ ಕೈಕೊಟ್ಟರು. ಇನ್ನ ... ವಾಸನೆ ಅರಿತವರಂತೆ ಆದಿಚುಂಚನಗಿರಿ ...ಧ್ಯಕ್ಷರಾದ ನಿರ್ಮಲಾನಂದರೂ ಅತ್ತ ಸುಳಿಯಲಿಲ್ಲ, ...ಗಿರಿ ಹೋದ ಅವಮಾನದಲ್ಲೇ ಕುಸಿದಿರುವ ಅಂಬಿ ...ಲ್ಲಿ ಕಾಣುವುದೇ ಇಲ್ಲ. ಮನು ಬಳಿಗಾರ್ ಭೈರಪ್ಪನ ...ುರಿ ಓದುತ್ತ ಕುಳಿತ್ತಿದ್ದಾರೆ. ಇಂತ ಘಟಾನುಘಟಿಗಳ ...ಹಾಜರಿ ಅರಿತವರಂತೆ, ಗೋಷ್ಠಿಗೆ ಬರಬೇಕಾಗಿದ್ದ ...ಕೀಕರು ಬರಲೇಯಿಲ್ಲ, ಆದರೇನು ಬರದೇ ಇದ್ದವರ ...ಗೆ ಪಿಂಜರಾಪೋಲುಗಳನ್ನೇ ನೇಮಿಸಿಕೊಂಡು, ...ಗಳನ್ನು ಎಲ್ಲಿ ಉಳಿದುಕೊಂಡಿದ್ದೀರಿ, ನಿಮ್ಮ ವ್ಯವಸ್ಥೆ ... ಎಂದು ವಿಚಾರಿಸದೆ ಬಾಯಿಬಿಟ್ಟು ಕೇಳಿದವರಿಗೆ ಸಂಭಾವನೆ ಕೊಟ್ಟರಂತಲ್ಲಾ, ಥೂತ್ತೇರಿ!

***


...ಮ್ಮೇಳನದ ಮೆರವಣಿಗೆ ಮಜಾ ಎಂದರೆ, ಈ ...ಎಲ್ಲ ಜವಾಬ್ದಾರಿ ಬಿಟ್ಟು, ಮೂರು ಸಾರೋಟುಗಳನ್ನು ...ರಿಸಿ, ಅದರಲ್ಲಿ ಅಂಡ ಬಂಡ ಕುದುರೆಯ ...ಟಿನಲ್ಲಿ ತಾನು ಕುಳಿತು, ಸುತ್ತಲೂ ಕೈಮುಗಿದದ್ದು, ... ನೋಡಿದ ಮಂತಿಕೆ ನೀಡಿದ ಜನಗಳು ಒಳಗೊಳಗೇ "ನಮ್ಮ ದುಡ್ಡು ಹೋದರೆ ಕತ್ತೆ ಬಾಲ ಕುದುರೆ ... ಇಂತ ಮಜವಾದ ದೃಶ್ಯ ನೋಡಲು ಸಿಗುತ್ತಿತ್ತೇ" ... ಚಪ್ಪಾಳೆ ಹೊಡೆದವಂತಲ್ಲಾ. ಇನ್ನು ಮನರಂಜನೆ ... ಮೈಸೂರಿನಿಂದ ಬಂದಿದ್ದ ರಂಗಾಯಣ ನಾಟಕ ... ಸಮ್ಮೇಳನ ನಡೆಸುವವರ ಅನಾಗರಿಕ ನಡವಳಿಕೆ ... ಬಂದ ದಾರಿಯಲ್ಲೇ ಓಡಿಹೋದರಂತಲ್ಲಾ, ...ರಿ!

***

...ತ್ತ ಆದಿ ಚುಂಚನಗಿರಿ ಪೀಠಾಧ್ಯಕ್ಷರು ಪೀಠವೇರಿ ... ವರ್ಷಗಳಾದವು. ಅದಕ್ಕಾಗಿ ಜ್ಞಾನವಿಜ್ಞಾನ ತಂತ್ರಜ್ಞಾನದ ಮೇಳ ಮಾಡಿ ಅಭಿನಂದನೆ ಸಲ್ಲಿಸುವುದು ಅರ್ಥಪೂರ್ಣ. ಆದರೆ ಇಂತಹ ಸಮ್ಮೇಳನಕ್ಕೆ ಚಕ್ರವರ್ತಿ ಸೂಲಿಬೆಲೆ ಎಂಬ ಪುರೋಹಿತರ ಪಿಂಡ ಕರೆಸಿ ಮಾತನಾಡಿಸುವುದು ಮಾತ್ರ ಚುಂಚನಗಿರಿ ಮಠದವರ ಬೌದ್ಧಿಕ ದಾರಿದ್ರ್ಯವನ್ನು ಅನಾವರಣ ಮಾಡುವಂತದ್ದು. ಆನೆ ತಲೆಗೆ ಮನುಷ್ಯ ದೇಹ ಸೇರಿಸಿ ಹೊಲಿದು ವಾಸಿ ಮಾಡಿ ಮಾನವ-ಮೃಗದ ಸರ್ಜರಿ ನಡೆಸುವಲ್ಲಿ ಎಕ್ಸ್‌ಪರ್ಟ್‌ಗಿದ್ದರು ನಮ್ಮ ಪೂರ್ವಜರು ಎಂದು ಬೊಗಳುವ ಮೋದಿ ಪ್ರಿಯನಾದ ಈತ ಅದನ್ನೇ ಬೊಗಳುವಂತವನು. ಅಂತವನನ್ನು ವಿಜ್ಞಾನ ಮೇಳಕ್ಕೆ ಕರೆಸಿ ಜನಗಳಿಗೆ ಅವಮಾನ ಮಾಡುವ ಈ ಚುಂಚನಗಿರಿ ಜನಕ್ಕೆ ಮಠದ ಏಳ್ಗೆಗಾಗಿ ದುಡಿದವರು, ಶೂದ್ರ ಮಠವೆಂದು ಕೊಂಡಾಡುವವರು, ಅಲ್ಲದೆ ತಮ್ಮ ತನುಮನ ಧನವನ್ನರ್ಪಿಸಿದವರ ಮಕ್ಕಳಲ್ಲಿ ಯಾರೂ ಭಾಷಣ ಮಾಡಲು ಯೋಗ್ಯರಾಗಿ ಕಾಣಿಸದಿದ್ದುದೊಂದು ವಿಪರ್ಯಾಸವಂತಲ್ಲಾ, ಥೂತ್ತೇರಿ!

***

ಸಿದ್ದರಾಮಯ್ಯನ ಸರಕಾರದ ವಿರುದ್ಧ ಸುಳ್ಳು ಆಪಾದನೆ ಹೊರಿಸಿ ಅದನ್ನೆ ಮುಂದಿನ ಚುನಾವಣೆಯವರೆಗೂ ಬೊಗಳುತ್ತ ಸತ್ಯ ಮಾಡಲು ಹೊರಟಿದ್ದ ಯಡ್ಡಿ ತಂತ್ರ



ತಿರುಮಂತ್ರವಾಯಿತಂತಲ್ಲಾ. ಕೂಡಲೇ ಚೆಡ್ಡಿ ವಕೀಲರು ಅದು ಕಾಂಗ್ರೆಗಳೇ ತಯಾರಿಸಿದ ಸಿಡಿ ಎನ್ನುತ್ತಿವೆಯಂತಲ್ಲಾ. ಕೆಲವು ತನಿಖೆಯಾಗಿ ಹೋಗಲಿ ಎಂದು ಹೇಳುತ್ತಿರುವ ಗುಂಪಿನಲ್ಲಿ ಈಶ್ವರಪ್ಪನ ದನಿಯೇ ಜೋರಾಗಿ ಕೇಳುತ್ತಿದೆಯಂತಲ್ಲಾ. ಅದನ್ನ ಕೇಳಿಸಿಕೊಂಡ ಯಡ್ಡಿ ಕಡೆಯವರು "ಅಕಸ್ಮಾತ್ ಯಡ್ಡಿ ಅಪರಾಧಿ ಎಂದು ಸಾಬೀತಾಗುವುದೇ ಬೇಕಿದೆ ಈ ಈಶ್ವರಪ್ಪನಿಗೆ. ಅದಕ್ಕಾಗಿಯೇ ಗಂಟಲು ಹರಿದುಕೊಳ್ಳುತ್ತಿರುವುದು" ಎಂದು ಅಳುಕಿನಿಂದಲೇ ನಿಂದಿಸಿದವಂತಲ್ಲಾ. ಅದೇನಾದರಾಗಲಿ "ಯಡ್ಡಿಗೆ ಜೈಲುವಾಸ ಎಷ್ಟು ಆಘಾತ ನೀಡಿದೆಯೆಂದರೆ ಕರ್ನಾಟಕದಿಂದ ಮತ್ತೆ ಯಾರಾದರೂ ಜೈಲಿಗೆ ಹೋದಾಗಲೇ ತನ್ನ ಸಾಧನೆಗೆ ಸರಿಗಟ್ಟಿದ ಸಮಾಧಾನವಾಗುವುದು. ಆದ್ದರಿಂದ ಅವರ ಬಾಯಿಂದ ಜೈಲೆಂಬ ಸರಳು ಪುರಾಣ ಆಗಾಗ್ಗೆ ಹೊರಬರುತ್ತಿರುವುದು" ಎಂದು 'ದಿನೇಶ್ ಗುಂ' ಪಟಾಲಂ ಹೇಳುತ್ತಿದೆಯಂತಲ್ಲಾ. ದಿನೇಶ್ ಗುಂ "ಯಡಿಯೂರಪ್ಪನಿಗೆ ಮಾನಸಿಕ ಸಮತೋಲನ ಹಾಳಾಗಿ ಹೋಗಿದೆ. ಯಾರಾದರೂ ಮನೋವೈದ್ಯರಿಂದ ಪರೀಕ್ಷಿಸಲಿ" ಎಂಬ ಅಭಿಪ್ರಾಯ ವ್ಯಕ್ತವಾದ ಕೂಡಲೇ ಶಿವಮೊಗ್ಗದಲ್ಲಿ ಇದ್ದ ಒಬ್ಬ ಅಶೋಕ ಪೈ ಎಂಬ ಮನೋವೈದ್ಯ ಸ್ಕಾಟ್‌ಲ್ಯಾಂಡಿನ ಮೇಲೆ ಮೂರು ದಿವಸ ಹೆಣವಾಗಿ ಮಲಗಿ ಕಡೆಗೂ ಮರಳಿ ಬಂದು ಮಣ್ಣಾದರು. ಯಡ್ಡಿ ಕಾಯಿಲೆಗೆ ತಕ್ಕ ವೈದ್ಯರಾದ ಪೈ ನಿರ್ಗಮನದ ಫಲವಾಗಿ ಸದ್ಯಕ್ಕೆ ಯಡ್ಡಿ ಈ ಸ್ಥಿತಿಯಲ್ಲೇ ಕಾಲ ಹಾಕಬೇಕಾಗಿದೆಯಲ್ಲಾ, ಥೂತ್ತೇರಿ!!

***

ನಮ್ಮ ಪಬ್ಲಿಕ್ ಟಿವಿ ಕಡ್ಡಿ ರಂಗನನ್ನು ನೋಡಿದ ಕೂಡಲೇ ಸದಾನಂದ ಗೌಡರಿಗೆ ಚೆಡ್ಡಿ ನೋಡಿದಂತಾಗಿ ಕಿವಿಯವರೆಗೂ ಬಾಯಗಲಿಸಿ "ನೀವು ಯಾಕೆ ನಮ್ಮ ಪಾರ್ಟಿ ಸೇರಬಾರದು" ಎಂದುಬಿಟ್ಟರಂತಲ್ಲಾ, ಹೌಹಾರಿದ ರಂಗ ಪುನಃ ಸೇರುವುದೇ ಎಂದು ನಕ್ಕಾಗ, ರಮಾ ಸೋರೇಗೌಡ ಕೂಡ ಶೋಬಕ್ಕನಂತೆ ನಕ್ಕರಂತಲ್ಲಾ. ಕರ್ನಾಟಕದ ಜಗಳಗಂಟ ಸಮುದಾಯದ ಮನಸೂರೆಗೊಂಡಿರುವ ಈ ಜೋಡಿ ಮಾತನಾಡಿಸಿದರೆ ಹೇಗೆ ಎಂದು ಫೋನ್ ಮಾಡಲಾಗಿ ರಿಂಗಾಯ್ತು:

ರಿಂಗ್‌ಟೋನ್: "ನಾನೇ ಭೂಪತಿ ರಂಗ, ಕಡ್ಡಿಯ ಆಡಿಸಿ, ಕೂದಲ ಸೀಳುತ, ತಲೆಗುಳ ಬಿಡುವ ಭೂಪತಿ ರಂಗ..."

"ಹಲೋ?"

"ಹಲೋ ಸಾರ್. ನಾನು ನಿಮ್ಮ ಅಭಿಮಾನಿ ಯಾಹು ಸಾರ್."

"ಎಲ್ಲಿಂದ ಮಾತಾಡ್ತಿರಿ?"

"ಬಾಯಿಂದ ಸಾರ್."

"ರಿ, ಯಾವೂರಿಂದ ಅಂತ ಕೇಳಿದ್ದು."

"ಇಲ್ಲೇ ರಂಗಾಪುರದಿಂದ ಸಾರ್."

"ಏನಾಗಬೇಕಾಗಿತ್ತು ನಮ್ಮಿಂದ?"

"ಕುಡಿಯಕ್ಕೆ ನೀರಿಲ್ಲ ಸಾರ್."

"ಸಿದ್ದರಾಮಯ್ಯನ ಸರಕಾರಕ್ಕೆ ಉಗಿಬೇಕು ಕಂಡ್ರಿ ನೀವ್ಗೂ. ನಮಿಗೆ ಫೋನ್ ಮಾಡ್ತಿರಲ್ಲಾ."

"ನೀವೇ ಏನಾರ ಮಾಡಿ ಸಾರ್."

"ಆ ಎಚ್ಕೆ ಪಾಟೀಲರಿಗೇಳ್ತಿನಿರಿ."

"ಇನ್ನೊಂದು ವಿಷಯ ಸಾರ್."

"ಏನೇಳ್ರಿ?"

"ನಮ್ಮ ರಸ್ತೆಲೊಂದು ನಾಯಿ ಸತ್ತೊಗಿದೆ ಸಾರ್."

"ಏನಾಗಿತ್ತು ಅದಕ್ಕೆ?"

"ಯಾವ್ದೊ ಒಂದೆರಡು ಕಾರು ಸ್ಪೀಡಾಗಿ ಹೋದ್ರೊ ಸಾರ್, ಅದ್ಕೆ ಸಿಕ್ಕಿದೆ."

"ಕಾರು ಸರಕಾರದ್ದ?"

"ಇರಬಹುದು ಸಾರ್."

"ಹಾಗಿದ್ರೆ ಆ ಸಿದ್ದರಾಮಯ್ಯನ ಅಪ್ಪನ ಕಾರೇ ಇರಬೇಕು. ನೀವ್ವೊಂದು ಕೆಲಸ ಮಾಡಿ, ನಾಯಿ ಶವ ತಗಂಡೋಗಿ ಪೊಲೀಸ್ ಠಾಣೆ ಮುಂದಿಟ್ಟುಕೊಂಡು ಸರಕಾರದ ವಿರುದ್ಧ ಚಳವಳಿ ಮಾಡಿ."

"ಆಯ್ತು ಸಾರ್, ಇನ್ನೊಂದು ವಿಷಯ. ಕೊಟ್ಟೂರಲ್ಲಿ ಬಿದ್ದ ರಥದ ಕೆಳಗೆ ಸಿಕ್ಕಿದ ನಮ್ಮ ಸೋದರ ಮಾವ ಗಾಯ ಮಾಡಿಕೊಂಡು ಬಂದವ್ರನೆ."

"ಕೂಡಲೇ ಖಂಡಿಸಿ ಒಂದು ಪ್ರತಿಭಟನೆ ಮಾಡ್ರಿ."

"ಏನು ಮಾಡ್ಬಿ ಸಾರ್?"

"ಈ ಸಿದ್ದರಾಮಯ್ಯನ ಸರಕಾರ ಶಿಥಿಲವಾಗಿದ್ದ ರಥಗಳನ್ನ ಪರಿಶೀಲಿಸದೆ ಎಳೆಯೋದಕ್ಕೆ ಅವಕಾಶ ಕೊಡತ್ತೆ, ಯಾಕೆ ಅಂದ್ರೇ ಜನಗಳು ಸಾಯಲಿ ಅಂತ. ಮೊದಲೇ ಮುಖ್ಯಮಂತ್ರಿಗೆ ದೇವರು, ದಿಂಡ್ರು, ರಥ, ಪಲ್ಲಕ್ಕಿ ಅಂದ್ರೆ ಅಲರ್ಜಿ. ಈ ಕಾರಣದಿಂದ್ಲೇ ಅವಘಡ ನಡೆದಿದೆ. ಆ ತರ ಬ್ಯಾನರ್ ಮಾಡಿಕೊಂಡು ಪ್ರತಿಭಟನೆ ಮಾಡಿ."

"ಈಗ್ಲೆ ಮಾಡ್ತಿವಿ ಸಾರ್. ರಮಾ ಸೋರೇಗೌಡ ಇದಾರ ಸಾರ್ ಮಾತಾಡಬೇಕು."

"ಟಾಯ್ಲೆಟ್‌ಗೋಗಿದಾರೆ."

"ಥೂತ್ತೇರಿ!!!" ■

...ಜಾದಿ-ಭಾರತೀಯ ದಮನದಿಂದ ಸ್ವಾತಂತ್ರ್ಯ



ಕಾಶ್ಮೀರಿ ಮುಸ್ಲಿಮರು ಕಳೆದ 27 ವರ್ಷಗಳಿಂದ ಮಿಲಿಟರಿ ಆಡಳಿತವನ್ನು ಮತ್ತು ಭಾರತೀಯ ಸೈನಿಕ ಪಡೆಗಳಿಂದ ಎಲ್ಲಾ ಬಗೆಯ ದೌರ್ಜನ್ಯಗಳನ್ನೂ ಅನುಭವಿಸಿದ್ದಾರೆ.

...ಶ್ಮೀರ ಕಣಿವೆಯಲ್ಲಿನ ಭೀಕರ ಚಳಿ ಮೂಳೆಗಳನ್ನು ...ಸುವಷ್ಟಿದ್ದರೂ ಅಲ್ಲಿನ ಜನರ ಇಚ್ಛಾಶಕ್ತಿಯನ್ನೇನೂ ...ಗಿಸಿಲ್ಲ. ಅಲ್ಲಿನ ಯಾವುದೋ ಜಾಗದ ಯಾವುದೋ ...ರುಲ್ಲಿ ಬೆರಳೆಣಿಕೆಯಷ್ಟು ಮಿಲಿಟೆಂಟ್‌ಗಳು ...ಕೊಂಡಿದ್ದಾರೆಂದು ಭಾರತದ ಭದ್ರತಾ ಪಡೆಗಳ ...ರು ಸೈನಿಕರು ನುಗ್ಗಿದಾಗಲೆಲ್ಲಾ ಸ್ಥಳೀಯ ಜನ ... ಚಳಿಯನ್ನೂ ಲೆಕ್ಕಿಸದೆ ಮಿಲಿಟೆಂಟ್‌ಗಳ ಬೆಂಬಲಕ್ಕೆ ...ತ್ತಾರೆ. ಮಾತ್ರವಲ್ಲದೆ ಭದ್ರತಾ ಪಡೆಗಳು ತಮ್ಮ ...ಚರಣೆ ಮಾಡದಂತೆ ತಡೆಯೊಡ್ಡುತ್ತಾ ಹಲವು ...ಮಿಲಿಟೆಂಟ್‌ಗಳು ತಪ್ಪಿಸಿಕೊಳ್ಳಲೂ ಸಹಕರಿಸಿದ್ದಾರೆ. ...ರ ಭದ್ರತಾ ಪಡೆಗಳ ದೃಷ್ಟಿಯಲ್ಲಿ ಮಿಲಿಟೆಂಟ್‌ಗಳಿಗೆ ...ು ನೀಡುವ ಸ್ಥಳೀಯರು ನಿಶ್ಚಿತವಾಗಿ ...ದ್ರೋಹಿಗಳೇ". ಹೀಗಾಗಿ ಅವರ ಮೇಲೆ ಕಠಿಣ ...ಗಳನ್ನು ತೆಗೆದುಕೊಳ್ಳಲು ಯಾವ ಹಿಂಜರಿಕೆಯೂ ... ಪಡೆಗಳಿಗೆ ಇರುವುದಿಲ್ಲ.

...ಸ್ಥಿತಿಯೇನೆಂದರೆ ಬಹಳಷ್ಟು ಸ್ಥಳೀಯರು ...ಂಟ್‌ಗಳನ್ನು ರಕ್ಷಿಸಲು ತಮ್ಮ ಪ್ರಾಣಗಳನ್ನೂ ...ಲು ಸಿದ್ಧವಿರುತ್ತಾರೆ. ಹತ್ಯೆಗೀಡಾಗುವ ಪ್ರತಿಯೊಬ್ಬ ...ಂಟ್ ಕೂಡಾ ಕಾಶ್ಮೀರಿಯೇ ಆಗಿರುತ್ತಾನೆ. ...ನದ ಆಡಳಿತಕ್ಕೊಳಪಟ್ಟಿರುವ ಪಶ್ಚಿಮ ಕಾಶ್ಮೀರದ ...ಂದ ಹೇಳುವುದಾದರೆ ಬಹಳಷ್ಟು ಮಿಲಿಟೆಂಟ್‌ಗಳು ... ಆಡಳಿತಕ್ಕೊಳಪಟ್ಟಿರುವ ಪೂರ್ವ ಕಾಶ್ಮೀರಿಗಳೇ ...ತ್ತಾರೆ. ಇದು ಕಾಶ್ಮೀರಿಗಳಲ್ಲಿ ತೀವ್ರವಾದ ...ವನ್ನುಂಟುಮಾಡಿದೆ. ಈ ಮಿಲಿಟೆಂಟ್ ಅಥವಾ ಮಿಲಿಟೆಂಟ್‌ಗಳ "ಎನ್‌ಕೌಂಟರ್" ಹತ್ಯೆಗಳು ... ಹೆಸರಿನಲ್ಲಿ ವಿಶೇಷವಾಗಿ ಸಾಮಾನ್ಯ ನಾಗರಿಕರು ...ಳಗಾಗುವಂಥ ವಿದ್ಯಮಾನಗಳೇ ಕೊರೆಯುವ ...ನ್ನೂ ಲೆಕ್ಕಿಸದಂಥ ದಿಢೀರ್ ಸಾರ್ವಜನಿಕ ಪ್ರತಿರೋಧಕ್ಕೆ ಕಾರಣವಾಗುತ್ತದೆ. ಅಂಥಾ ಪ್ರತಿರೋಧಗಳು ಹೆಚ್ಚೆಚ್ಚು ಕಸುವು ಪಡೆದುಕೊಳ್ಳುತ್ತಿದ್ದಂತೆ ಅವನ್ನು ಹತ್ತಿಕ್ಕಲು ಭದ್ರತಾ ಪಡೆಗಳು ಪ್ರತಿಭಟನಾನಿರತ ಜನರ ಗುಂಪುಗಳ ಮೇಲೆ ಗುಂಡು ಹಾರಿಸುತ್ತಾರೆ. ಇದು ಮತ್ತಷ್ಟು ಪ್ರತಿಭಟನೆಗಳ ಸರಣಿಗೆ ಕಾರಣವಾಗುತ್ತದೆ.

ಕಾಶ್ಮೀರಿ ಪ್ರಜೆಗಳು 27 ವರ್ಷಗಳ ಕಾಲ ಮಿಲಿಟರಿ ಆಡಳಿತಕ್ಕೆ ಸದೃಶವಾದ ಆಡಳಿತಕ್ಕೆ ಗುರಿಯಾಗಿದ್ದಾರೆ; ಹೆಚ್ಚೂಕಡಿಮೆ ಇಡೀ ಪ್ರದೇಶವನ್ನೇ "ಗಲಭೆಗ್ರಸ್ತ"ವೆಂದು ಪರಿಗಣಿಸಲಾಗಿದೆ. ಹೀಗಾಗಿ ನಾಗರಿಕರ ಮೇಲೆ ಭದ್ರತಾಪಡೆಗಳು ಎಸಗುವ ಬಲಾತ್ಕಾರ, ಚಿತ್ರಹಿಂಸೆ, ಅಪಹರಣ ಅಥವಾ ಕೊಲೆಗಳಂತ ಅಪರಾಧಗಳ ವಿರುದ್ಧ ಯಾವ ಶಿಕ್ಷೆಗೂ ಗುರಿಯಾಗದ ರೀತಿ ಅವು ಕಾನೂನುರಕ್ಷಣೆಯನ್ನು ಪಡೆದುಕೊಂಡಿವೆ. ಕಾಶ್ಮೀರದ ಅಸೋಸಿಯೇಷನ್ ಆಫ್ ಪೇರೆಂಟ್ಸ್ ಆಫ್ ಡಿಸ್‌ಅಪಿಯರ್ಡ್ ಪರ್ಸನ್ (ಕಾಣೆಯಾದ ವ್ಯಕ್ತಿಗಳ ಪೋಷಕರ ಸಂಘ- APDP) ಸಂಸ್ಥೆಯ 2017ರ ಜನವರಿ 10 ರ ಹೇಳಿಕೆಯ ಪ್ರಕಾರ ಕಾಶ್ಮೀರ ಕಣಿವೆಯಲ್ಲಿ ಕಳೆದ ಜುಲೈ 8ರಿಂದ ಪ್ರಾರಂಭಗೊಂಡು ಸಾಗುತ್ತಲೇ ಇರುವ ಜನ ಬಂಡಾಯದಲ್ಲಿ ಒಂದು ನೂರಕ್ಕೂ ಹೆಚ್ಚು ಜನಸಾಮಾನ್ಯರನ್ನು ಕೊಲ್ಲಲಾಗಿದೆ. ಭದ್ರತಾಪಡೆಗಳು ಪ್ರತಿಭಟನಾನಿರತರ ಮೇಲೆ ಸಿಡಿಸಿದ ಪೆಲೆಟ್ ಗುಂಡುಗಳಿಂದಾಗಿ ಒಂದು ಸಾವಿರಕ್ಕೂ ಹೆಚ್ಚು ಜನರ ಕಣ್ಣುಗಳಿಗೆ ಗಂಭೀರವಾದ ಹಾನಿಯಾಗಿದೆ ಅಥವಾ ಕಣ್ಣುಗಳನ್ನೇ ಕಳೆದುಕೊಂಡು ಕುರುಡರಾಗಿದ್ದಾರೆ. ಕರಾಳವಾದ ಸಾರ್ವಜನಿಕ ಸುರಕ್ಷಾ ಕಾಯಿದೆ-1978 (ಪಬ್ಲಿಕ್ ಸೇಫ್ಟಿ ಆಕ್ಟ್) ಅಡಿ ಅಪಾರ ಸಂಖ್ಯೆಯ ಜನರನ್ನು ಬಂಧಿಸಲಾಗಿದೆ. ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರವೇ ವಿವಿಧ ಅಪರಾಧಗಳಡಿ 8000ದಷ್ಟು ಜನರನ್ನು ಬಂಧಿಸಲಾಗಿದೆ. ಸುದೀರ್ಘ ಕರ್ಫ್ಯೂಗಳು, ಮಾಧ್ಯಮ ಮತ್ತು ಇಂಟರ್‌ನೆಟ್ ಮೇಲಿನ ಪ್ರತಿಬಂಧಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಶಾಂತಿಯುತ ಪ್ರತಿಭಟನೆಗಳಂಥಾ ಮೂಲಭೂತ ಹಕ್ಕುಗಳ ಮೇಲಿನ ನಿರ್ಬಂಧಗಳು ಕಾಶ್ಮೀರದಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿವೆ.

ಕಾಣೆಯಾದ ವ್ಯಕ್ತಿಗಳ ತಂದೆತಾಯಿಗಳ ಮತ್ತು ಪ್ರೀತಿಪಾತ್ರರ ವೇದನೆಗಳು ಯಾರಿಗಾದರೂ ಅರ್ಥವಾಗುತ್ತದೆ. APDP ಸಂಸ್ಥೆಯ ಅಧ್ಯಯನದ ಪ್ರಕಾರ 1989ರಿಂದಾಚೆಗೆ 8000-10000 ಕಾಶ್ಮೀರಿಗಳು ಬಲವಂತಕ್ಕೆ ಗುರಿಯಾಗಿ ಕಾಣೆಯಾಗಿದ್ದಾರೆ ಮತ್ತು ನಂತರದಲ್ಲಿ ಸುಳ್ಳು ಎನ್‌ಕೌಂಟರಿನಲ್ಲಿ ಹತರಾಗಿದ್ದಾರೆ. ಈ ಹಿಂದಿನ ಒಮರ್ ಅಬ್ದುಲ್ಲಾ ನೇತೃತ್ವದ ಸರ್ಕಾರವೇ ಖುದ್ದು 3744 ಜನರು ಈ ರೀತಿ ಹತರಾಗಿರುವುದನ್ನು ಜಮ್ಮು-ಕಾಶ್ಮೀರ ವಿಧಾನ ಸಭೆಯಲ್ಲಿ ಒಪ್ಪಿಕೊಂಡಿತ್ತು. ಆದರೆ ಭಾರತ ಸರ್ಕಾರವು ಈ ಬಲಾತ್ಕಾರದ ಕಣ್ಮರೆ ಮತ್ತು ಹತ್ಯೆಗಳ ವಿದ್ಯಮಾನವನ್ನೇ ನಿರಾಕರಿಸುತ್ತಾ ಬಂದಿದೆ. ಅಷ್ಟು ಮಾತ್ರವಲ್ಲ, ಕಾಶ್ಮೀರದಲ್ಲಿನ ಹಿಂಸಾಚಾರಕ್ಕೆ ಈ ರೀತಿ ಹತ್ಯೆಗೆ ಗುರಿಯಾದವರೇ ಕಾರಣರೆಂದು ದೂರುತ್ತಾ, ಬಲಿಪಶುಗಳನ್ನೇ ಬೇಟೆಗಾರರೆಂದು ಆರೋಪಿಸುತ್ತಿದೆ. ಜಮ್ಮು ಕಾಶ್ಮೀರದಲ್ಲಿ ಜಾರಿಯಲ್ಲಿರುವ ಈ ಬಲಾತ್ಕಾರದ ಕಣ್ಮರೆಯ ವಿರುದ್ಧ APDP ಸಂಸ್ಥೆಯು ಪ್ರತಿ ತಿಂಗಳ 10 ರಂದು ಮೌನ ಪ್ರತಿಭಟನೆಯನ್ನು ಮಾಡುತ್ತದೆ ಮತ್ತು ಅದರ ಸ್ಮರಣೆಯಲ್ಲಿ ಒಂದು ಕ್ಯಾಲೆಂಡರನ್ನು ಪ್ರಕಟಿಸುತ್ತಿದೆ. ಅದು "ಬಲಾತ್ಕಾರವಾಗಿ ಕಣ್ಮರೆಯಾದವರ ಕುಟುಂಬಗಳ ವೇದನೆಗಳ ನೆನಪುಗಳು ಅಳಿದುಹೋಗದಂತೆ ಕಾಪಿಡುವ" ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ತದನಂತರದ ರಾಜ್ಯ ಸರ್ಕಾರಗಳು ಈ "ಬಲಾತ್ಕಾರದ ಕಣ್ಮರೆಯ" ವಿರುದ್ಧ ಈವರೆಗೆ ಶಾಸನಸಭೆಯಲ್ಲಿ ಯಾವುದೇ ಕಾನೂನನ್ನು ಅಂಗೀಕರಿಸದೆ ತಮ್ಮ ನಿರ್ದಯ ಕ್ರೌರ್ಯವನ್ನು ಮುಂದುವರೆಸಿವೆ. ತದನಂತರದ ಕೇಂದ್ರ ಸರ್ಕಾರಗಳು ಸಹ ಈ ರೀತಿಯ ಬಲಾತ್ಕಾರದ ಕಣ್ಮರೆಯಿಂದ ಜನರನ್ನು ರಕ್ಷಿಸುವ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಅನುಮೋದಿಸದೆ ತಮ್ಮ ಸಂವೇದನಾ ಶೂನ್ಯತೆಯನ್ನು ಸಾಬೀತುಪಡಿಸಿವೆ.

ಮೂಲಭೂತವಾದ ವಿಷಯವೆಂದರೆ ಭಾರತದಲ್ಲಿರಲು ಇಚ್ಛಿಸದ ಬಹಳಷ್ಟು ಜನರಿರುವ ಕಾಶ್ಮೀರ ಕಣಿವೆಯ ಮೇಲೆ 27 ವರ್ಷಗಳಿಂದ ಭಾರತವು ಸೈನಿಕ ಬಲವನ್ನು ಪ್ರಯೋಗಿಸುತ್ತಿದೆ. ದೆಲ್ಲಿ ಸರ್ಕಾರವು ಈ ಎಲ್ಲವನ್ನೂ "ಭೌಗೋಳಿಕ ಸಮಗ್ರತೆ" ಮತ್ತು "ಧರ್ಮನಿರಪೇಕ್ಷತೆ"ಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳುತ್ತದೆ. ಕಾಶ್ಮೀರ ಕಣಿವೆಯಲ್ಲಿ ಸಂಭವಿಸುತ್ತಿರುವ ಎಲ್ಲದಕ್ಕೂ ಅದು ಪಾಕಿಸ್ತಾನವನ್ನು ದೂಷಿಸುತ್ತದೆ. ಅಲ್ಲಿ ನಡೆಯುತ್ತಿರುವ ಜನಬಂಡಾಯ ಮತ್ತು ಮಿಲಿಟೆಂಟ್ ದಾಳಿಗಳೆಲ್ಲವೂ ಪಾಕಿಸ್ತಾನ ಪ್ರಾಯೋಜಿತ ಎಂದು ಅದು ಭಾವಿಸುತ್ತದೆ. ಹಾಗೆ ನೋಡಿದಲ್ಲಿ ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕೇಂದ್ರ ಸರ್ಕಾರದ ರಾಷ್ಟ್ರೀಯತೆಯು ಅಖಿಲ ಭಾರತ ರಾಷ್ಟ್ರೀಯತೆಯೇನೂ ಅಲ್ಲ; ಅದು ಭಾರತದ ಜನಸಂಖ್ಯೆಯ ಒಂದು ವಿಭಾಗವನ್ನು ಪ್ರತಿನಿಧಿಸುವ ಕೋಮುವಾದಿ ಹಿಂದೂತ್ವವಾದಿ ರಾಷ್ಟ್ರೀಯತೆಯಷ್ಟೇ ಆಗಿದೆ. ಈಗ ಅಧಿಕಾರದಲ್ಲಿರುವ ಹಿಂದೂತ್ವವಾದಿ ರಾಷ್ಟ್ರೀಯವಾದಿಗಳು ಧರ್ಮನಿರಪೇಕ್ಷತೆಯ ಹೆಸರಿನಲ್ಲಿ ತಮ್ಮ ಆಳ್ವಿಕೆಯನ್ನು ಕಾಶ್ಮೀರದ ಮೇಲೆ ಹೇರಲು ಯಾವ ಅಳುಕು-ಅಂಜಿಕೆಯನ್ನೂ ತೋರುತ್ತಿಲ್ಲ. ಕಾಂಗ್ರೆಸ್ ಪ್ರಣೀತ ರಾಷ್ಟ್ರೀಯವಾದವೂ ಸಹ ಇದಕ್ಕಿಂತ ಹೆಚ್ಚೇನೂ ಭಿನ್ನವಿರಲಿಲ್ಲ ಎಂಬುದನ್ನು ವಿಶೇಷವಾಗಿ ಹೇಳಬೇಕಿಲ್ಲ. ಹಾಗೆ ನೋಡಿದಲ್ಲಿ ಪಾಕಿಸ್ತಾನೀ ರಾಷ್ಟ್ರೀಯವಾದವೂ ಇದಕ್ಕಿಂತ ಉತ್ತಮವೇನಲ್ಲ. ಇದೀಗ, ಹಿಂದೂತ್ವವಾದಿ ರಾಷ್ಟ್ರೀಯವಾದಿಗಳು ಪಾಕಿಸ್ತಾನದಲ್ಲಿ ನಡೆಯುತ್ತಿರುವ ಬಲೋಚಿ ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಬೆಂಬಲಿಸುತ್ತೇವೆಂದು ಹೇಳುತ್ತಿರುವುದು ಅವರ ಬಗೆಗಿನ ಯಾವುದೇ ಪ್ರೀತಿ ಅಥವಾ ಸೌಹಾರ್ದತೆಯ ಕಾರಣಗಳಿಗಲ್ಲ ಎಂಬುದು ಸ್ಪಷ್ಟ. ಮತ್ತೊಂದೆಡೆ ಪಾಕಿಸ್ತಾನ ರಾಷ್ಟ್ರೀಯವಾದಿಗಳು ಕಾಶ್ಮೀರವು ಭಾರತದಿಂದ ಆಜಾದಿಯನ್ನು ಪಡೆಯುವುದನ್ನು ಬೆಂಬಲಿಸುತ್ತೇವೆಂದು ಹೇಳುತ್ತಿರುವಾಗಲೇ ತಮ್ಮ ಭಾಗದಲ್ಲಿರುವ "ಆಜಾದ್ ಕಾಶ್ಮೀರವನ್ನು" ಹೆಚ್ಚೂ ಕಡಿಮೆ ಆಂತರಿಕ ವಸಾಹತುವನ್ನಾಗಿಸಿ ಕೊಂಡಿದ್ದಾರೆ. ಆದರೆ ದೆಲ್ಲಿ ಸರ್ಕಾರಗಳು ಕಳೆದ 27 ವರ್ಷಗಳಿಂದ ಕಾಶ್ಮೀರ ಕಣಿವೆಯ ಮೇಲೆ ನಿರಂತರ ಸೈನಿಕ ದುರಾಳ್ವಿಕೆಯನ್ನು ಹೇರಿರುವುದರಿಂದ, ಕಾಶ್ಮೀರಿ ಆಜಾದಿಯೆಂಬುದು, ಪ್ರಮುಖವಾಗಿ, ಭಾರತದ ದಮನದಿಂದ ಸ್ವತಂತ್ರವಾಗಬೇಕೆಂಬ ಕಾಶ್ಮೀರಿ ಜನತೆಯ ಹೃದಯಾಂತರಾಳದ ಕೂಗೇ ಆಗಿಬಿಟ್ಟಿದೆ.

ಕೃಪೆ: *Economic and Political Weekly (February 18,2017, Vol 52, No. 7)*

■ ಕನ್ನಡಕ್ಕೆ: ಶಿವಸುಂದರ್

ಗೋವಿನ ಹೆಸರಲ್ಲಿ ಕೋಮು ದಂಗೆ ಎಬ್ಬಿಸಿ ಸುಬಗನ ಪೋಸು ಕೊಡುವ ರಾಘುನ ಲಹರಿಗೆ ಭಂಗವಾಗುವಂಥ ಘಟನೆಗಳು ಕಳೆದೊಂದು ವಾರದಿಂದ ನಡೆಯಲಾರಂಭಿಸಿದೆ. ಕೆಕ್ಕಾರು ಮಠದ ಹತ್ತಿರದ ಹಳದೀಪುರ ಎಂಬ ಗ್ರಾಮದ ಬಿ.ಆರ್. ಚಂದ್ರಶೇಖರ್ ಎಂಬಾತನಿಂದ ಪ್ರೇಮಲತಾ ದಂಪತಿ ಮೇಲೆ ಕೊಡಿಸಿದ್ದ ಬ್ಲ್ಯಾಕ್‌ಮೇಲ್ ಕೇಸಿಗೆ ಸಿಐಡಿ ಬಿ-ರಿಪೋರ್ಟ್ ಜಡಿಯಲು ಸಿದ್ಧವಾಗಿದ್ದು ರಾಘುನ ನಿದ್ದೆಗೆಡಿಸಿಬಿಟ್ಟಿದೆ. ಆತನ ಪಾಖಂಡಿ ಪಡೆಯಂತೂ ಗುರುಗಳು ಮುಳುಗಿಯೇ ಹೋದಂತೆ ಬೊಬ್ಬಿರಿಯಲು ಶುರು ಮಾಡಿದ್ದಾರೆ. ಗುರುವಿನ ಮಾತು ನಂಬಿ-ಏನೇನೋ ಒಳ ಆಸೆಯಿಟ್ಟುಕೊಂಡು ಸುಳ್ಳು ಕೇಸು ಹಾಕಿದ್ದ ಅನಾಮಧೇಯ ತಿರುಬೋಕಿ ಬಿ.ಆರ್. ಚಂದ್ರಶೇಖರ್ ಕೇಸು ಉಲ್ಟಾ ಹೊಡೆದರೆ ಅಂದರ್ ಆಗಬೇಕಾಗುತ್ತದೆಂಬ ಆತಂಕದಲ್ಲಿ ತತ್ತರಿಸುತ್ತಿದ್ದಾನೆ. ರಾಘು ತನ್ನ ತೆವಲಿಗೆ ಚಂದ್ರಶೇಖರ್‌ನಂಥ ಅಧಿಕಪ್ರಸಂಗಿಗಳನ್ನೆಷ್ಟೋ ಬಲಿ ಪಡೆದ ದೊಡ್ಡ ಇತಿಹಾಸವೇ ಮಠದ ಅಂಗಳದಲ್ಲಿದೆ.


ರಾಘು ಸ್ವಾಮಿ

ಠುಸ್ ಆದ ಬ್ಲಾಕ್‌ಮೇಲ್ ಬೊಬ್ಬೆ...


ಪ್ರೇಮಲತಾ ದಿವಾಕರ ಶಾಸ್ತ್ರಿ

ಹವ್ಯಕ ಬ್ರಾಹ್ಮಣರ ರಾಮಚಂದ್ರಾಪುರ ಮಠದ ಪರಂಪರೆಗೆ ದೇಶಿ ಗೋವುಗಳ ಶುದ್ಧ ಸಗಣಿ ಸಾರಿಸುತ್ತಿರುವ ಪಟಿಂಗ ಪೀಠಾಧಿಪತಿ ರಾಘವೇಶ್ವರ ಭಾರತಿ ಸ್ವಾಮಿ ಯಾನೆ ರಂಗ್‌ರಂಗೀಲಾ ರಾಘುನ ಭರ್ಜರಿ ಕಾಮಕಾಂಡದ ಉಪಕತೆಗಳು ಹೊರಬರುವುದಿನ್ನೂ ನಿಂತಿಲ್ಲ! ಯತಿಯೊಬ್ಬನಿಗೆ ಅನಿವಾರ್ಯವಾದ ತ್ರಿಕಾಲ ಪೂಜೆ-ಅನುಷ್ಠಾನ ಧಿಕ್ಕರಿಸಿ ಅನುಗಾಲ ಮಜಾ-ಮಸಲತ್ತಿನಲ್ಲಿ ಮೈಮರೆತಿರುವ ಈ ಮಾನಗೇಡಿ ತನ್ನ ವ್ಯಭಿಚಾರ ಮುಚ್ಚಿಹಾಕಲು ದಾದಾಗಿರಿ ಮತ್ತು ದೋ ನಂಬರ್ ದುಡ್ಡು ಚಲಾವಣೆ ಮಾಡುತ್ತಿದ್ದಾನೆಂಬುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಂತಿದೆ ಹುಸಿ ಬ್ಲ್ಯಾಕ್‌ಮೇಲ್ ಪುರಾಣ! ರಾಮಕಥಾ ಗಾಯಕಿ ಪ್ರೇಮಲತಾರನ್ನು ವರ್ಷಾನುಗಟ್ಟಲೆ ನಿರಂತರವಾಗಿ ಬಳಸಿಕೊಂಡಿದ್ದ ರಾಘು ಈ ಚಟೋನ್ಮಾದವೇ ಗಂಡಾಂತರಕಾರಿಯಾದಾಗ ಬಚಾವಾಗಲು ಬ್ಲ್ಯಾಕ್‌ಮೇಲ್ ಕತೆ ಹೆಣೆದಿದ್ದನಲ್ಲವಾ? ಪ್ರೇಮಲತಾ-ಮತ್ತಾಕೆಯ ಪತಿ ದಿವಾಕರ ಶಾಸ್ತ್ರಿ ಮೂರು ಕೋಟಿ ಹಣ ಕೊಡದಿದ್ದರೆ ಅತ್ಯಾಚಾರದ ಕೇಸು ಹಾಕಿಸುವುದಾಗಿ ಬೆದರಿಸುತ್ತಿದ್ದಾರೆಂದು ರಾಘು ದಾಖಲು ಮಾಡಿಸಿದ್ದ ಪ್ರಕರಣವೀಗ ತಾರ್ಕಿಕ ಅಂತ್ಯ ಕಂಡಿದೆ.

ಬರೋಬ್ಬರಿ ಎರಡೂವರೆ ವರ್ಷದ ಹಿಂದೆ ಏಕಾಏಕಿ ಪ್ರೇಮಲತಾ ಮತ್ತು ಆಕೆಯ ಗಂಡ ದಿವಾಕರ ಶಾಸ್ತ್ರಿಯನ್ನು ಬ್ಲಾಕ್‌ಮೇಲ್ ಆರೋಪದ ಮೇಲೆ ಹೊನ್ನಾವರದಲ್ಲಿ ಸಿಪಿಐ ಆಗಿದ್ದ ಹುಂಬ ಮಂಜುನಾಥ ಗೌಡ ಬೆಂಗಳೂರಿಂದ ಎತ್ತಾಕಿಕೊಂಡು ಬಂದು ಕಾರವಾರದ ಜೈಲಲ್ಲಿ ಕೂಡಿಹಾಕಿದಾಗ ರಾಘುನ ಹೆಣ್ಣುಬಾಕ ಭಾನ್ಗಡಿ ಜಗಜ್ಜಾಹೀರಾಗಿ ಹೋಗಿತ್ತು! ಬೆಳಗ್ಗೆ ಅರೆಸ್ಟ್ ಮಾಡಿದರೆ ಸಂಜೆಯಷ್ಟೊತ್ತಿಗೆ ಬಿಡುಗಡೆ ಮಾಡುವಂಥ ಪೆಟ್ಟಿ ಕೇಸು ಇದಾಗಿತ್ತು! ಆದರೆ ಅಂದು ಹೊನ್ನಾವರ ಕೋರ್ಟಿನಲ್ಲಿದ್ದ ನ್ಯಾಯಾಧೀಶರು ದಿಕ್ಕು ತಪ್ಪಿದ್ದರು. ಜಡ್ಜ್ ಸಾಹೇಬರು ಹಿಂದೆ-ಮುಂದೆ ನೋಡದೆ ಕಸ್ಟಡಿಗೆ ಅಮಾಯಕ ದಂಪತಿಗಳನ್ನು ಕೊಟ್ಟುಬಿಟ್ಟಿದ್ದರು. ಅಮಾಯಕರ ಮಾನ-ಪ್ರಾಣ ತಿಂದು ತೇಗುವ ರಾಘುನ ರಾಕ್ಷಸ ಅವತಾರ ಅನಾವರಣ ಆಗಿದ್ದೇ ಆವಾಗ!

ಶಂಕರಾಚಾರ್ಯನ ಹೆಸರಲ್ಲಿ ನಡೆಯುವ ಬ್ರಾಹ್ಮಣ ಮಠಗಳಲ್ಲಿ ರಕ್ತದೋಕುಳಿ, ಅವ್ಯವಹಾರ, ಅನಾಚಾರ ನಡೆದದ್ದು ಕಂಚಿಕಾಮಕೋಟಿ ಮಠದ ಕ್ರಿಮಿನಲ್ ಕೇಸು, ಕೂಡಲಿ ಮಠದ ಖೋಟಾನೋಟು ಕೇಸುಗಳಿಂದ ಬಹಿರಂಗವಾಗಿತ್ತು, ಆದರೆ ಶಂಕರಾಚಾರ್ಯ ಪರಂಪರೆಯಲ್ಲಿ ಸ್ತ್ರೀಯರ ಸೆರಗಿಗೂ ಕೈಹಾಕುವ ಕಿರಾತಕ ಕಾವಿ ಜೀವಿಗಳ... ದ್ದಾರೆಂಬುದನ್ನು ರಾಘು ಸ್ವಯಂ ಸಾಬೀತುಪಡಿಸಿಬಿಟ್ಟಿದ್ದ! ... ರಾಘುನ ಮೇಲೆ ಪ್ರೇಮಲತಾ ನೀಡಿದ್ದ ಅತ್ಯಾಚಾರದ... ದೂರನ್ನು ಬಿ-ರಿಪೋರ್ಟ್‌ನಲ್ಲೇ ಮೋಕಳಿಕ್ ಮಾಡಲು... ಆತನ ಹಿತೈಷಿಗಳಾದ ಮಂತ್ರಿಗಳು, ಶಾಸಕರು, ಪತ್ರಕರ್ತರು, ... ಅಧಿಕಾರಿಗಳು ಗ್ಯಾಂಗಪ್ ಆಗಿ ಅಹೋರಾತ್ರಿ ಶ್ರಮಿಸಿದರು... ಅದೆಷ್ಟೋ ಸಮ-ದಾನ-ಭೇದ-ದಂಡ ಪ್ರಯೋಗಿಸಿದರೂ... ಪಾತಕಿ ಸ್ವಾಮಿಯನ್ನು ಪಾರು ಮಾಡಲಾಗಲಿಲ್ಲ. ಸಿದ್ದು... ಸರ್ಕಾರದ ದೋಷಪಾಂಡೆ, ಎಚ್ಕೆ ಪಾಟೀಲರೆಂಥವರು... ತರಹೇವಾರಿ ಕಸರತ್ತು ಮಾಡಿದರೂ ರಾಘುನ ಮೇಲೆ... ಚಾರ್ಜ್‌ಶೀಟು ಬಿದ್ದಿತ್ತು.

ಆ ಕೇಸಿನಲ್ಲಿ ರಾಘು ಪಕ್ಕಾ ವ್ಯಭಿಚಾರಿ-ಅನಾಚಾರಿ... ಎಂಬುದು ಖಾತ್ರಿಯಾಗಿ ಹೋಗಿದೆ! ಸೆಷನ್ಸ್... ನ್ಯಾಯಾಲಯದ ತೀರ್ಪಿನಲ್ಲಿ ರಾಘು ಸ್ತ್ರೀಸಖ್ಯ ಸುಖ... ಸಂತೃಪ್ತ ಸಂತನೂ ಲಿವಿಂಗ್ ಟುಗೆದರ್ ಸಂಸ್ಕೃತಿಯ ಕಾವಿ... ಕೊಳಕನೂ ಎಂಬುದು ಉಲ್ಲೇಖವಾಗಿದೆ. ಅಲ್ಲಿಗೆ ರಾಘು... ಹವ್ಯಕರ ಶ್ರದ್ಧಾ-ಭಕ್ತಿಯ ರಾಮಚಂದ್ರಾಪುರ ಮಠದ... ಪೀಠದಲ್ಲಿರಲು ಅಯೋಗ್ಯನೆಂಬುದನ್ನು ನ್ಯಾಯಾಲಯವೇ... ಸಾರಿದಂತಾಗಿದೆ. ಇಷ್ಟಾದರೂ ನಿರ್ಲಜ್ಜ ರಾಘು ಹವ್ಯಕ... ಸಮುದಾಯವನ್ನು ಒಡೆದು ಹಾಕಿ ಪೀಠಕ್ಕೆ ಲೀಟರ್‌ಗಟ್ಟಲೆ... ಫೆವಿಕಲ್ ಸುರಿದು ಅಂಡೂರಿ ಕುಳಿತಿದ್ದಾನೆ. ಹವ್ಯಕರ... ನಡುವೆ ಜಗಳ-ದ್ವೇಷ ಹುಟ್ಟುಹಾಕಿ ಬೇಳೆ... ಬೇಯಿಸಿಕೊಳ್ಳುತ್ತಿದ್ದಾನೆ. ಚಾಲಾಕಿ ರಾಘು ತನ್ನ ಅಸಹ್ಯ... ಅತ್ಯಾಚಾರ ಪ್ರಕರಣಗಳಿಂದ ಹವ್ಯಕರ ಗಮನ ಗೋವಿಗೆ... ಸೆಳೆಯಲು ತರತರದ ಪ್ರಹಸನ ನಡೆಸಿದ್ದಾನೆ.


ಈಚೆಗೆ ಆತ ಮಂಗಲ ಗೋಯಾತ್ರೆ ಹೊರಟಿದ್ದ... ಇದು ಫ್ಲಾಪ್ ಆಯಿತು. ಕುಮಟಾ ಮತ್ತು ಮಂಗಳೂರಲ್ಲಿ... ಆತ ಏರ್ಪಡಿಸಿಕೊಂಡಿದ್ದ ಬೃಹತ್ ದೇಖಾವೆಗಳಿಗೆ ಹವ್ಯಕರೇ... ಬಂದಿರಲಿಲ್ಲ. ನೈತಿಕತೆ ಕಳೆದುಕೊಂಡಿರುವ ಗುರುವಿಂದ... ಹವ್ಯಕರು ದೂರಾಗುತ್ತಿರುವ ಸಂಕೇತ-ಸಂದೇಶ ಮಂಗಲ... ಗೋಯಾತ್ರೆ ರವಾನಿಸಿದೆ. ಇದರಿಂದ ಕಂಗಾಲಾಗಿರುವ... ರಾಘು ಮಂಗಳೂರಿನ ಕೌಬಾಯ್ ಬ್ರಿಗೇಡ್‌ನ ಪುಂಡರನ್ನು... ಕರೆಕರೆದು ಗೋ ಕಿಂಕರರೆಂದು ಬಿರುದುಕೊಟ್ಟು... ಪ್ರಚೋದಿಸಿದ್ದಾನೆ. ಕಸಾಯಿಖಾನೆ ವಿರುದ್ಧ ಪ್ರಚೋದನಾತ್ಮಕ... ಭೀಷಣ ಭಾಷಣ ಬಿಗಿದಿದ್ದಾನೆ. ತನ್ನ ಮುಂದಾಳತ್ವದಲ್ಲಿ... ಕೋಮು ಗಲಭೆಯಾದರೆ ಅತ್ಯಾಚಾರ-ವ್ಯಭಿಚಾರದ ಪ್ರಕರಣ... ಹಿಂದಾಗಿ ಹಿಂದೂ ಹೀರೋ ಆಗುತ್ತೇನೆಂಬ ಅನಾಹುತಕಾರಿ... ಲೆಕ್ಕಾಚಾರ ಭಂಡ ರಾಘೂನದು.


ಗೋವಿನ ಹೆಸರಲ್ಲಿ ಕೋಮು ದಂಗೆ ಎಬ್ಬಿಸಿ ಸುಬಗನ ಪೋಸು ಕೊಡುವ ರಾಘುನ ಲಹರಿಗೆ ಭಂಗವಾಗುವಂಥ ಘಟನೆಗಳು ಕಳೆದೊಂದು ವಾರದಿಂದ ನಡೆಯಲಾರಂಭಿಸಿದೆ. ಕೆಕ್ಕಾರು ಮಠದ ಹತ್ತಿರದ ಹಳದೀಪುರ ಎಂಬ ಗ್ರಾಮದ ಬಿ.ಆರ್. ಚಂದ್ರಶೇಖರ್ ಎಂಬಾತನಿಂದ ಪ್ರೇಮಲತಾ ದಂಪತಿ ಮೇಲೆ ಕೊಡಿಸಿದ್ದ ಬ್ಲ್ಯಾಕ್‌ಮೇಲ್ ಕೇಸಿಗೆ ಸಿಐಡಿ ಬಿ-ರಿಪೋರ್ಟ್ ಜಡಿಯಲು ಸಿದ್ಧವಾಗಿದ್ದು ರಾಘುನ ನಿದ್ದೆಗೆಡಿಸಿಬಿಟ್ಟಿದೆ. ಆತನ ಪಾಖಂಡಿ ಪಡೆಯಂತೂ ಗುರುಗಳು ಮುಳುಗಿಯೇ ಹೋದಂತೆ ಬೊಬ್ಬಿರಿಯಲು ಶುರು ಮಾಡಿದ್ದಾರೆ. ಗುರುವಿನ ಮಾತು ನಂಬಿ-ಏನೇನೋ ಒಳ ಆಸೆಯಿಟ್ಟುಕೊಂಡು ಸುಳ್ಳು ಕೇಸು ಹಾಕಿದ್ದ ಅನಾಮಧೇಯ ತಿರುಬೋಕಿ ಬಿ.ಆರ್. ಚಂದ್ರಶೇಖರ್ ಕೇಸು ಉಲ್ಟಾ ಹೊಡೆದರೆ ಅಂದರ್ ಆಗಬೇಕಾಗುತ್ತದೆಂಬ ಆತಂಕದಲ್ಲಿ ತತ್ತರಿಸುತ್ತಿದ್ದಾನೆ. ರಾಘು ತನ್ನ ತೆವಲಿಗೆ ಚಂದ್ರಶೇಖರ್‌ನಂಥ ಅಧಿಕಪ್ರಸಂಗಿಗಳನ್ನೆಷ್ಟೋ ಬಲಿ ಪಡೆದ ದೊಡ್ಡ ಇತಿಹಾಸವೇ ಮಠದ ಅಂಗಳದಲ್ಲಿದೆ.

ರಾಘುನ ಅತ್ಯಾಚಾರ-ಅನಾಚಾರ ಪ್ರಕರಣ ಆಸ್ಫೋಟವಾದ ಸಂದರ್ಭದಲ್ಲಿ ಕೆಕ್ಕಾರ ಮಠದಲ್ಲಿ ನಡೆಯುತ್ತಿದ್ದ 'ಚತುರ್ಮಾಸ' ಕಾರ್ಯಕ್ರಮದ ಅಡಿಗೆ ವ್ಯವಸ್ಥಾಪಕನಾಗಿದ್ದಾತನೇ ಈ ಚಂದ್ರಶೇಖರ ಹೆಗಡೆ. ಹಳದೀಪುರದಲ್ಲೊಂದು ರೆಸಾರ್ಟ್ ಮಾಡಿ ಭರ್ಜತ್ತಾಗದೇ ಒದ್ದಾಡುತ್ತಿದ್ದ ಚಂದ್ರಶೇಖರ್ ಕೋಟ್ಯಾಂತರ ರೂ. ವಹಿವಾಟಿನ ಚತುರ್ಮಾಸ ಸಮಾರಂಭದ ಊಟದ ವ್ಯವಸ್ಥೆಯಲ್ಲಿ ರಾಮನ ಲೆಕ್ಕ-ಕೃಷ್ಣನ ಲೆಕ್ಕ ಬರೆವ ಉಮೇದಿನಲ್ಲಿ ಮಠ ಹೊಕ್ಕಿದ್ದ ಚಂದ್ರಶೇಖರ್. ಆದರೆ ಗುರುಗಳ ಅಪ್ಪಣೆಯ ಸಂದಿಗ್ಧದಲ್ಲಿ ಸಿಕ್ಕಿಬಿದ್ದು ಬ್ಲಾಕ್‌ಮೇಲ್ ಕೇಸು ಕೊಡಬೇಕಾಗಿ ಬಂದಿತ್ತು.

ಯಾವ ಆ್ಯಂಗಲ್‌ನಲ್ಲಿ ನೋಡಿದರೂ ಈತ ಮಠದ ಆಡಳಿತದ ಆಸಾಮಿಯೇ ಅಲ್ಲ, ಈತನಿಗೆ ದೂರು ಕೊಡುವ ಅಧಿಕಾರವೇ ಇಲ್ಲ. ರಾಘುನನ್ನು ತನ್ನ ಹೋಮ್ ಸ್ಟೇನ ಕೆರೆಯಲ್ಲಿ ಜಲವಿಹಾರಕ್ಕೆ ಆಗಾಗ ಕರೆದೊಯ್ಯುತ್ತಿದ್ದ ಈತ ಅದೇ ಸಲುಗೆಯಲ್ಲಿ ಊಟದ ಉಸ್ತುವಾರಿಯಾಗಿದ್ದ. ಬ್ಲಾಕ್‌ಮೇಲ್ ಕೇಸ್‌ನ ದೂರುದಾರನಾದಾಗ ಈತನ ಅಪ್ಪ ಮಗ ಸಿಕ್ಕಿಬಿದ್ದನೆಂದು ಗುರುಗಳ ಎದುರು ಗೋಳೋ ಎಂದು ಅತ್ತಿದ್ದ, ತನ್ನ ಮಗನ ಕೈ ಎಂದೂ ಬಿಡದಂತೆ ಬೇಡಿದ್ದು ಕಂ... ಇಂದಿಗೂ ಮರೆತಿಲ್ಲ. ಅಂದಹಾಗೆ ಚಂದ್ರಶೇಖರ ಅಪ್ಪ ಆರ್.ವಿ. ಹೆಗಡೆ ಹಳದೀಪುರ ವ್ಯವಸಾಯ ಸೇವಾ ಸಹಕಾರಿ ಸಂಘವನ್ನೇ ಮುಳುಗಿಸಿ ನಾಪತ್ತೆಯಾಗಿದ್ದ ಪ್ರಚಂಡ. ಇವತ್ತಿಗೂ ಆ ಕೇಸು ನಡೆಯುತ್ತಿದೆ.



ಮಂಕಾಳ ವೈದ್ಯ


ಎಚ್.ಕೆ. ಪಾಟೀಲ್


ಆರ್.ವಿ ದೇಶಪಾಂಡೆ

ಹಂತದಲ್ಲೂ ಪ್ರೇಮಲತಾ ದಂಪತಿಗಳಿಂದ ಬ್ಲ್ಯಾಕ್‌ಮೇಲ್ ಎಂಬುದು ಆಗಿರಲೇ ಇಲ್ಲ. ತ್ತಿರವಾಗಿದ್ದ ಚಿತ್ರಕೋಡಿ ಶಾಸ್ತ್ರಿಗಳ ವಂಶದ ಈ ಳೂ ರಾಘೂನ ಅತ್ಯಾಪ್ತರೇ ಆಗಿದ್ದರು. ತ್ತೋ? ಒಂದು ಹಂತದಲ್ಲಿ ಮನಸ್ತಾಪ, ನವಾಗಿ ಈ ದಂಪತಿ ಮಠದಿಂದ ದೂರವ್ರೂ ಹಾಗಂತ ಬಲಾಢ್ಯ ಷಡ್ಯಂತ್ರಗಾರ ರಾಘೂನ ಲ್ ಮಾಡುವ ದಾರ್ಷ್ಟ್ಯ ಇವರಲ್ಲಿ ಇರಲೇ ಡೂವರೆ ವರ್ಷದ ಹಿಂದೆ ರಾಘೂನನ್ನು ಮಠದ ಕೆಳಗಿಳಿಸುವ ಪ್ರಯತ್ನ ನಡೆದಿದ್ದು ಸುಳ್ಳಲ್ಲ. ಬೆದರಿಕೆ -ಬ್ಲ್ಯಾಕ್‌ಮೇಲ್ ಇರಲಿಲ್ಲ. ಪ್ರೇಮಲತಾ ಸ್ವಾಮಿ ತನ್ನನ್ನು ದೇವರ-ಬಹಿಷ್ಕಾರದ ಮತ್ತು ಮಠಬಾನಿಗಳ ಭಯ ತೋರಿಸಿ ಎರಡ್ಮೂರು ದ ಬಳಸಿಕೊಳ್ಳುತ್ತ ಬಂದಿದ್ದಾನೆಂದು ಗಂಡ ಮತ್ತು ಣ್ಣ ಚಿ.ಮ. ಕೃಷ್ಣಶಾಸ್ತ್ರಿ ಬಳಿ ಹೇಳಿಕೊಂಡಿದ್ದರು. ರಿವಾರದ ಅಖಿಲ ಭಾರತ ಸಂಸ್ಕೃತ ಭಾರತಿ ಸ್ಥೆಯ ಮುಖ್ಯಸ್ಥನಾಗಿರುವ ಕೃಷ್ಣಶಾಸ್ತ್ರಿ ಆರ್‌ಎಸ್ ಯಕಟ್ಟಿನ ಸ್ಥಾನದಲ್ಲಿರುವ ದತ್ತಾತ್ರೇಯ ಹೊಸಬಾಳೆ ಈ ಕಾಮಿ ಸ್ವಾಮಿಯನ್ನು ಭೇಟಿಯಾಗಿದ್ದರು. ಕೆಕ್ಕಾರ ಮಠದಲ್ಲಿ ಚತುರ್ಮಾಸ ನಡೆಯುತ್ತಿದ್ದ ತ್ತು. ಶಾಸ್ತ್ರಿ-ಹೊಸಬಾಳೆ "ನೀವು ಅತ್ಯಾಚಾರ- ಮಾಡಿರೋದು ಖಾತ್ರಿ. ಹೀಗೆಲ್ಲಾ ಅನಾಚಾರ ಠದಲ್ಲಿ ಇರಬಾರದು. ಪೀಠದ ಪಾವಿತ್ರ್ಯ ಮುಖ್ಯ ಅವಮಾನಿಸಬೇಕೆಂಬುದು ನಮ್ಮ ಉದ್ದೇಶವಲ್ಲ. ತ್ತಿಳಿಯಿರಿ. ಪ್ರೇಮಲತಾ ದಂಪತಿಗೆ ಅತ್ಯಾಚಾರದ ಡದಂತೆ ನಾವು ಬುದ್ಧಿ ಹೇಳುತ್ತೇವೆ..." ಎಂದು ಹೇಳಿದ್ದರು. ಮೊದಮೊದಲು ತಾನೊಬ್ಬ ಶುದ್ಧ ಂದು ಎಗರಾಡಿದ ರಾಘು ನಂತರ ಸಾಕ್ಷ್ಯಗಳನ್ನು ವಾಗ ಕಂಗಾಲಾಗಿ ಪೀಠ ತ್ಯಾಗ ಮಾಡುವುದಾಗಿ ದ್ದ!

ರ ಮಠದಿಂದ ಶಾಸ್ತ್ರಿ- ಹೊಸಬಾಳೆ ಆಚೆ ತ್ತಲೇ ಕ್ರಿಮಿನಲ್ ತಂತ್ರಗಾರಿಕಾ ನಿಪುಣ ರಾಘು ಕುಟುಂಬ ಹಣಿವ ಸ್ಕೆಚ್ ಹಾಕಲಾರಂಭಿಸಿದ್ದ. ಪೀಠತ್ಯಾಗಕ್ಕೆ ಸಿದ್ಧನಾಗಿದ್ದೇನೆಂಬ ಭ್ರಮೆ ಗಳಲ್ಲಿ ಮೂಡುವ ಮಸಲತ್ತು ನಡೆಸಿದ್ದ. ಸ ಪ್ರವಚನದಲ್ಲಿ ಹಿಮಾಲಯಕ್ಕೆ ಹೋಗುವ ದೆ ಎಂದು ಹಲುಬಿದ್ದ. ಹೀಗೆ ಹೇಳುವುದರಲ್ಲಿ ಮತ್ತೊಂದು ತಂತ್ರವೂ ಅಡಗಿತ್ತು. ಹವ್ಯಕ ಶಿಷ್ಯ ಕೋಟಿ ಪೀಠ ತ್ಯಾಗದ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಾರೆಂದು ನೋಡುವುದು ರಾಘುನ ಉದ್ದೇಶವಾಗಿತ್ತು. ಗುರುಗಳು ಹಿಮಾಲಯಕ್ಕೆ ಹೋಗೋದು ಬೇಡೆಂಬಂತೆ ಜನ ತಡೆದರು. ಇದು ತನ್ನ ಮಂಕುಬೂದಿಯ ತಾಕತ್ತೆಂದು ಬಗೆದ ರಾಘು ಕ್ರಿಮಿನಲ್ ಸಲಹೆಗಾರರ ಮೂಲಕ ಬ್ಲ್ಯಾಕ್‌ಮೇಲ್ ಕಂಪ್ಲೇಂಟು ಕೊಡುವ ಆಟ ಆರಂಭಿಸಿಬಿಟ್ಟ.



ಪ್ರೇಮಲತಾ ದಂಪತಿಗಳ ಮೇಲೆ ಬ್ಲ್ಯಾಕ್‌ಮೇಲ್ ಕೇಸು ಹಾಕಿ ಅತ್ಯಾಚಾರ ಪ್ರಕರಣ ತಿರುಚೋದು ರಾಘುನ ಕೇಡಿ ಗ್ಯಾಂಗ್‌ನ ಉದ್ದೇಶವಾಗಿತ್ತು. ಜೀವ ಭಯ, ಕಾನೂನಿನ ಭಯ ಹುಟ್ಟಿಸಿ, ಜೈಲಲ್ಲಿ ಕೊಳೆಸಿ ಪ್ರೇಮಲತಾ ದಂಪತಿಗಳ ಪಳಗಿಸುವುದು ಗಲೀಜು ಸ್ವಾಮಿಯ ಯೋಚನೆಯಾಗಿತ್ತು. ಸರ್ಕಾರಿ ಯಂತ್ರಾಂಗ, ನ್ಯಾಯಾಂಗ, ಮಾಧ್ಯಮ ರಂಗವನ್ನೆಲ್ಲ ದಿಕ್ಕುತಪ್ಪಿಸಿ ದುರ್ಬಳಕೆ ಮಾಡಿಕೊಂಡ ರಾಘು ಅಟ್ಟಹಾಸದಿಂದ ಹಾರಾಡತೊಡಗಿದ್ದ. ಈತನ ಕ್ರೌರ್ಯ ಅದ್ಯಾವ ಮಟ್ಟ ಮುಟ್ಟಿತೆಂದರೆ ಆರ್‌ಎಸ್‌ಎಸ್‌ನ ಮತ್ತೊಂದು ಬಣದ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟನ ಜತೆ ಸೇರಿಸಿಕೊಂಡು ಪ್ರೇಮಲತಾರ ಗಂಡನ ತಮ್ಮ ಶ್ಯಾಮಶಾಸ್ತ್ರಿಯ ಆಹುತಿಯೂ ಪಡೆದುಕೊಂಡುಬಿಟ್ಟ! ಆದರೆ ರಾಘುನ ದಾದಾಗಿರಿಗೆ ಶಾಸ್ತ್ರಿ ಕುಟುಂಬ ಶರಣಾಗಲಿಲ್ಲ. ಎಲ್ಲ ಜೀವ ಭಯ-ಅವಮಾನ ಎದುರಿಸಿ ಕಾನೂನು ಹೋರಾಟ ನಡೆಸಿತು. ಆ ಕುಟುಂಬ ಹಿಡಿತದಲ್ಲಿಟ್ಟುಕೊಳ್ಳುವ ಪ್ರಯತ್ನ ರಾಘುನ ಕೈಗೂಡಲೇ ಇಲ್ಲ. ದಿಲ್ಲಿಯಿಂದ ಚಿ.ಮ.ಕೃಷ್ಣಶಾಸ್ತ್ರಿ-ಹೊಸಬಾಳೆ ರಾಘುಗೆ ಗುಮ್ಮುತ್ತಲೇ ಇದ್ದರು.

ಹೀಗಾಗಿ ಅತ್ಯಾಚಾರ ಕೇಸ್‌ನಲ್ಲಿ ರಾಘು ಬ್ರಹ್ಮಚರ್ಯ ಕಳೆದುಕೊಂಡ ಪರಮ ಕಾಮುಕ ಸ್ವಾಮಿ-ವ್ಯಭಿಚಾರಿ ಎಂಬುದು ಸಿದ್ಧವಾಯ್ತು. ಈ ಸೇಡು ತೀರಿಸಿಕೊಳ್ಳಲು ಆತ ತಾನು ಹಾಕಿಸಿದ್ದ ಬ್ಲ್ಯಾಕ್‌ಮೇಲ್ ಕೇಸಲ್ಲಿ ಶಾಸ್ತ್ರಿ ಕುಟುಂಬ ಸಿಕ್ಕಿಸಿಹಾಕುವ ಹಠಕ್ಕೆ ಬಿದ್ದಿದ್ದ. ಸಿಐಡಿ ಪೊಲೀಸರಿಗೆ ಇದೊಂದು ಬೋಗಸ್ ಬ್ಲ್ಯಾಕ್‌ಮೇಲ್ ಕೇಸೆಂದು ಖಾತ್ರಿಯಾಗಿದ್ದರೂ ಬಿ-ರಿಪೋರ್ಟ್ ಹಾಕಲು ರಾಘುನ ಕೇಡಿ ಸಲಹೆಗಾರರು, ಹಿತೈಷಿ ವಿಷಭಟ್ಟನೆಂಬ ಪ್ರಚಂಡ ಪತ್ರಕರ್ತ ಬಿಡಲೇ ಇಲ್ಲ. ಹೀಗಾಗಿ ಈ ಸುಳ್ಳು ಬ್ಲ್ಯಾಕ್‌ಮೇಲ್ ಪ್ರಕರಣ ಎರಡೂವರೆ ವರ್ಷ ಎಳೆದುಕೊಂಡು ಬಂತು. ಎರಡು ವರ್ಷ ಕಳೆದರೂ ಆರೋಪಿ ದಂಪತಿಗಳ ವಿರುದ್ಧ ಒಂದೇ ಒಂದು ಸಾಕ್ಷ್ಯಾಧಾರವೂ ಸಿಐಡಿ ಪೊಲೀಸರಿಗೆ ಸಿಗಲಿಲ್ಲ. ಅಂದರೆ ರಾಘುನ ವಕೀಲರಿಗೆ, ಪತ್ರಕರ್ತರಿಗೆ, ಅಧಿಕಾರಿ ಗಣಕ್ಕೆ ಬ್ಲ್ಯಾಕ್‌ಮೇಲ್ ಸಾಬೀತುಪಡಿಸಲು ಎಷ್ಟೇ ತಿಪ್ಪರಲಾಗ ಹಾಕಿದರೂ ಸಾಧ್ಯವೇ ಆಗಲಿಲ್ಲ. ಇದೀಗ ಕೇಸು ಬಿ-ರಿಪೋರ್ಟ್ ಹಂತಕ್ಕೆ ಬಂದುನಿಂತಿದೆ!!

ಬಿ-ರಿಪೋರ್ಟ್‌ನ ವಾಸನೆ ಬಡಿದಿದ್ದೇ ತಡ, ರಾಘು ತನ್ನ ಅಚ್ಚುಮೆಚ್ಚಿನ ವಕೀಲ ಶಿಷ್ಯಾಗ್ರೇಸ ಶಂಭು ಶರ್ಮನನ್ನು ಅಖಾಡಕ್ಕೆ ಛೂಬಿಟ್ಟಿದ್ದಾನೆ. ಈ ಹರಕುಬಾಯಿ ಶರ್ಮ ವಕೀಲಿಕೆಯ ಘನತೆ-ಗೌರವ ಗಾಳಿಗೆ ತೂರಿ ಮುಠ್ಠಾಳ ಪುಂಡನಂತೆ ನೆಗೆನೆಗೆದು ಹಾರಾಡುತ್ತಿದ್ದಾನೆ. ಬ್ಲ್ಯಾಕ್‌ಮೇಲ್ ಪ್ರಬಲವಾದ ಸಾಕ್ಷ್ಯಗಳಿದ್ದರೂ ಬಿ-ರಿಪೋರ್ಟ್ ಹಾಕಲಾಗುತ್ತಿದೆ ಎಂದು ಅಲವತ್ತುಕೊಂಡಿದ್ದಾನೆ. ಬಿ-ರಿಪೋರ್ಟ್ ವಿರುದ್ಧ ಬೀದಿ ಸಮರ ಮಾಡುತ್ತೇನೆಂದು ಕಾನೂನು ಧಿಕ್ಕರಿಸುವ ಮಾತಾಡಿದ್ದಾನೆ. ಕಾರ್ಯಾಂಗ-ನ್ಯಾಯಾಂಗದಲ್ಲಿ ನಂಬಿಕೆ ತನ್ನ ಗುರು ರಾಘುಗೆ ಇಲ್ಲ; ಸುಳ್ಳು-ಷಡ್ಯಂತ್ರಗಳ ಮೂಲಕ ಪಾಪದ ಹವ್ಯಕ ಸಮುದಾಯದ ದಾರಿ ತಪ್ಪಿಸಿ ದಂಗೆ ಎಬ್ಬಿಸಿ ಅನ್ಯಾಯ ದಕ್ಕಿಸಿಕೊಳ್ಳುವ ಜಾಯಮಾನ ತಮ್ಮ ಪಟಾಲಮ್ಮಿನದೆಂದು ಬಿಂಬಿಸಿಕೊಂಡಿದ್ದಾರೆ!


ತಮ್ಮ ಪರವಾಗಿ ತೀರ್ಮಾನ ಬಂದಿಲ್ಲವೆಂದು ಜನರನ್ನು ಪ್ರಚೋದಿಸುವುದು ಅಕ್ಷಮ್ಯವೇ ಸರಿ. ಪೊಲೀಸ್ ಇಲಾಖೆಯಲ್ಲಿ, ನ್ಯಾಯಾಲಯದಲ್ಲಿ, ಸರ್ಕಾರದಲ್ಲಿ ಹಸ್ತಕ್ಷೇಪ ಮಾಡುವ ರೀತಿ ಮಾತಾಡುವ ಶಂಭು ಶರ್ಮ ಬ್ಲ್ಯಾಕ್‌ಮೇಲ್‌ಗೆ ಸಾಕ್ಷ್ಯ-ಆಧಾರಗಳಿದ್ದರೆ ಅದನ್ನೇಕೆ ಸಿಐಡಿ ಮುಂದೆ, ನ್ಯಾಯಾಲಯದ ಮುಂದೆ ಮಂಡಿಸುತ್ತಿಲ್ಲ? ಪ್ರೇಮಲತಾ ದಂಪತಿಗಳನ್ನು ಹೊನ್ನಾವರದ ಪೊಲೀಸರು ಬಂಧಿಸಿದಾಗ ಅವರಿಗೆ ವಕೀಲರನ್ನು ನೇಮಿಸಿಕೊಳ್ಳುವುದಕ್ಕೆ ಮತ್ತು ತಮ್ಮ ನಿಲುವು ತಿಳಿಸಲಿಕ್ಕೂ ಏಕೆ ಅವಕಾಶ ಕೊಡಲಿಲ್ಲ? ಜೈಲಿಗೆ ಕಳಿಸಲು ಅವಕಾಶವೇ ಇಲ್ಲದ ಸೆಕ್ಷನ್‌ಗಳಲ್ಲಿ ವಾರಗಟ್ಟಲೆ ಆ ದಂಪತಿಯನ್ನು ಬಂಧನದಲ್ಲಿಟ್ಟಿದ್ದಾರು? ಇದ್ಯಾವ ಕಾವಿ ಪ್ರಭಾವ? ಜಾಮೀನು ಮೇಲೆ ಬಿಡುಗಡೆಯಾದ ನಂತರವೂ ಆ ದಂಪತಿಗಳಿಗೆ ಮಾಧ್ಯಮದ ಮುಂದೆ ಹೋಗದಂತೆ ನ್ಯಾಯಾಲಯದಿಂದ ನಿರ್ಬಂಧ ಹೊರಿಸಿದ್ದೇಕೆ? ತಪ್ಪೇ ಮಾಡದ ದಂಪತಿಗಳನ್ನು ಹವ್ಯಕ ಸಮುದಾಯದಲ್ಲಿ, ನಾಗರಿಕ-ಸಮಾಜದಲ್ಲಿ ಕಳಂಕಿತರೆಂದು ಬಿಂಬಿಸಿದ ಪಾತಕ ಯಾರದು? ಇದಕ್ಕೆಲ್ಲ 'ಚಂಬು' ಶರ್ಮನ ಬಳಿ ಉತ್ತರ ಇರಲು ಸಾಧ್ಯವೇ ಇಲ್ಲ, ಬಿಡಿ!

ಇಲ್ಲೊಂದು ಮಜಾ ಇದೆ. ಪ್ರೇಮಲತಾ ದಂಪತಿಗಳು ಖಳರೆಂದು ಬೊಬ್ಬಿರಿಯುವರು ತಮ್ಮ ಬಳಿ ಸಕಲ ಸಾಕ್ಷ್ಯ-ಆಧಾರ ಇದ್ದಿದ್ದರೆ ತೆರೆಮರೆಯಲ್ಲಿ ತರತರದ ರೀತಿಯಲ್ಲಿ ಸಂಧಾನಕ್ಕೆ ಕಳ್ಳಾಟ ನಡೆಸಿದ್ದೇಕೆ? ಸಾಮ-ಭೇದ-ದಂಡ ಬಳಸಿ ದಂಪತಿಗಳ ಹಣಿಯಲು ಹವಣಿಸಿದ್ದೇಕೆ ಎಂಬುದೇ ಚೋದ್ಯ! ಸ್ವಯಂಘೋಷಿತ ಕಾನೂನುತಜ್ಞ ಶಂಭು ಶರ್ಮನ ಪ್ರಕಾರ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಶಾಸ್ತ್ರಿ

⏭ 12


ಶ್ಯಾಮಶಾಸ್ತ್ರಿ


ರಾಮಚಂದ್ರಾಪುರ ಮಠ



ಕಲ್ಲಡ್ಕ ಪ್ರಭಾಕರ ಭಟ್ಟ

...ತ್ರಕರ್ತರಿಗೆ ನಾಲ್ಕು ಕೋಟಿ ಪ್ರಸಾದ!!

ಕೋಬ್ಬರಿ ಎರಡೂವರೆ ವರ್ಷದ ಹಿಂದೆ ಹವ್ಯಕರ ರಾಮಚಂದ್ರಾಪುರ ...ಪ್ತಿ ಸ್ವಾಮಿಯ ಅನೈತಿಕ-ಅಶ್ಲೀಲ-ಅಸಹ್ಯ ಆಟಗಳು ಆಸ್ಫೋಟಿಸಿದಾಗ ...ಬಹುತೇಕ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ನೀತಿ-ನಿಯತ್ತು-... ಧರ್ಮವನ್ನೆಲ್ಲ ಧಿಕ್ಕರಿಸಿ ದುಡ್ಡು ಮಾಡಿಕೊಂಡಿದ್ದವು. ನಾಡಿನ ...ಜ್ಜೆಗೆ ಸವಾಲು ಹಾಕಿ ನಿಂತಿದ್ದ ಕಾವಿ ಕಾಮದುರಂಧರ ರಾಘುನ ... ಬರೆದ-ಕೊರೆದ ಪತ್ರಕರ್ತರ ದಾರಿದ್ರ್ಯ ತೀರಿತೋ ಇಲ್ಲವೋ? ... ರಂಗದ ಹೆಸರಂತೂ ಕೆಟ್ಟು ಕೆರಹಿಡಿಸಿದ ಕೀರ್ತಿ ರಾಘು ಸ್ವಾಮಿಗೆ

..., ಮತ್ತೊಂದು ಟ್ಯಾಬ್ಲಾಯ್ಡ್ ಮತ್ತು ಪ್ರಜಾವಾಣಿ ಬಿಟ್ಟರೆ ಉಳಿದೆಲ್ಲ ... ಟೀಪಿಸ್ಟ್ ರಾಘುನ ಮುಖವಾಣಿಯಂತಾಗಿ ಹೋಗಿದ್ದವು. ಸುಗತ ... ರಾಜುರ ಸಂಪಾದಕತ್ವದಲ್ಲಿ ವಿಜಯ ಕರ್ನಾಟಕ ಮತ್ತು ಕನ್ನಡ ...ಸ್ಟ್ ಸತ್ಯ-ನ್ಯಾಯದ ಪರವಾಗಿ ವರದಿ ರಾಘು ಪ್ರಕರಣದಲ್ಲಿ ಬಂದಿದ್ದವು. ...ವಾಗ ಹವ್ಯಕ-ಮಾಣಿಗಳ ಸುಪರ್ದಿಗೆ ಈ ಪತ್ರಿಕೆಗಳು ಹೋದವೋ ... ಅನಾಚಾರ ಸಮರ್ಥಿಸುವ ಧರ್ಮ ಶುರುವಾಯ್ತು, ಒಂದೇ ... ಬಗ್ಗೆ ಊರಿಗೆಲ್ಲ ಬುದ್ಧಿ ಹೇಳುತ್ತ ದಿನ-ವಾರ ಕಳೆಯುವ ...ಅಂತೂ ರಾಘುನ ಸ್ತ್ರೀ ಪೀಡನೆ, ಅತ್ಯಾಚಾರ ಅನಾಚಾರದ ಬಗ್ಗೆ ...ತ್ತಿಲ್ಲ, ಚಾನೆಲ್‌ಗಳಲ್ಲಿ ರಾಘುನ ಬಂಡವಾಳ ಸಾಧ್ಯವಾದಷ್ಟು ... ಟಿವಿ ಒಂದೇ. ಕೆಲವು ಚಾನೆಲ್‌ಗಳು ಡಬ್ಬಲ್ ಗೇಮೂ ಆಡಿದವು.

ಆಗೆಲ್ಲ ಒಂದು ಸುದ್ದಿ ವ್ಯಾಪಕವಾಗಿ ಹಬ್ಬಿತ್ತು. ಅತ್ಯಾಚಾರ-ಅನಾಚಾರ ಕೇಸಿಂದ ಹೊರಬರಲು ಮಠದ ಮತ್ತು ಗೋಕರ್ಣ ದೇವಾಲಯ ಹುಂಡಿ ಖಾಲಿ ಮಾಡಿದ ರಾಘು ಸ್ವಾಮಿ ಪ್ರಮುಖ ಪತ್ರಿಕೆಗಳ ದೊರೆಗಳ ಬಾಯಿಗೂ ಕಾಸು ತುರುಕಿ ಬಂದ್ ಮಾಡಿದ್ದಾನೆಂಬ ಗುಲ್ಲೆದ್ದಿತ್ತು. ಇದನ್ನು ಸಮರ್ಥಿಸಿದ ರೀತಿಯಲ್ಲೇ ಹಲವು ಪತ್ರಕರ್ತರೂ ವರ್ತಿಸಿದ್ದರು. ಇಡೀ ಮಾಧ್ಯಮ ರಂಗವನ್ನು ಪ್ರಚಂಡ ಪತ್ರಕರ್ತಗ್ರೇಸ ವಿಷ ಭಟ್ಟ ನಿಭಾಯಿಸಿದ್ದ! ಆತ ತಾನೂ ಮಠದ ಹುಂಡಿ ಕೊಳ್ಳೆ ಹೊಡೆದ, ಗೆಳೆಯರಿಗೂ ಹಂಚಿದನೆಂಬ ಜೋಕು ಇವತ್ತಿಗೂ ಹವ್ಯಕರ ಕೇರಿಯಲ್ಲಿ ಚಾಲ್ತಿಯಲ್ಲಿದೆ. ತನಗಿರುವ ಅಷ್ಟೂ ಕಾಂಟೆಕ್ಟ್ ಬಳಸಿ ಆತ ಮಾನಗೇಡಿ ಸ್ವಾಮಿ ರಾಘುನ ಸಂರಕ್ಷಿಸಲು ಮಾಡಿದ ಹಿಕಮತ್ತು ಒಂದೆರಡಲ್ಲ.



ರಾಘುನ ರೇಪ್ ರಾದ್ಧಾಂತದಲ್ಲಿ ಮಾಧ್ಯಮಗಳು ಭ್ರಷ್ಟಾಚಾರದ ಸಂಶಯಕ್ಕೆ ಈಡಾಗಿದ್ದವು. ಈಗ ಇದನ್ನು ಹಿರಿಯ ಪತ್ರಕರ್ತರೂ ಶಾಸ್ತ್ರಿ ದಂಪತಿ ಮತ್ತು ಪತ್ರಕರ್ತ ಪರಾಕ್ರಮಿ ವಿಷ ಭಟ್ಟನ ರಕ್ತ ಸಂಬಂಧಿಯೂ ಆಗಿರುವ ಸಚ್ಚಿದಾನಂದ ಹೆಗಡೆ ಪಕ್ಕಾ ಮಾಡಿದ್ದಾರೆ. ಶಾಸ್ತ್ರಿ ದಂಪತಿಗಳನ್ನು ರಾಘು ಸ್ವಾಮಿಯ ತಿರಬೋಕಿ ಶಿಷ್ಯನೊಬ್ಬ ನೀಡಿದ ಸುಳ್ಳು ಬ್ಲ್ಯಾಕ್‌ಮೇಲ್ ಕೇಸಿನ ಆಧಾರದಲ್ಲಿ ಬಂಧಿಸಿದ ಕೂಡಲೇ ರಾಘುನ ವಿರುದ್ಧ ಏನೂ ಬರೆಯದಂತೆ ರಾಜ್ಯದ ಎಲ್ಲ ಮಾಧ್ಯಮಗಳ ಮೇಲೆ ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಗಿತ್ತು. ಆಗ ಸಚ್ಚಿದಾನಂದ ಹೆಗಡೆ ಪತ್ರಕರ್ತನೆಂಬ ಚಲಾವಣೆ ಬಳಸಿಕೊಂಡು ರಾಜ್ಯದ ಪ್ರಮುಖ ಪತ್ರಿಕೆಯ ಸಂಪಾದಕರನ್ನು ಭೇಟಿಯಾಗಿದ್ದರು. ರಾಘು ರೇಪ್-ಶಾಸ್ತ್ರಿ ಬ್ಲ್ಯಾಕ್‌ಮೇಲ್ ಕೇಸ್‌ನ ವಸ್ತುಸ್ಥಿತಿ ತಿಳಿಸಿದ್ದರು.

ಆ ಸಂದರ್ಭದಲ್ಲಿ ಸಚ್ಚಿಗೆ ರಾಘುನ ಮಠಬಾನಿಗಳು ಮಾಧ್ಯಮದ ಮಹಾಮಹಿಮರಿಗೆ ಕೋಟಿ-ಕೋಟಿ ಲಂಚ ಕೊಟ್ಟ ವಿಷಯ ನಂಬಲರ್ಹವಾಗಿ ಸಿಕ್ಕಿತ್ತು. ಹೀಗೆ ಮಾಧ್ಯಮದವರಿಗೆ ಮಠದವರು ಹಂಚಿದ್ದು ಹೆಚ್ಚು-ಕಮ್ಮಿ ನಾಲ್ಕು ಕೋಟಿ ರೂಪಾಯಿಗಳಂತೆ ಎಂಬುದು ಸಚ್ಚಿಗೆ ಪಕ್ಕಾ ಆಗಿತ್ತು. ರಾಘುನಿಂದ ಪಾಪದ ಹಣ ಪಡೆದವರು ಆತನ ಕಾಮ ಕಾಂಡ ಕೋರ್ಟಲ್ಲೇ ಸಾಬೀತಾದರೂ, ಆತ ವೈದ್ಯಕೀಯ ಪರೀಕ್ಷೆಗೆ ಚಕ್ಕರ್ ಹೊಡೆದರೂ, ನ್ಯಾಯಾಂಗ-ಕಾರ್ಯಾಂಗಗಳನ್ನೆಲ್ಲ ಹಾದಿ ತಪ್ಪಿಸಿದರೂ ಸತ್ಯ ಬರೆಯುವುದಾದರೂ ಹೇಗೆ, ಪಾಪ?! ಮಾಧ್ಯಮ ಧರ್ಮ ದೋಖಾ ಸ್ವಾಮಿಯ ಪೀಠಕ್ಕೆ ಅಡ ಇಟ್ಟವರಿಗೆ ಧಿಕ್ಕಾರವಿರಲಿ!!


11◀◀ಠುಸ್ ಆದ..


ದಂಪತಿಗಳು ನೀಡಿರುವ ತಪ್ಪೊಪ್ಪಿಗೆ ಹೇಳಿಕೆ ಮತ್ತು ಮಾಡಲಾದ ಪಂಚನಾಮೆಗಳೇ ರಾಘುನ ಪರವಾಗಿರುವ ಪ್ರಬಲ ಸಾಕ್ಷಿಗಳಂತೆ! ಆದರೆ ಆರಕ್ಷಕ ಠಾಣೆಯಲ್ಲಿ ಆರೋಪಿ ನೀಡುವ ಯಾವ ಹೇಳಿಕೆಯೂ ಶಿಕ್ಷೆಗೆ ಪ್ರಬಲ ಆಧಾರ ಆಗುವುದೇ ಇಲ್ಲ, ಪೊಲೀಸರ ಕಿರುಕುಳ, ಬಂಧನದಿಂದ ಪಾರಾಗಲು ಕೊಟ್ಟ ಹೇಳಿಕೆ ಕೇಸು ಗೆಲ್ಲಲು ನೆರವಾಗುವುದಿಲ್ಲ, ಕ್ರಿಮಿನಲ್ ಕೇಸುಗಳಲ್ಲಿ ಕಸ್ಟಡಿಯಲ್ಲಿ ಕೊಡಲಾದ ಹೇಳಿಕೆಗಳೆಲ್ಲವೂ ಸಾಕ್ಷ್ಯವಾಗಿ ನ್ಯಾಯಾಲಯವೂ ಪರಿಗಣಿಸುವುದಿಲ್ಲ, ಹೀಗಾಗಿ ನ್ಯಾಯಾಲಯ ಕಸ್ಟಡಿಯ ಹೇಳಿಕೆಗೆ ಪಕ್ಕಾ ಸಾಕ್ಷ್ಯ ಕೇಳುತ್ತದೆ.

ಕಾನೂನಿನ ಕನಿಷ್ಠ ಜ್ಞಾನ ಇರುವವರಿಗೆಲ್ಲ ಇದು ಗೊತ್ತಿರುವ ಸಂಗತಿ. ನಾಚಿಕೆಗೇಡಿನ ಸಂಗತಿಯೆಂದರೆ ವಕೀಲಾಗ್ರೇಸ ಶಂಭು ಶರ್ಮರಿಗೆ ಇದ್ಯಾಕೋ ಅರ್ಥವೇ ಆದಂತಿಲ್ಲ, "No confession made to police officer shall be proved as against the person accused of any offence" ಎಂದು section 25 of Evidence Act 1872 ಹೇಳುತ್ತದೆ. ಅದೇ ಸೆಕ್ಷನ್‌ನ 26- confesstion made by accused while in custody of police shall not be proved as against him/her (unless it is made before a magistrate)

ಈ ಆಕ್ಟ್, ಸೆಕ್ಷನ್‌ಗಳೆಲ್ಲವೂ ದಿವಾಕರ-ಪ್ರೇಮಲತಾ ದಂಪತಿಗಳಿಗೆ ಅಕ್ಷರಶಃ ಅನ್ವಯವಾಗುತ್ತದೆ. ಅವರ ಮೇಲಾದ ಪೊಲೀಸ್ ದಾಳಿಯೇ ಅನಿರೀಕ್ಷಿತ-ಆಘಾತಕಾರಿ. ರಾಘು ಸ್ವಾಮಿ ಯಾವುದೇ ಪ್ರತೀಕಾರವಿಲ್ಲದೆ ಪೀಠತ್ಯಾಗದ ವಾಗ್ದಾನ ಸಂಧಾನಕಾರರಿಗೆ ನೀಡಿ ಕಳಿಸಿದ್ದ. ಹಾಗಾಗಿ ರಕ್ಷಣಾತ್ಮಕವಾದ ಯಾವ ತಯಾರಿಯೂ ಶಾಸ್ತ್ರಿ ದಂಪತಿ ಮಾಡಿಕೊಂಡಿರಲಿಲ್ಲ, ಹಠಾತ್ ಬೆಳೆದುನಿಂತ ಇಬ್ಬರು ಹೆಣ್ಣುಮಕ್ಕಳನ್ನು ತಬ್ಬಲಿ ಮಾಡಿ ಪೊಲೀಸರ ಜತೆ ಹೋಗಬೇಕಾದ ಅಸಹಾಯಕತೆ ಅವರದಾಗಿತ್ತು. ಹೊನ್ನಾವರ ಮತ್ತು ಕಾರವಾರದಲ್ಲಿ ಪೊಲೀಸರು ನಾನಾ ನಮೂನೆಯ ದಬ್ಬಾಳಿಕೆ ನಡೆಸಿದ್ದರು. ನ್ಯಾಯಾಲಯದಲ್ಲೂ ಅನ್ಯಾಯವೇ ಆಗಿತ್ತು. ಪೊಲೀಸರು ಅನೇಕ ಹೇಳಿಕೆ ಕಾಗದ ಪತ್ರಗಳ ಮೇಲೆ ಬಲವಂತದಿಂದ ಸಹಿಯೂ ಪಡೆದಿದ್ದರು. ಅವರ ವಕೀಲರಿಗೂ ಭೇಟಿ ಮಾಡದಂತೆ ಪೊಲೀಸರು ತಡೆದಿದ್ದರು. ಇಂಥ ದಿಗ್ಭ್ರಮೆಯ ಸಂದರ್ಭದಲ್ಲಿ ಪ್ರೇಮಲತಾ-ದಿವಾಕರ್ ಸಹಿ ಮಾಡಿದ ಹೇಳಿಕೆಗಳಿಗೆ ಮಾನ್ಯತೆ ಇರಲು ಸಾಧ್ಯವಾ?

ರಾಘುನ ವಕ್ತಾರ ಶಂಭು ಶರ್ಮ ಸುಳ್ಳನ್ನು ದೊಡ್ಡ ಗಂಟಲಿನಲ್ಲಿ ಹೇಳಿ ಜನರನ್ನು ವಿರೋಧಿಸುವ ವಿದ್ಯೆಯಲ್ಲಿ ಪ್ರವೀಣ. ಗೊಂದಲದ ಹೇಳಿಕೆ ನೀಡಿ ದಿಕ್ಕುತಪ್ಪಿಸುವ ಕಲಾ ಕೋವಿದ! ಬ್ಲಾಕ್‌ಮೇಲ್‌ಗೆ ದೊಡ್ಡ-ದೊಡ್ಡ ಸಾಕ್ಷ್ಯ-ಆಧಾರ-ಪಂಚನಾಮೆ ಇದೆಯೆನ್ನುವ ಶಂಭು ಶರ್ಮನಿಗೆ ತನ್ನ ಗುರುವರ್ಯ ರಾಘೂ ಸ್ವಾಮಿ ಕಡೆಯವರು ಶಾಸ್ತ್ರಿ ದಂಪತಿಗಳಿಗೆ, ಅವರ ಹತ್ತಿರದ ಬಂಧುಗಳಿಗೆಲ್ಲ ಅಡಿಗಡಿಗೆ ಕಾಡಿ ಸಂಧಾನಕ್ಕೆ ಹಾತೊರೆದದ್ದು ಗೊತ್ತಿಲ್ಲವಾ? ಪ್ರೇಮಲತಾರ ಖಾಸಾ ಅಕ್ಕನ ಗಂಡ (ಭಾವ) ಸಚ್ಚಿದಾನಂದ ಹೆಗಡೆ ಮೇಲೆ ರಾಘುಸ್ವಾಮಿ ಕಡೆಯವರು ಪದೇಪದೇ ಒತ್ತಡ ಹೇರಿ ರಾಜಿ ಮಾಡಿಸುವಂತೆ ಕಾಡಿದ್ದರು. ಈ ಸಚ್ಚಿದಾನಂದ ಹೆಗಡೆ ಆರ್‌ಎಸ್‌ಎಸ್ ಕಟ್ಟಾಳು, ಹಿರಿಯ ಪತ್ರಕರ್ತ. ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಮಾಜಿ ಅಧ್ಯಕ್ಷರು.





ಈಗ ವಿಶ್ವವಾಣಿ ಎಂಬ ಪತ್ರಿಕೆ ನಡೆಸುತ್ತಿರುವ ಗ್ರೇಟ್ ಪತ್ರಕರ್ತ ವಿಶ್ವೇಶ್ವರ ಭಟ್ಟರ ಸೋದರ ಮಾವ. ರಾಘುನ ರಾಸಲೀಲಾ ರಗಳೆ ಬೀದಿಗೆ ಬಂದಾಗ ಭಟ್ರು ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಚಾನೆಲ್‌ನ ಸಂಪಾದಕರಾಗಿದ್ದರು. ಕಚ್ಚೆ ಹರುಕ ರಾಘುನ ವಹಿಸಿಕೊಂಡು ರೀಮುಗಟ್ಟಲೆ ಬರೆಯುವ ಭಟ್ರು ಏನೆಲ್ಲಾ ಸಾಧ್ಯವೋ ಅದೆಲ್ಲ ಗುರುವಿನ 'ಮಾನ' ಕಾಪಾಡಲು ಮಾಡುತ್ತ ಬಂದಿದ್ದಾರೆ. ಇಂಥ ಭಟ್ರು ಮಾವ ಸಚ್ಚಿದಾನಂದ ಹೆಗಡೆ ಮೇಲೆ ಸತತವಾಗಿ ಒತ್ತಡ ಹಾಕಿ ಮೈದಿನಿ-ಷಡ್ಡಕ (ಪ್ರೇಮಲತಾ-ದಿವಾಕರ್) ಸ್ವಾಮಿ ತಂಟೆಗೆ ಬರದಂತೆ ನೋಡಿಕೊಳ್ಳಲು ಒತ್ತಾಯಿಸಿದ್ದರು.



ಇದನ್ನು ಅಳಿಯ ಭಟ್ರು ಹೆಸರು ಹೇಳದೆ ಸಚ್ಚಿ ಹೇಳುತ್ತ ಬಂದಿದ್ದಾರೆ. ಮೊನ್ನೆಯೂ ಆತ ಹುಬ್ಬಳ್ಳಿಯಲ್ಲಿ ಇದನ್ನೇ ಹೇಳಿದ್ದಾರೆ. ಶಾಸ್ತ್ರಿ ದಂಪತಿಗಳು 2014 ಆಗಸ್ಟ್ 26ರಂದು ಹೊನ್ನಾವರ ಪೊಲೀಸರ ಪಾಲಾದಾಗ ತಾನು ಮತ್ತು ಪ್ರೇಮಲತಾರ ಅಣ್ಣ ಜಾಮೀನಿಗಾಗಿ ಹಗಲಿರುಳೂ ಒದ್ದಾಡುತ್ತಿದ್ದಾಗ ತನಗೆ ಹತ್ತಿರದವರೂ ರಾಜ್ಯದ ಬಹು ಪ್ರತಿಷ್ಠಿತ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮದ ಸಂಪಾದಕರೂ ಆಗಿರುವ ಓರ್ವರು ಅನೇಕ ಬಾರಿ ಫೋನಾಯಿಸಿ ಸಂಧಾನ ಏರ್ಪಡಿಸುವಂತೆ ಹೇಳಿದ್ದರು ಎಂದು ಸಚ್ಚಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಪಾಟೀಲು ಪುಟ್ಟಪ್ಪನಂಥ ಹಿರಿಯ ಪತ್ರಕರ್ತರ ಸಮ್ಮುಖದಲ್ಲೇ ರೇಪಿಸ್ಟ್ ರಾಘು ಸ್ವಾಮಿ ಪರ ವಕಾಲತ್ತು ಮಾಡಿದ ಪ್ರತಿಷ್ಠಿತ ಪತ್ರಕರ್ತ ಪರಾಕ್ರಮಿಯ ಬಣ್ಣ ಬಯಲಾಗಿಸಿದ್ದಾರೆ. ಆತನ ಹೆಸರು ಸಚ್ಚಿ ಹೇಳದಿದ್ದರೂ ಆತ ವಿಷಭಟ್ಟನೇ ಎಂಬುದು ಎಲ್ಲರಿಗೂ ಖಾತ್ರಿಯಾಗುತ್ತದೆ!

2014 ಆಗಸ್ಟ್ **30**ರ ರಾತ್ರಿಯಂತೂ **11** ರಿಂದ **1** ಗಂಟೆ ತನಕ ಎಡಬಿಡದೆ ಮಾವನಿಗೆ ಅಳಿಯ ಗಂಟುಬಿದ್ದು ಗುರುವನ್ನು ಕಾಪಾಡುವಂತೆ ಕಾಡಿದ್ದರಂತೆ! ಇದೇ ವಿಷ ಭಟ್ಟ ಒಮ್ಮೆ ಸಿಐಡಿ ಆಫೀಸಿನಲ್ಲಿ ದಿವಾಕರ ಶಾಸ್ತ್ರಿಗೆ ಎದುರಾದಾಗಲೂ- "ಈಗಲೂ ಕಾಲಮಿಂಚಿಲ್ಲ... ರಾಜಿ ಆಗಿರಿ..." ಎಂದು ಕಿರಿಕಿರಿ ಎಬ್ಬಿಸಿದ್ದ! ಹೊನ್ನಾವರದಲ್ಲಿ ಕೇಸು ದಾಖಲಾಗುವ ಮೊದಲೇ ಬೆಂಗಳೂರಲ್ಲಿ ಶಾಸ್ತ್ರಿ ದಂಪತಿಗಳನ್ನು ಹೊನ್ನಾವರದ ಪೊಲೀಸರು ವಶಕ್ಕೆ ಪಡೆದಿದ್ದರು. 2014ರ ಆಗಸ್ಟ್ 26ರಂದು ಹೊನ್ನಾವರಕ್ಕೆ ಪೊಲೀಸರು ಶಾಸ್ತ್ರಿ ದಂಪತಿಗಳನ್ನು ಕರೆತರುವ ಹೊತ್ತಲ್ಲಿ ಬೆಂಗಳೂರಿನ ದೊಡ್ಡ ವಕೀಲರ ಮರಿ ಸಹಾಯಕ ರಾಜಿಗೆ ಸಲಹೆ ನೀಡಿದ್ದ. ಶಾಸ್ತ್ರಿ ದಂಪತಿ ಕಾರವಾರದ ಸೆರೆವಾಸದಲ್ಲಿದ್ದಾಗ ರಾಘೂನ ನಿಗೂಢ ದಂಧೆ ದೋಸ್ತ್-ಭಟ್ಟಳದ ಭೂಗತ ದಂಧೆ ದೊರೆಯೂ ಆಗಿರುವ ಶಾಸಕ ಮಂಕಾಳ ವೈದ್ಯ ಅಧಿಕಾರಿಗಳನ್ನು ಸಂಧಾನಕ್ಕೆ ಕಳಿಸಿ [illegible]


ಜಾಮೀನು ಪಡೆದು ಶಾಸ್ತ್ರಿ ದಂಪತಿ ಬೆಂಗಳೂರಿ[illegible] ಬಂದ ಬಳಿ ಅನೇಕರು, ಅನೇಕ ಬಾರಿ ರಾಜಿಗೆ [illegible] ಪ್ರಯತ್ನ ನಡೆಸಿದ್ದರು. ಮಂತ್ರಿ ದೇಶಪಾಂಡೆಯಂ[illegible] ಶಾಸ್ತ್ರಿಗಳ ವಕೀಲರಿಗೆ ಫೋನಾಯಿಸಿ ರಾಜಿಗೆ ಒಪ್ಪಿಸು[illegible] ತಾಕೀತು ಮಾಡಿದ್ದರು. ರಾಘು ಮತ್ತು ದೇಶಪಾಂ[illegible] ನಂಟು ನಿಗೂಢವಾಗಿದೆ. ರಾಜಕೀಯವಾಗಿ ರಾಘುವಿ[illegible] ಉತ್ತರ ಕನ್ನಡದಲ್ಲಿ ದೇಶಪಾಂಡೆಗೆ ಪೈಸೆ ಪ್ರಯೋಜನವಿ[illegible] ಹವ್ಯಕರು ದೇಶಪಾಂಡೆ ಸಂತಾನಕ್ಕೇ ಮತ ಕೊಡುವುದ[illegible] ಸಾಧ್ಯವೇ ಇಲ್ಲ, ರಾಘುನ ಮಂತ್ರಾಕ್ಷತೆಗೂ ಹವ್ಯಕ[illegible] ಕೇರ್ ಮಾಡದೆ ದೇಶಪಾಂಡೆ ಸೋಲಿಸುತ್ತಾರೆಂಬುದ[illegible] ಅನುಮಾನವೇ ಬೇಡ. ಹೀಗಿರುವಾಗ ರಾಘು-ದೇಶಪಾಂ[illegible] ಅನ್ಯೋನ್ಯವಾಗಿರುವುದು ಅನೇಕ ಅನುಮಾನ ಮೂಡಿಸಿ[illegible] ಆರಂಭದಲ್ಲಿ ರಾಘುನ ಪೊಲೀಸರು ಬಂಧಿಸದಂತೆ ತಡೆದಿದ್ದ ಈ ದಗಲುಬಾಜಿ ದೇಶಪಾಂಡೆ!

ಈಗ ದಿನಪತ್ರಿಕೆಯೊಂದರ ಸ್ಥಾನಿಕ ಸಂಪಾದಕನಾ[illegible] ಹುಬ್ಬಳ್ಳಿಯಲ್ಲಿರುವ ಶಿರಸಿ ಮೂಲದ ಹವ್ಯ[illegible] ಪತ್ರಕರ್ತನೋರ್ವ ಸಚ್ಚಿಗೆ ತಾಸುಗಟ್ಟಲೆ ಫೋನಲ್ಲಿ ಕೊರೆದು ರಾಘು ಸ್ವಾಮಿ ವಿರುದ್ಧ ಹೋಗದಂತೆ ಹೇಳಿದ್ದನಂತೆ. ಹೀಗೆ ಅಡ್ಡದಾರಿಯಲ್ಲಿ ಸಂಧಾನ-ರಾಜಿಗೆ ರಗಳೆ ಮಾಡಿ[illegible] ರಾಘುನ ಮಠಬಾನಿ ಪಡೆಯ ಪರಾಕ್ರಮಿಗಳು ಬ್ಲಾಕ್‌ಮೇಲ್ ಮಾಡಿದ ಬಗ್ಗೆ ಸಾಕ್ಷಿ-ಸಾಕ್ಷ್ಯ-ಪಂಚನಾಮೆಯಿದೆ ಎಂದು ಹುಚ್ಚುಚ್ಚಾಗಿ ಹಲಬುವುದೇ ಹಾಸ್ಯಾಸ್ಪದ!! ಬಿ-ರಿಪೋರ್ಟ್ ವಿರುದ್ಧ ಪ್ರತಿಭಟನೆ ಮಾಡುವ ಬೆದರಿಕೆ ರಾಘು [illegible] ವಕೀಲ ಚೇಲಾನ ಮೂಲಕ ಹಾಕಿಸಿದ್ದಾನೆ. ಈ ಹಲ್ಕಟ್ ಸ್ವಾಮಿಯ ಜಾಯಮಾನವೇ ಅಷ್ಟು. ತನ[illegible] ನ್ಯಾಯಾಲಯದಲ್ಲಿ, ಕಾರ್ಯಾಂಗದಲ್ಲಿ ಪ್ರತಿಕೂಲ ತೀರ್ಪು ಬರುತ್ತಿದೆ ಎಂದಾಗ 'ಹುಸಿ ದಂಗೆ' ಎಬ್ಬಿಸಿ ದುಲಾ[illegible] ಪಡೆಯುವುದು ರಾಘೂನ ಜನ್ಮಕ್ಕಂಟಿದ ಹೀನಚಾ[illegible] ನ್ಯಾಯಾಧೀಶರ ಮೇಲೂ ಅವಿಶ್ವಾಸ ಮಂಡಿಸಿ ಪಾರಾಗಲು ಈ ದಗಾಕೋರ ಸನ್ಯಾಸಿ ಹಲವು ಬಾರಿ ಹವಣಿಸಿ[illegible] ದಾಖಲೆ ಇದೆ.

ರಾಘೂನ ರೇಪ್ ಕೇಸ್‌ನಲ್ಲಿ ಬರೋಬ್ಬರಿ ನಾಲ್ವರು ನ್ಯಾಯಮೂರ್ತಿಗಳು ಪೀಠತ್ಯಾಗ ಮಾಡಿದ್ದರು. ಗೋಕರ್ಣ ದೇವಸ್ಥಾನ ಹಸ್ತಾಂತರ ಕೇಸಲ್ಲಿ ಮುಖ್ಯ ನ್ಯಾಯಮೂರ್ತಿಗಳ[illegible] ಹಿಂದೆ ಸರಿದಿದ್ದಾರೆ. ಮಾಡಬಾರದ ಕೊಳಕು ಕರ್ಮಕಾಂಡ ಮಾಡಿಯೂ ನ್ಯಾಯಾಂಗ-ಶಾಸಕಾಂಗ-ಕಾರ್ಯಾಂಗ ಕೊನೆಗೆ ಇಡೀ ಸಮಾಜವನ್ನೇ ದಿಕ್ಕು ತಪ್ಪಿಸುತ್ತಿರುವ ಮಹಾ ಮಾಯಾವಿ ರಕ್ಕಸ ರಾಘೂಗೆ ಪಾಠ ಕಲಿಸುವ ನೈತಿಕ ಹೊಣೆಗಾರಿಕೆ ಹವ್ಯಕರ ಮೇಲಿದೆ. ಇಲ್ಲದಿದ್ದರೆ ಈ ದಾರಿ ತಪ್ಪಿದ ಸನ್ಯಾಸಿ ಸಾತ್ವಿಕ ಹವ್ಯಕ ಕುಲಕ್ಕೆ ಶಾಶ್ವತ ದೃಷ್ಟಿ ಬೊಟ್ಟೇ!!

■ ಶುದ್ದೋಧನ

...ನ್ನನ್ನು ಭಗವಾನ್ ಕೃಷ್ಣನಿಗೆ ಹೋಲಿಸುವ ದಾರ್ಷ್ಟ್ಯ ನೋಡಾ



ಮಾನವರ ನಡವಳಿಕೆಯ ಹರವಿಗೆ ಪರಿಮಿತಿಗಳಿವೆ ... ನಂಬಿದ್ದ ನಮ್ಮ ಪೂರ್ವಜರು, ಯಾರು ತಮ್ಮ ...ಕಾರದ ಮದದಿಂದ ಆ ಮಿತಿಗಳನ್ನು ಉಲ್ಲಂಘಿಸು... ಅಂಥವರು ವಿಧಿಯ ಅವಕೃಪೆಗೆ ಪಾತ್ರರಾಗು...ದು ಎಚ್ಚರಿಸಿದ್ದರು. ಆದರೂ ಕೆಲವು ರಾಜಕಾರಣಿಗಳು ...ಕೆ ಎಚ್ಚರಿಕೆಯೊಂದು ಇಲ್ಲವೆಂಬಂತೆ ವರ್ತಿಸುವ ...ರೆ. ಚುನಾವಣೆಗಳ ಕಾಲದಲ್ಲಿ ಇದು ಜಾಸ್ತಿಯಾಗುತ್ತದೆ.

ಇತ್ತೀಚಿನ ಪುರಾವೆಯೆಂದರೆ ಮೊನ್ನೆ ಉತ್ತರ ...ಶದಲ್ಲಿ ನಡೆದ ಚುನಾವಣಾ ಪ್ರಚಾರ ರ್‍ಯಾಲಿಯೊಂದರ ...ಪ್ರಧಾನಿ ಮೋದಿ ತನ್ನನ್ನು ಭಗವಾನ್ ಕೃಷ್ಣನೊಂದಿಗೆ ...ಲಿಸಿಕೊಂಡಿರುವುದು. ಓರ್ವ ಮನಮೋಹಕ ದೇವತಾ...ಷನೂ ರಾಜತಂತ್ರಜ್ಞನೂ ಆಗಿದ್ದ ಕೃಷ್ಣನನ್ನು ದತ್ತು ...ಸಲಾದ ವಿಚಾರವನ್ನು ಉಲ್ಲೇಖಿಸಿದ ಮೋದಿ, ಉತ್ತರ ...ಶ ಹೇಗೆ ಕೃಷ್ಣನನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಿತ್ತೊ ... ತನ್ನನ್ನೂ ಸ್ವೀಕರಿಸಿದೆ ಎಂದು ಹೇಳಿದ. ಮುಂದು...ು, ಈಗ ನಿಜವಾದ ಮಗನಂತೆ ತನ್ನ ತಾಯ್ತಂದೆ...ಯಾಗಿರುವ ಉತ್ತರ ಪ್ರದೇಶದ ಸೇವೆಯಲ್ಲಿ ತೊಡಗುವ ...ಕೆಯನ್ನು ವ್ಯಕ್ತಪಡಿಸಿದ.

... "ದತ್ತು ಸ್ವೀಕಾರ" ಎಂಬುದರ ಸರಿಯಾದ ಅರ್ಥ ...ದು ಅರಿತಾಗ ಮೋದಿ ತನ್ನನ್ನು ಕೃಷ್ಣನಿಗೆ ಹೋಲಿಸಿರು... ತಪ್ಪು ಎಂದು ತಿಳಿದುಬರುತ್ತದೆ. ದತ್ತು ಸ್ವೀಕಾರದ ... ಧರ್ಮಶಾಸ್ತ್ರಗಳಲ್ಲಿ ಹೇಳಿರುವುದನ್ನು ಪರಿಗಣಿಸಿದರೆ ...ಜಾರ್ಥದಲ್ಲಿ ದತ್ತುಪುತ್ರನಲ್ಲ. ವಸಿಷ್ಠ ಧರ್ಮಸೂತ್ರದಲ್ಲಿ ...(36-37) ಹನ್ನೆರಡು ವಿಧದ ಹಿಂದೂ ಪುತ್ರರ ... ನಿಖರ ವಿವರಣೆಗಳನ್ನು ನೀಡಲಾಗಿದೆ. ಆ ವಿವರಣೆ...ಕಾರ ತನ್ನ ಹೆತ್ತವರಿಂದ (ಯಾವುದೇ ಕಾರಣಕ್ಕಾಗಿ) ...ಸಲ್ಪಟ್ಟು ಅನ್ಯ ತಂದೆತಾಯಂದಿರಿಂದ ಸ್ವೀಕರಿಸಲ್ಪಡುವ ...ನ್ನು ಓರ್ವ ಅಪವಿದ್ಧ ಪುತ್ರ ಎಂದೆ ಕರೆಯಬೇಕು.

...ೋದಿ ಹೀಗೆ ತನ್ನನ್ನು ಭಗವಾನ್ ಕೃಷ್ಣನಿಗೆ ...ಲಿಸುವ ಭರದಲ್ಲಿ ಇನ್ನೊಂದು ಗೊಂದಲವೂ ...ಾಗಿದೆ. ಅದೇನೆಂದರೆ ಕೃಷ್ಣ ಹುಟ್ಟಿರುವುದು ಯಾದವ ...ಲ್ಲಲ್ಲ (ಇಂದು ಹಿಂದುಳಿದ ಜಾತಿ), ಕ್ಷತ್ರಿಯ ಕುಲದಲ್ಲಿ! ... ವೃಷ್ಣಿ ಎಂಬ ಕ್ಷತ್ರಿಯ ಕುಲದಲ್ಲಿ ಜನಿಸಿದವನು.

ಹೀಗಾಗಿ ಅವನಿಗೆ ವಾರ್ಷ್ಣೇಯ ಎಂಬ ಹೆಸರು ಕೂಡಾ ಇದೆ. ಕೃಷ್ಣನ ನೈಸರ್ಗಿಕ ತಂದೆ ವಸುದೇವ ಮತ್ತು ತಾಯಿ ದೇವಕಿ ಇಬ್ಬರೂ ಕ್ಷತ್ರಿಯರು. ದೇವಕಿಯ ಸಹೋದರ ರಾಜಾ ಕಂಸ ಓರ್ವ ದುಷ್ಟ ವ್ಯಕ್ತಿಯಾಗಿದ್ದ. ಅವನ ಸಹೋದರಿಗೆ ಹುಟ್ಟುವ ಗಂಡುಮಗುವಿನಿಂದ ಅವನ ಪ್ರಾಣಕ್ಕೆ ಅಪಾಯವಿದೆ ಎಂದು ಜೋತಿಷಿಗಳು ಕಂಸನಿಗೆ ಎಚ್ಚರಿಕೆ ನೀಡಿದಾಗ ಅವನು ವಸುದೇವ, ದೇವಕಿಯರನ್ನು ಬಂಧಿಸಿ ಸೆರೆಮನೆಗೆ ತಳ್ಳುತ್ತಾನೆ. ಅವರು ಸೆರೆಮನೆಯಲ್ಲಿದ್ದಾಗ ಕೃಷ್ಣನ ಜನನವಾಗುತ್ತದೆ. ಮಗುವನ್ನು ಕೂಡಲೆ ಯಾರಿಗೂ ತಿಳಿಯದ ಹಾಗೆ ಹೊರಗೆ ಸಾಗಿಸಿ ಗೋಕುಲದ ಸಿರಿವಂತ ಗೋಪಾಲಕನಾದ ನಂದನ ಮನೆಯಲ್ಲಿ ತಂದಿರಿಸಲಾಗುತ್ತದೆ. ಆಗ ತಾನೆ ಜನಿಸಿದ ನಂದನ ಹೆಣ್ಣು ಶಿಶುವನ್ನು ವಸುದೇವ, ದೇವಕಿಯರ ಕೋಣೆಯಲ್ಲಿ ಇರಿಸಲಾಗುತ್ತದೆ. ಆದುದರಿಂದಲೆ ಕೃಷ್ಣ ಸಾಂಪ್ರದಾಯಿಕ ರೀತಿಯಲ್ಲಿ ನಂದ, ಯಶೋದೆಯರಿಂದ ದತ್ತು ಸ್ವೀಕರಿಸಲ್ಪಟ್ಟವನಲ್ಲ.

ಸದಾ ಉಲ್ಲಾಸದಿಂದ ಕೂಡಿರುತ್ತಿದ್ದ ತುಂಟ ಕೃಷ್ಣ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಅನೇಕ ಹೃದಯಗಳನ್ನು ಗೆದ್ದಿದ್ದ. ಆದರೆ ಸಾರಭೂತವಾಗಿ ಓರ್ವ ಯೋಧನೂ ರಾಜನೀತಿಜ್ಞನೂ ಆಗಿದ್ದ ಅವನು ಮಥುರಾ ಗೋಕುಲಗಳಿಂದ ದೂರದಲ್ಲಿದ್ದ (ಈಗಿನ ಗುಜರಾತ್‌ನಲ್ಲಿರುವ) ದ್ವಾರಕೆಯ ಅರಸನಾಗಿ ದ್ವಾರಕಾಧೀಶನೆಂದು ಕರೆಯಲ್ಪಡುತ್ತಿದ್ದ. ಒಮ್ಮೆ ಮಹಾಪೂರವೊಂದು ದ್ವಾರಕೆಯನ್ನು ಸಂಪೂರ್ಣವಾಗಿ ಮುಳುಗಿಸಿತು. ಮುಂದೆ ಒಡಹುಟ್ಟಿದವರ ನಡುವೆ ನಡೆದ ಕಲಹದಲ್ಲಿ (ಯಾದವೀ ಕಲಹ) ಯಾದವರು ಪರಸ್ಪರರನ್ನು ಕೊಂದುಕೊಂಡರು. ಬೇಟೆಗಾರನೊಬ್ಬ ಕೃಷ್ಣನ ಪಾದವನ್ನು ಜಿಂಕೆಯ ಕಿವಿಯೆಂದು ಭಾವಿಸಿ ಬಾಣ ಬಿಟ್ಟಾಗ ಕೃಷ್ಣನ ದೇಹಾಂತವಾಯಿತು.

ಕುತಂತ್ರ

ಚತುರ ರಾಜಕಾರಣಿಗಳು ತಮ್ಮ ಕೆಲವು ಉದ್ದೇಶಗಳನ್ನು ಈಡೇರಿಸುವುದಕ್ಕೋಸ್ಕರ ಬಳಸುವ ಸಾಂಪ್ರದಾಯಿಕ ಕುತಂತ್ರವೆಂದರೆ ನೈಜ ಇತಿಹಾಸವನ್ನು ಮರೆಮಾಚಿ ಕಟ್ಟುಕತೆಗಳನ್ನು ಸೃಷ್ಟಿಸುವುದು. ಕೃಷ್ಣ ಓರ್ವ ಗೋಪ್ರೇಮಿ ಬುಡಕಟ್ಟು ಸಮುದಾಯದಿಂದ ಬಂದ ಒಬಿಸಿ ನಾಯಕನ ಮೂಲ ಮಾದರಿ ಎಂಬ ಮಿಥ್ಯೆ ಹುಟ್ಟಿರುವುದು ಹೀಗೆ. ಮಂಡಲ್ ವರದಿಯ ಪರಿಣಾಮವಾಗಿ 1990ರಿಂದ ಭಾರತದ ರಾಜ್ಯ ಶಾಸನಸಭೆಗಳು ಮತ್ತು ಸಂಸತ್ತಿನ ಸಂರಚನೆ ಬದಲಾದಾಗ ಆ ಮಿಥ್ಯೆ ಎಲ್ಲೆಡೆ ಪ್ರಚಲಿತವಾಯಿತು.

ತದನಂತರ ಅನೇಕ ಪ್ರಮುಖ ರಾಜಕೀಯ ಮುಖಂಡರು ಹಾಗೂ ಅವರ ಪುತ್ರರು ಚುನಾವಣಾ ಪ್ರಚಾರಗಳ ಕಾಲದಲ್ಲಿ ತಂತಮ್ಮ ಕಥೆಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದಾರೆ. ಕೃಷ್ಣನೊಂದಿಗೆ ಗುರುತಿಸಿಕೊಳ್ಳುವ ತವಕದಿಂದ ಪೇಟಾಗಳಿಗೆ ನವಿಲುಗರಿ ಸಿಕ್ಕಿಸಿದವರಿದ್ದಾರೆ. ಕೈಯಲ್ಲಿ ಕೊಳಲು ಹಿಡಿದವರಿದ್ದಾರೆ. ಇವರೆಲ್ಲ ತಂತಮ್ಮ ಅನುಕೂಲಕ್ಕೆ ತಕ್ಕಂತೆ ಸತ್ಯ ಮಿಥ್ಯಗಳ ನಡುವಿನ ಗೆರೆಯನ್ನು ಅಳಿಸಿದ್ದಾರೆ. ಯಾವುದೇ ಚುನಾವಣಾ ಕ್ಷೇತ್ರದಲ್ಲಿ ಇನ್ನೇನು ಮತದಾನ ನಡೆಯಲಿದೆ ಎಂದಿರುವ ಸಂದರ್ಭಗಳಲ್ಲಿ ಸದರಿ ಕ್ಷೇತ್ರದೊಂದಿಗೆ ತಮಗಿರುವ ಕೌಟುಂಬಿಕ ಸಂಬಂಧಗಳನ್ನು ಘೋಷಿಸಿದ್ದಾರೆ. ಇಂಥವರು ಚಾರಿತ್ರಿಕ ಸಂಗತಿಗಳನ್ನು ದೃಢಪಡಿಸದೆ ಬಿತ್ತರಿಸುವಾಗ ಕೆಲವೊಂದು ಮಾಧ್ಯಮ ವರ್ಗಗಳು ಅದನ್ನು ಪ್ರಶ್ನಿಸುವುದರ ಜತೆ ಇವರ ಜಾತಿ, ಕುಲದ ಮೂಲವನ್ನು ಶೋಧಿಸುತ್ತವೆ. ಅಂತಹ ಮಾಧ್ಯಮಗಳನ್ನು ಇವರು ಶತ್ರುಗಳಂತೆ ಕಾಣುವುದರಲ್ಲಿ ಆಶ್ಚರ್ಯವೇನಿದೆ?

ಜನರು ಮಹಾ ವಾಗ್ಮಿ ಮೋದಿಯ ಭಾಷಣಗಳನ್ನು ಆಲಿಸುವ ಪರಿಯನ್ನು ನೋಡಬೇಕು. ಮೋದಿಯಂತಹ ರಾಜಕಾರಣಿಗಳು ಹಲವು ಆಗಿಹೋಗಿದ್ದಾರೆ. ಆತ ಮಾತನಾಡಲು ಏಳುತ್ತಿದ್ದಂತೆ "ಮೋದಿ, ಮೋದಿ" ಎಂದು ಕೂಗಾಡುವವರ ಸ್ತೋತ್ರಪಠನವನ್ನು ತಾಳಿಕೊಳ್ಳಲು ತಾಕತ್ತು ಬೇಕು.

ಉತ್ತರ ಪ್ರದೇಶ ಸುದೀರ್ಘ ಕಾಲದಿಂದ ಬೀಮಾರು (ಕಳಪೆ ಸಾಧನೆಯ ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ) ಪಟ್ಟಿಯಲ್ಲಿದೆ. ಹೀಗಿರುವ ರಾಜ್ಯದ ಜನರನ್ನು ಬಡಿದೆಬ್ಬಿಸಲು ಬಹುಶಃ ಒಂದು ವಿಖ್ಯಾತ ಹೆಸರನ್ನು ಸಂಕೇತವಾಗಿ, ಬಂಧಕವಾಗಿ ಬಳಸಬೇಕಾದ ಅವಶ್ಯಕತೆ ಇದೆಯೆಂದು ಮೋದಿಗೆ ಕಂಡಿರಬೇಕು. ಅಂದದ ಬಂದರು ಪಟ್ಟಣ ದ್ವಾರಕೆಯಿಂದ ಆಳುತ್ತಿದ್ದ ಶ್ಯಾಮಲ ವರ್ಣದ ಯೋಧ ಕೃಷ್ಣನಾದರೊ ಕಾರಾಗೃಹದಲ್ಲಿ ಜನಿಸಿದವನು, ದನ ಮೇಯಿಸುತ್ತ ಬೆಳೆದವನು, ಬುಡಕಟ್ಟುಗಳಿಗೆ ಉಪಟಳ ನೀಡುತ್ತಿದ್ದ ರಾಕ್ಷಸರು, ಪುಂಡರನ್ನು ಸಂಹರಿಸಿದವನು, ಪಾಂಡವರ ಸಲಹಾಕಾರನಾಗಿದ್ದವನು, ಕುರುವಂಶವನ್ನು ಪರಾಜಯಗೊಳಿಸಿದ ಸಮರದ ನೇತೃತ್ವ ವಹಿಸಿದವನು. ಹಾಗಾಗಿ ಭಗವಾನ್ ಕೃಷ್ಣನ ಹೆಸರನ್ನು ಬಳಸುವುದೆ ಸರಿಯೆಂದು ತೀರ್ಮಾನಿಸಿರುವಂತೆ ಕಾಣುತ್ತದೆ.



ಪುರಾಣದ ಕೃಷ್ಣ (ಉತ್ತರ ಪ್ರದೇಶದ) ಮಥುರಾದಲ್ಲಿ ಹುಟ್ಟಿ ವೃಂದಾವನದಲ್ಲಿ ಬೆಳೆದು (ಗುಜರಾತಿನ) ದ್ವಾರಕೆಯನ್ನು ತನ್ನ ನೆಲೆಯಾಗಿಸಿದ್ದರೆ "ಆಧುನಿಕ ಕೃಷ್ಣ" ಗುಜರಾತಿನಿಂದ ಉತ್ತರ ಪ್ರದೇಶಕ್ಕೆ ಮರಳಿದ ಬಗ್ಗೆ ಮಾತನಾಡಿದ. 2014ರಲ್ಲಿ ತನ್ನನ್ನು ಅಷ್ಟೊಂದು ಅಕ್ಕರೆಯಿಂದ ದತ್ತಕ್ಕೆ ತೆಗೆದುಕೊಂಡು ಉಪಕಾರ ಮಾಡಿದ ರಾಜ್ಯಕ್ಕೆ ಪ್ರತ್ಯುಪಕಾರ ತೋರುವ ಕುರಿತು (2014ರ ಚುನಾವಣೆಗಳಲ್ಲಿ ಒಟ್ಟು 80 ಸ್ಥಾನಗಳ ಪೈಕಿ ಬಿಜೆಪಿ 71 ಸ್ಥಾನಗಳನ್ನು ಗೆದ್ದಿತ್ತು) ಮಾತನಾಡಿದ. ತನ್ನ ಕೊನೆಉಸಿರಿನತನಕ ಅದರ ಸೇವೆ ಮಾಡುವ ಕುರಿತು ಮಾತನಾಡಿದ.

ಗಾಂಧಿಯಾದರೋ ತನ್ನ ಕಡ್ಡಿಯಂತಿದ್ದ ಕಾಲುಗಳ ಸುತ್ತ ಮನೆಯಲ್ಲಿ ತಯಾರಿಸಿದ ಸರಳ ಧೋತಿ ಸುತ್ತಿಕೊಳ್ಳುತ್ತಿದ್ದರೆ ಮೋದಿಯದು ಸದಾ ಸಮೃದ್ಧವಾಗಿರುವ ಸೊಗಸುಗಾರಿಕೆ. ಗರಿಗರಿಯಾದ, ಕಲೆಗಳಿಲ್ಲದ ಕುರ್ತಾ, ಚೂಡಿದಾರ, ಜ್ಯಾಕೆಟ್ ಮತ್ತು ದುಬಾರಿ ಮ್ಯಾಚಿಂಗ್ ಶಾಲುಗಳನ್ನು ತೊಟ್ಟುಕೊಳ್ಳುವಾಗಲೆಲ್ಲ ಅದು ದಂತಕಥೆಯಾಗಿರುವ 56 ಇಂಚಿನ ಎದೆಯನ್ನು ಪ್ರದರ್ಶಿಸುವ ರೀತಿಯಲ್ಲಿರುತ್ತದೆ. ಆತ ಪ್ಲಾಸ್ಟಿಕ್ ಬಾಟಲುಗಳಿಂದ ಮಿನೆರಲ್ ವಾಟರ್ ಕುಡಿಯುತ್ತಾನೆ. ನಮಸ್ಕರಿಸುವವರಿಗೆ, ಪ್ರಣಾಮ ಸಲ್ಲಿಸುವವರಿಗೆ ಯಾಂತ್ರಿಕವಾಗಿ ತಲೆಯಾಡಿಸುತ್ತ ನಡೆಯುತ್ತಿರುವಾಗ ಚಿತ್ತ ಬೇರೆಲ್ಲೊ ಇರುತ್ತದೆ. ಇಲ್ಲಿ ಜನಪ್ರಿಯತೆಯ ಸ್ಪರ್ಶವಿಲ್ಲ, ಇದು ಯುರೋಪ್ ಪ್ರೇಮಿಯೊಬ್ಬನ ಮೊಳೆವ ಶೈಲಿಯ ಹಾಗಿದೆ.

ಮಾತಾಡಲಾರಂಭಿಸಿದಾಗ ನಿಜಕ್ಕೂ ಮೋದಿಯೋರ್ವ ಸ್ಫೂರ್ತಿಯುತ ಮಾತುಗಾರ. ಅಚಿಂತಿತವಾಗಿ ಸಂಭಾಷಣೆ ಮಾಡುವವನಂತೆ ಪ್ರಾರಂಭಿಸುವ ಆತ ಸ್ವಲ್ಪ ಹೊತ್ತಿನ ಬಳಿಕ ಅದನ್ನು ನಿಲ್ಲಿಸಿ ಸ್ಥಳೀಯ ಸರಕಾರ ಮತ್ತು ಸಹಭಾಗಿ ಪಕ್ಷಗಳ ಕುರಿತು ಭಾವೋತ್ತೇಜಕ ಪ್ರಶ್ನೆಗಳನ್ನು ಹಾಕತೊಡಗುತ್ತಾನೆ. ಮೊನ್ನೆ ಉತ್ತರ ಪ್ರದೇಶದಲ್ಲಿ "ಕತ್ತಲಾದ ಬಳಿಕ ನಿಮ್ಮ ತಾಯಂದಿರು, ಮಗಳಂದಿರಿಗೆ ಮನೆಯಿಂದ ಹೊರಹೊರಡಲು ಸಾಧ್ಯವಾಗುತ್ತಿಲ್ಲ, ಇದು ನಿಜ ಹೌದೇ, ಅಲ್ಲವೇ?" ಎಂದು ಸಿಟ್ಟಿನಿಂದ ಅಬ್ಬರಿಸಿದ. "ಇದು ಬದುಕಲ್ಲ, ಇದು ಪ್ರಜಾಪ್ರಭುತ್ವವಲ್ಲ" ಎನ್ನುತ್ತಾ ಚಪ್ಪಾಳೆ ತಟ್ಟಿದ. ನೆಹರೂ, ಗಾಂಧಿ ಕುಟುಂಬ ಭಾರತದ ಮೇಲೆ ಹೊಂದಿದ್ದ ಕಪಿಮುಷ್ಟಿಯನ್ನು ಅದು ಹೇಗೆ ಕಿತ್ತುಹಾಕಿದೆ, ಅದುಹೇಗೆ ಧನಿಕರನ್ನು ಮರುಕದ ಚಿತ್ರಗಳಾಗಿ ಪರಿವರ್ತಿಸಿದೆ ಎಂದು ತಿಳಿಸಿದ. ಚಡಪಡಿಸುತ್ತಾ ಇದ್ದ ಈತ, ಅಸ್ತವ್ಯಸ್ತತೆಯಿಂದ ಕೂಡಿದ್ದ ಈತ ಒಂದುಕ್ಷಣ ಭಾವುಕ ಕವಿಯಾದ; ಮರುಕ್ಷಣ ಮಹತ್ವಾಕಾಂಕ್ಷಿ ರಾಜಕಾರಣಿಯಾಗಿ ಭರವಸೆಗಳನ್ನು ಹರಿಸಿದ: "ಸೋದರ ಸೋದರಿಯರೆ ನೀವು ನನಗೆ ವೋಟು ಹಾಕಿದರೆ ನಾನು ಇಂಥಾ ಅಸಾಧಾರಣ ವಾತ್ಸಲ್ಯದಿಂದ ನನ್ನನ್ನು ದತ್ತು ತೆಗೆದುಕೊಂಡ ರಾಜ್ಯಕ್ಕೆ ಅಭಿವೃದ್ಧಿಯನ್ನು ತರುವೆ. ನೀವು ಕೊಟ್ಟಿರುವುದನ್ನು ಹಿಂದಿರುಗಿಸುವೆ. ನಿಮ್ಮ ಕಣ್ಮರೆಯಾದ ಉದ್ಯೋಗಗಳನ್ನು ಮರಳಿ ತರುವೆ. ನಿಮ್ಮ ದುಡ್ಡನ್ನು ಕದ್ದ ಕಳ್ಳರನ್ನೆಲ್ಲ ಜೈಲಿಗೆ ಕಳುಹಿಸುವೆ!"

ಭಾರತ್ ಮಾತಾ ಕಿ ಜೈ!

ಇಲ್ಲಿಂದ ಶುರುವಾಗುತ್ತದೆ ಕ್ಯಾಮರಾಗಳೆದುರು ಟಿವಿ ಆಂಕರ್‌ಗಳ ಕಥನ.

ಹಠಾತ್ತನೆ ಟೇಪು ಅದರ ಚಕ್ರದಿಂದ ಹೊರ ನೆಗೆಯುವುದು ಈಗ.

■ ಮೃಣಾಲ್ ಪಾಂಡೆ

ಕನ್ನಡಕ್ಕೆ: ಸುರೇಶ್ ಭಟ್ ಬಾಕ್ರಬೈಲ್

(ಕೃಪೆ: scroll.in)

◂◂ ದಿಡ್ಡಳ್ಳಿ ಹೋರಾಟ...

...ಸಂಗ್ರಹಿಸಿದ್ದರು. ಅಸಲಿಗೆ ಅದು ಅರಣ್ಯ ಭೂಮಿ ...ಪೈಸಾರಿ ಜಮೀನು, ಲ್ಯಾಂಡ್‌ಬ್ಯಾಂಕ್ ಉದ್ದೇಶಕ್ಕಾಗಿ ... ನೀಡಲಾಗಿತ್ತು, ಲ್ಯಾಂಡ್ ಬ್ಯಾಂಕಿನ ಉದ್ದೇಶಕ್ಕೂ ...ಜಿಲ್ಲಾಧಿಕಾರಿಯೊಬ್ಬರು ಅಷ್ಟೊಂದು ಪ್ರಮಾಣದಲ್ಲಿ ...ು ನೀಡುವಂತೆ ಇಲ್ಲ, ಇದೆಲ್ಲವನ್ನೂ ಕಾನೂನು ... ಸುಬ್ಬಯ್ಯನವರು ಮುಂದಿಟ್ಟಿದ್ದರಿಂದ ಅರಣ್ಯ ... ತಡಬಡಿಸಿಹೋಗಿತ್ತು, ಯಾಕೆಂದರೆ ಅದು ಇಂಥಾ ...ಮಿಯನ್ನು ನಿರೀಕ್ಷಿಸಿರಲಿಲ್ಲ.

...ರಣ್ಯ ಇಲಾಖೆಯ ಮತ್ತು ಡೋಂಗಿ ಪರಿಸರವಾದಿಗಳ ..., ಸಂಬಂಧಗಳು ಮತ್ತು ಅವರ ಅಕ್ರಮಗಳ ಬಗ್ಗೆ ...ಷ್ಟು ವರ್ಷಗಳಿಂದ ಕಾನೂನು ಸೇರಿದಂತೆ ಹಲವು ... ಹೋರಾಟಗಳನ್ನು ನಡೆಸುತ್ತಿರುವ ಸುಬ್ಬಯ್ಯನವರನ್ನು ...ನಿಪ್ಪುದು ಅರಣ್ಯ ಇಲಾಖೆಗೆ ಬಹಳ ಕಷ್ಟದ ...ಾಗಿತ್ತು, ಹಾಗಾಗಿ ಅವರು ಹಲವು ರೀತಿಯಲ್ಲಿ ... ಮಾಡುತ್ತಾ ಬಂದಿದ್ದರು. ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಆರ್.ಸೀತಾರಾಂರವರ ಮೂಲಕವೂ ಇದೇ ರೀತಿಯ ಹೇಳಿಕೆಗಳನ್ನು ಕೊಡಿಸಲಾಗಿತ್ತು, ಹೇಳಿಕೇಳಿ ದಲಿತ ವಿರೋಧಿಯಾಗಿರುವ ಎಂ.ಆರ್.ಸೀತಾರಾಂರವರು ಪೂರ್ವಾಪರ ವಿಚಾರಿಸದೆ, ದಮನಿತರ ಪರವಾದ ಈ ಹೋರಾಟಕ್ಕೆ ನಕ್ಸಲ್ ಬೆಂಬಲ ಇದೆ ಎಂಬ ಹೇಳಿಕೆ ನೀಡಿದ್ದರು.

ಕೊಡಗು ಜಿಲ್ಲೆಯಲ್ಲಿ ಜನವಿರೋಧಿ ಚಟುವಟಿಕೆಗಳಿಗೆ ಹೆಸರಾಗಿರೋ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯ ಹೆಸರು ಮನೋಜ್ ಕುಮಾರ್. ನಾಜೂಕಯ್ಯನ ರೀತಿ ವ್ಯವಹರಿಸುವ ಚಾಣಾಕ್ಷ. ಆದರೆ ಈ ನಾಜೂಕಯ್ಯನಿಗೆ ಸುಬ್ಬಯ್ಯ ಬಲಿಯಾಗಲಿಲ್ಲ, ಕಾನೂನಿನ ಅಂಶಗಳ ಬಗ್ಗೆ ತಜ್ಞರಾಗಿರುವ ಸುಬ್ಬಯ್ಯನವರನ್ನು ಯಾಮಾರಿಸುವುದು ಅಷ್ಟು ಸುಲಭವಲ್ಲ ಎಂಬ ಅರಿವು ಮನೋಜ್ ಕುಮಾರ್‌ಗೆ ಇದ್ದುದರಿಂದಲೇ ಆತ ಸುಬ್ಬಯ್ಯನವರನ್ನು ಭೇಟಿಯಾಗುವ ಸಾಹಸ ಮಾಡಲಿಲ್ಲ.


ಆದರೆ ಹಿರಿಜೀವ ದೊರೆಸ್ವಾಮಿಯವರನ್ನು ಯಾಮಾರಿಸಬಹುದು ಅಂತ ಸುಲಭ ಲೆಕ್ಕಾಚಾರ ಹಾಕಿದ ಆತ ಫೆಬ್ರವರಿ 14ರಂದು ಅವರು ಮಡಿಕೇರಿಯಲ್ಲಿ ತಂಗಿರುವುದನ್ನು ತಿಳಿದು, ಅವರ ಜೊತೆ ಸುಬ್ಬಯ್ಯನವರು ಇಲ್ಲದಿರುವುದನ್ನು ಗಮನಿಸಿ ಅವರಿದ್ದಲ್ಲಿಗೆ ಧಾವಿಸಿ ಬಂದಿದ್ದ. ಹಾಗೆ ಬಂದವನೇ ದಿಡ್ಡಳ್ಳಿ ಪ್ರದೇಶವು ಬಫರ್ ಜೋನ್ ಆಗಿದೆ, ಹಾಗಾಗಿ ಅದನ್ನು ಸಂರಕ್ಷಿಸಬೇಕಾಗಿದೆ, ಆ ಜಮೀನು ನೀಡುವಂತೆ ಇಲ್ಲ ಎಂದು ಅವರ ತಲೆಗೆ ಎಣ್ಣೆ ಸವರುವ ಕಾರ್ಯ ಮಾಡುವಲ್ಲಿ ನಿರತನಾಗಿದ್ದ. ಆದರೆ ಪೂರ್ವ ನಿಯೋಜಿತದಂತೆ ದೊರೆಸ್ವಾಮಿ ಮತ್ತು ಸುಬ್ಬಯ್ಯನವರು ಜಂಟಿ ಪತ್ರಿಕಾಗೋಷ್ಠಿ ನಡೆಸುವ ಕಾರ್ಯಕ್ರಮ ನಿಗದಿಯಾಗಿತ್ತು. ಅದರಲ್ಲಿ ಭಾಗವಹಿಸುವ ಸಲುವಾಗಿ ಅದೇ ಸಮಯಕ್ಕೆ ಸುಬ್ಬಯ್ಯನವರು ಕೂಡಾ ಅಲ್ಲಿಗೆ ಬಂದರು. ಪತ್ರಿಕಾಗೋಷ್ಠಿಯಲ್ಲಿ ಅರಣ್ಯ ಇಲಾಖೆಯ ಪಾತ್ರವನ್ನು ಹೇಳುತ್ತಿದ್ದಂತೆಯೇ, ಪಕ್ಕದ ಕೊಠಡಿಯಲ್ಲೇ ಇದ್ದ ಮನೋಜ್ ಕುಮಾರ್, ಹಿಂಬಾಗಿಲ ಮೂಲಕ ಪರಾರಿಯಾಗಿದ್ದ.

ದೊರೆಸ್ವಾಮಿಯವರು ಅರಣ್ಯ ಅಧಿಕಾರಿ ಮನೋಜ್ ಕುಮಾರ್‌ರವರ [illegible], ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದಾಗ, ಪ್ರತಿಕ್ರಿಯಿಸಿದ ಸುಬ್ಬಯ್ಯ, ಈ ಹಿಂದೆ ಆ ಪ್ರದೇಶವನ್ನು ಮೀಸಲು ಅರಣ್ಯ ಎಂದು ಹೇಳುತ್ತಿದ್ದರು. ಈಗ ಅವರು ಬಫರ್ ಜೋನ್ ಎನ್ನುವಲ್ಲಿಯವರೆಗೆ ತಗ್ಗಿದ್ದಾರೆ. ಬಫರ್ ಜೋನ್ ಆಗಬೇಕಾದರೂ ಅದಕ್ಕೆ ಅಧಿಸೂಚನೆಗಳು ಆಗಬೇಕು. ಅಂತಹ ಯಾವುದೇ ಅಧಿಸೂಚನೆ ಇಲ್ಲ. ಒಂದುವೇಳೆ ಬಫರ್ ಜೋನ್ ಎಂದಾದರೂ ಕೊಡಗು ಜಿಲ್ಲೆಯಲ್ಲಿ ಇರುವಂತಹ ಬಹುತೇಕ ಪ್ರದೇಶಗಳು ಬಫರ್ ಜೋನ್ ವ್ಯಾಪ್ತಿಗೆ ಬರುತ್ತದೆ. ಹಾಗಾಗಿ ಇದೆಲ್ಲವೂ ಅರಣ್ಯ ಇಲಾಖೆ ಆದಿವಾಸಿಗಳಿಗೆ ಜಮೀನು ನೀಡಬಾರದು ಎಂದು ನಡೆಸುತ್ತಿರುವ ಕುತಂತ್ರ ಎಂದು ದೊರೆಸ್ವಾಮಿಯವರಿಗೆ ಮನವರಿಕೆ ಮಾಡಿಕೊಟ್ಟರು. ದೊರೆಸ್ವಾಮಿಯಂತಹ ಹಿರಿಯ ಹೋರಾಟಗಾರರನ್ನೇ ಈ ಅಧಿಕಾರಶಾಹಿ ವರ್ಗ ಕುತಂತ್ರದ ಬಲೆಗೆ ಕೆಡವುತ್ತದೆಂದರೆ ಇನ್ನು ಸಾಮಾನ್ಯ ಆದಿವಾಸಿಗಳ ಪಾಡು ಇನ್ನೇನಿರಬೇಡ. ಮಾತು ಕೊಟ್ಟಂತೆ ಮುಖ್ಯಮಂತ್ರಿಗಳು ಆದಷ್ಟು ಬೇಗ ಸಮಸ್ಯೆ ಬಗೆಹರಿಸಲು ಮುಂದಾಗದಿದ್ದರೆ ಅಧಿಕಾರಿಗಳು [illegible]

■ ಬಿ.ಎನ್.ಮನುಶೆಣೈ

ಮೋದಿಜಿ, ನಿಮ್ಮ ಹಿಂದೂತ್ವವನ್ನು ನಾವು ಧ್ವಂಸ ಮಾಡುತ್ತೇವೆ

ಫೆಬ್ರವರಿ 16ರಂದು ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ ಹಮ್ಮಿಕೊಳ್ಳಲಾಗಿದ್ದ 'ಚಲೋ ತುಮಕೂರು' ಸಭೆಯಲ್ಲಿ ಸಾಮಾಜಿಕ ಹೋರಾಟಗಾರ ಜಿಗ್ನೇಶ್ ಮೆವಾನಿ ಮಾಡಿದ ಭಾಷಣದ ಪೂರ್ಣ ಪಾಠ ಇಲ್ಲಿದೆ.



ಈ ಕಾರ್ಯಕ್ರಮದ ಆಯೋಜಕರಿಗೂ, ವೇದಿಕೆಯ ಮೇಲಿರುವ ಎಲ್ಲ ಸಂಗಾತಿಗಳಿಗೂ ಮತ್ತು ಇಲ್ಲಿ ನೆರೆದಿರುವ ಎಲ್ಲ ಸಹೋದರ ಸಹೋದರಿಯರಿಗೂ ನನ್ನ ಕ್ರಾಂತಿಕಾರಿ ವಂದನೆ ಜೈ ಭೀಮ್!

ಮಿತ್ರರೆ, ಇವತ್ತಿನ ಈ ಕಾರ್ಯಕ್ರಮದಲ್ಲಿ ನಿಮ್ಮೆಲ್ಲರ ನಡುವೆ ಮೊಟ್ಟಮೊದಲಿಗೆ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ಅದೇನೆಂದರೆ ಕರ್ನಾಟಕದ ದಲಿತರು, ಕರ್ನಾಟಕದ ಪ್ರಗತಿಪರರು, ಎಲ್ಲ ಹೋರಾಟಗಾರರು ಜೊತೆಗೂಡಿ ಮಾಡಬೇಕಿರುವ ಕೆಲಸ ಯಾವುದೆಂದರೆ ದಲಿತ ಗೃಹ ಮಂತ್ರಿಯನ್ನು ಸೋಲಿಸಬೇಕಿರುವುದು. ಯಾಕೆಂದರೆ ಇಲ್ಲಿ ಒಬ್ಬ ದಲಿತನ ಮೇಲೆ ದೌರ್ಜನ್ಯ ನಡೆದಿದ್ದರೂ ದಲಿತ ಗೃಹ ಮಂತ್ರಿ ಇತ್ತ ಕಡೆ ಸುಳಿದಿಲ್ಲ.

ಸಹೋದರ ಅಭಿಷೇಕನ ಮೇಲಾಗಿರುವ ದೌರ್ಜನ್ಯ - ನಾನು ಪ್ರಜ್ಞಾಪೂರ್ವಕವಾಗಿಯೇ ಈ ಮಾತನ್ನು ಹೇಳುತ್ತಿದ್ದೇನೆ - ಊನಾದಲ್ಲಾದ ದೌರ್ಜನ್ಯಕ್ಕಿಂತಲೂ ಹೇಯವಾದದ್ದು. ಇಂತಹ ಹೇಯ ಘಟನೆ ನಡೆದ ನಂತರವೂ ಸ್ವತಃ ದಲಿತರಾಗಿರುವ ಗೃಹ ಮಂತ್ರಿ ಅಭಿಷೇಕ್‌ನ ನೋವು ಮತ್ತು ಸಂಕಟವನ್ನು ನೋಡಲು ಬರುವುದಿಲ್ಲ ಎಂದರೆ ಅವರನ್ನು ಮುಂದಿನ ಚುನಾವಣೆಯಲ್ಲಿ ನಾವು ಸೋಲಿಸಬೇಕಿದೆ.

ಗುಜರಾತ್ ಸಂಘಪರಿವಾರದ ಹಿಂದೂತ್ವವಾದದ ಪ್ರಯೋಗಾಲಯ ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಅಲ್ಲಿ ನಡೆಯುವುದು ಸಂಘದ ಮತ್ತು ಭಾರತೀಯ ಜನತಾ ಪಕ್ಷದ ದರ್ಬಾರು. ಸಂಘ ಮತ್ತು ಬಿಜೆಪಿಯ ನೀತಿ ಯಾವುದೆಂದರೆ ನಮ್ಮ ಸಂವಿಧಾನದ ಜಾಗದಲ್ಲಿ ಮನುವಾದ, ಮನುಸ್ಮೃತಿಯ ಮೌಲ್ಯಗಳನ್ನು ಸ್ಥಾಪಿಸುವುದಾಗಿದೆ. ಇಂತಹ ವಿಚಾರ ಮತ್ತು ಮನಸ್ಥಿತಿಯಿಂದಾಗಿ ಅಲ್ಲಿ ದಲಿತರ ಮೇಲೆ ಊನಾದಲ್ಲಿ ದಾಳಿ ನಡೆಯಿತು. ಇಷ್ಟಿದ್ದರೂ ಊನಾ ಘಟನೆ ನಡೆದ ನಂತರ ಗುಜರಾತಿನ ದಲಿತರು ಹೋರಾಟಕ್ಕೆ ಇಳಿದಾಗ ಪಟೇಲ್ ಸಮುದಾಯದ ಮುಖ್ಯಮಂತ್ರಿ ಆನಂದಿಬೇನ್ ಪಟೇಲ್ ಅವರಿಗೆ ಊನಾದಲ್ಲಿ ದೌರ್ಜನ್ಯಕ್ಕೆ ಒಳಗಾದ ಜನರನ್ನು ನೋಡಲು ಬರುವಷ್ಟಾದರೂ ಬುದ್ಧಿ ಆದರೂ ಇತ್ತು, ಆದರೆ ಇಲ್ಲಿ ಸ್ವತಃ ದಲಿತರಾಗಿದ್ದರೂ, ಸಂಘ ಮತ್ತು ಬಿಜೆಪಿಯನ್ನು ವಿರೋಧಿಸುವ ಕಾಂಗ್ರೆಸ್ ಸರ್ಕಾರದಲ್ಲಿ ಗೃಹಮಂತ್ರಿ ಆಗಿದ್ದರೂ ಅಭಿಷೇಕ್ ಮತ್ತಾತನ ಕುಟುಂಬವನ್ನು ಭೇಟಿ ಆಗಬೇಕೆಂದು ಅವರಿಗೆ ಅನ್ನಿಸುವುದಿಲ್ಲ.


ಸ್ನೇಹಿತರೇ, ನೀವೆಲ್ಲರೂ ಊನಾ ಘಟನೆಯ ವೀಡಿಯೋ ನೋಡಿದ್ದೀರಿ. ಹಾಗೆಯೇ ಇಲ್ಲಿ ಅಭಿಷೇಕನ ಮೇಲೆ ನಡೆದ ದಾಳಿಯ ವೀಡಿಯೋವನ್ನೂ ನೋಡಿರುತ್ತೀರಿ. ಮನುಸ್ಮೃತಿಯಿಂದ ಪ್ರೇರಿತರಾದ ಗೋ ರಕ್ಷಕರು ಊನಾದಲ್ಲಿ ಹಾಡಹಗಲೆ, ಸಾರ್ವಜನಿಕವಾಗಿ ನಾಲ್ಕು ದಲಿತ ಯುವಕರ ಚರ್ಮ ಕಿತ್ತು ಬರುವಂತೆ ಥಳಿಸಿದ್ದರು. ಆದರೆ ಇಲ್ಲಿ ಅಭಿಷೇಕ್‌ನಿಗೆ ಬರೀ ಹೊಡೆಯಲಿಲ್ಲ, ಆತನ ಆತ್ಮಾಭಿಮಾನವನ್ನು ಥಳಿಸಲಿಲ್ಲ, ಜೊತೆಗೆ ಆತನನ್ನು ನಗ್ನಗೊಳಿಸಲಾಯಿತು, ಆತನಿಗೆ ಚಪ್ಪಲಿ ಹಾರ ಹಾಕಲಾಯಿತು. ಆತನ ಆತ್ಮಾಭಿಮಾನ ಮತ್ತು ಮನುಷ್ಯ ಗೌರವವನ್ನು ನಾಶಮಾಡಲಾಯಿತು. ಅಂದರೆ ಅಭಿಷೇಕ್ ಘಟನೆಯಲ್ಲಿ ಊನಾಕ್ಕಿಂತ ಹೆಚ್ಚಿನ ಕ್ರೌರ್ಯ ನಡೆದಿದೆ. ಇದು ಇಡೀ ದೇಶವೇ ನಾಚಿಕೆ ಪಟ್ಟುಕೊಳ್ಳುವ ಸಂಗತಿ. ಊನಾ ಪ್ರಕರಣಕ್ಕೆ ವ್ಯಕ್ತವಾದ ವಿರೋಧಕ್ಕಿಂತ ದೊಡ್ಡ ಮಟ್ಟದಲ್ಲಿ ಈ ಪ್ರಕರಣದ ವಿರುದ್ಧ ದೇಶದ ಎಲ್ಲಾ ದಲಿತರು ಸಂಘಟಿತರಾಗಿ ಹೋರಾಡಬೇಕಿದೆ. ಈ ದೌರ್ಜನ್ಯಕ್ಕೆ ದೇಶದ ಎಲ್ಲರ ಖಂಡನೆ ದಾಖಲಾಗಬೇಕಿದೆ.

ಈ ವೀಡಿಯೋ ನೋಡಿ ನಾನು ತುಂಬಾ ವಿಚಲಿತನಾದೆ. ನಾನು ಇಲ್ಲಿಗೆ ಬಂದಾಗ ಆಸ್ಪತ್ರೆಗೆ ಹೋಗಿ ಅಭಿಷೇಕ್‌ನನ್ನು ಭೇಟಿಯಾದೆ. ಆತ ನನ್ನೊಂದಿಗೆ ಕನ್ನಡದಲ್ಲಿ ಮಾತನಾಡಿದ. ಮಿತ್ರರೊಬ್ಬರು ಅವನ ಮಾತುಗಳನ್ನು ಅನುವಾದ ಮಾಡಿದರು. ಅವನೊಂದಿಗೆ ಆಡಿದ ಮಾತನ್ನು ನಾನು ಹೀಗೆ ಅರ್ಥಮಾಡಿಕೊಂಡಿದ್ದೇನೆ.

ಹತ್ತೊಂಬತ್ತು ವರ್ಷದ ಹುಡುಗನೊಬ್ಬ ಅದೇ ಊರಿನ ಹುಡುಗಿಯೊಬ್ಬಳ ಸಂಪರ್ಕಕ್ಕೆ ಬರುತ್ತಾನೆ. ಅವರಿಬ್ಬರ ನಡುವೆ ಪ್ರೀತಿ ಇದೆಯೋ ಅಥವಾ ಸ್ನೇಹ, ಮತ್ತೊಂದು ಇದೆಯೋ ಅವೆಲ್ಲ ಮುಖ್ಯವಲ್ಲ, ಆದರೆ ಯಾವಾಗ ಅವರಿಬ್ಬರ ನಡುವಿನ ಸಂಪರ್ಕ ಆಕೆಯ ಕುಟುಂಬಕ್ಕೆ ಗೊತ್ತಾಗುತ್ತದೋ ಆಗ ಅವರು ಹುಡುಗ ದಲಿತ ಎಂಬ ಕಾರಣಕ್ಕೆ ಹಲ್ಲೆ ಮಾಡುತ್ತಾರೆ. ಯಾವುದೇ ದಲಿತ ಹುಡುಗ ಓರ್ವ ದಲಿತೇತರ ಹುಡುಗಿಯನ್ನು ಮಾತನಾಡಿಸಿದರೆ, ಸ್ನೇಹ ಗಳಿಸಿದರೆ, ಪ್ರೀತಿಸಿದರೆ, 2017 ನೇ ಇಸವಿಯಲ್ಲೂ ಆತ ಇಂತಹ ಧಿಮಾಕು ಹೇಗೆ ತೋರಿಸುತ್ತಾನೆ ಎಂದು ಆತನ ಮೇಲೆ ದಾಳಿ ನಡೆಯುತ್ತದೆ. ಇದು ಭಾರತೀಯ ಮನಸ್ಥಿತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಾತಿ ನಿರ್ಮೂಲನದ ಆಶಯ ಇದ್ದರೂ ಅಂತರಜಾತಿ ವಿವಾಹ ಹೇಗೆ ಸಾಧ್ಯವಾಗುತ್ತದೆ. ಈ ಪ್ರಶ್ನೆ ದೇಶದ ಜನರೆಲ್ಲರ ಮುಂದೆ ಇಡಬೇಕಿದೆ.

1930ರ ದಶಕದಲ್ಲಿ ಡಾ. ಬಾಬಾಸಾಹೇಬರು ನಮ್ಮ ದೇಶದ ಮುಂದೆ ಐತಿಹಾಸಿಕವಾದ 'ಜಾತಿವಿನಾಶ' ಪುಸ್ತಕವನ್ನು ಇಟ್ಟರು. ಅದನ್ನು ಗಮನ ಇಟ್ಟು ಓದಿದರೆ, ಅದರಲ್ಲಿ ಬಾಬಾಸಾಹೇಬರು ಜಾತಿ ನಿರ್ಮೂಲನೆ ಹೇಗೆ ಸಾಧ್ಯ ಜಾತಿ ವ್ಯವಸ್ಥೆಯ ನಿರ್ಮೂಲನೆ ಹೇಗೆ ಎಂದೆಲ್ಲ ವಿವರಿಸಿ ಅಂತರಜಾತಿ ವಿವಾಹಗಳೇ ಪರಿಹಾರ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ದೇಶದಲ್ಲಿ ಅಂತರಜಾತಿ ಮತ್ತು ಅಂತರಧರ್ಮೀಯ ವಿವಾಹಗಳು ಯಾವಾಗ ಸಾಧ್ಯವಾಗುತ್ತದೆಂದರೆ ಈ ದೇಶದ ಯುವಕರು ಮತ್ತು ಯುವತಿಯರು - ಅವರು ಯಾವುದೇ ಧರ್ಮ ಅಥವಾ ಜಾತಿಯವರಾಗಿರಲಿ- ಅವರ ನಡುವೆ ಗೆಳೆತನ ಬೆಳೆದರೆ, ಪ್ರೀತಿ ಹುಟ್ಟಿದರೆ, ಇಶ್ಕ್, ಮೊಹಬ್ಬತ್ ಶುರುವಾದರೆ ಆಗ ಜಾತಿ ವಿನಾಶ ಆಗುತ್ತದೆ. ಆದ್ದರಿಂದ ಇಂದು ಇಂಕಿಲಾಬ್ ಜಿಂದಾಬಾದ್ ಜೊತೆಜೊತೆಗೆ ಪ್ಯಾರ್ ಮತ್ತು ಮೊಹಬ್ಬತ್‌ಗೂ ಜಿಂದಾಬಾದ್ ಎನ್ನಬೇಕಿದೆ. ಆದರೆ ಇದು ಸಾಧ್ಯವಾಗುತ್ತಿಲ್ಲ, ಅಭಿಷೇಕ್ ತರಹದ ಹುಡುಗರಿಗೆ ತಮಗೆ ಇಷ್ಟವಾದ ಹುಡುಗಿಯೊಂದಿಗೆ - ಆಕೆಯ ಜಾತಿ ಧರ್ಮ ಯಾವುದೇ ಇರಲಿ - ಮುಕ್ತವಾಗಿ ಸ್ನೇಹ, ಪ್ರೀತಿ, ಮದುವೆ ಸಾಧ್ಯವಾಗಲು ಅವಕಾಶ ಇರಬೇಕು, ಅಂತಹ ವಾತಾವರಣ ಇರಬೇಕು. ಅಂತಹ ಸ್ವಾತಂತ್ರ್ಯ ನಮ್ಮ ಯುವಜನತೆಗೆ ಇಲ್ಲದಂತಾಗಿದೆ. ಎಲ್ಲಿಯತನಕ ಅಂಬೇಡ್ಕರ್ ಪ್ರತಿಪಾದಿಸಿದ ಅಂತರಜಾತಿ ವಿವಾಹಗಳು ವಾಸ್ತವದ ಅಜೆಂಡಾ ಆಗುವುದಿಲ್ಲವೋ, ಎಲ್ಲಿಯತನಕ ಇಲ್ಲಿನ ಎಲ್ಲಾ ಜಾತಿಗಳ ಯುವಕಯುವತಿಯರು ಮನಬಿಚ್ಚಿ ತಮಗೆ ಇಷ್ಟವಾದವರೊಂದಿಗೆ ಸ್ನೇಹ, ಪ್ರೀತಿ ಸಾಧ್ಯವಾಗುವುದಿಲ್ಲವೋ ಅಲ್ಲಿಯತನಕ ಈ ದೇಶದಲ್ಲಿ ಅಂಬೇಡ್ಕರರ ಕನಸಾದ ಜಾತಿವಿನಾಶವೂ ಸಾಧ್ಯವಿಲ್ಲ, ಯಾವ ಬದಲಾವಣೆಯೂ ಸಾಧ್ಯವಿಲ್ಲ.

ನಮ್ಮ ದೇಶದಲ್ಲಿನ ಜಾತಿವಾದಿ ಮನಸ್ಥಿತಿಯಿಂದಾಗಿ ಬಹಳ ವರ್ಷಗಳಿಂದ ಒಂದು ಚರ್ಚೆ ನಡೆಯುತ್ತಿದೆ. ನಮ್ಮ ವಿರುದ್ಧ ಇರುವ ಒಂದು ಆರೋಪ ಯಾವುದೆಂದರೆ ನಾವು ದಲಿತ ದೌರ್ಜನ್ಯ ತಡೆ ಕಾಯಿದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೇವೆ ಎಂಬುದು. ವಾದಕ್ಕಾಗಿ ಅವರು ಹೇಳುತ್ತಿರುವುದು ಸತ್ಯ ಎಂದೇ ಒಪ್ಪಿಕೊಳ್ಳೋಣ. ದಲಿತ ದೌರ್ಜನ್ಯ ತಡೆ ಕಾಯಿದೆ ಅಡಿ ದಾಖಲಾಗುತ್ತಿರುವ ದೂರುಗಳಲ್ಲಿ ಶೇಕಡ 50 ಸುಳ್ಳು ದೂರುಗಳು ಎಂದೇ ಇಟ್ಟುಕೊಳ್ಳೋಣ. ಗುಜರಾತಿನ ಬಗ್ಗೆ ಹೇಳುವುದಾದರೆ ದಲಿತರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 100 ಪ್ರಕರಣಗಳಲ್ಲಿ ಕೇವಲ 3 ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತಿದೆ. ಕೇವಲ ಮೂರು ಪರ್ಸೆಂಟ್. ಅದೇರೀತಿ ಇವತ್ತು ಪೋಕ್ಸೋ ಕಾಯಿದೆಯೂ ದುರ್ಬಳಕೆ ಆಗುತ್ತಿದೆ ಎಂದು ಮಹಿಳಾವಾದಿಗಳು ದಲಿತ ಮಹಿಳಾವಾದಿಗಳೂ ಸೇರಿದಂತೆ ಆರೋಪ ಮಾಡುತ್ತಿದ್ದಾರೆ. ಆದರೆ ನಾನು ಇದನ್ನು ಒಪ್ಪುವುದಿಲ್ಲ, ದಲಿತ ದೌರ್ಜನ್ಯ ತಡೆ ಕಾಯ್ದೆ ಮತ್ತು ಪೋಕ್ಸೋ ಕಾಯಿದೆ ಇವೆರಡೂ ಈ ದೇಶದಲ್ಲಿ ದಲಿತರ ಮತ್ತು ಮಕ್ಕಳ ಮೇಲಿನ ದಾಳಿಗಳನ್ನು ತಡೆಯಲು ಮತ್ತು ಜಾತಿವ್ಯವಸ್ಥೆ ಹಾಗು ಪಿತೃಪ್ರಧಾನ ವ್ಯವಸ್ಥೆಯನ್ನು ತೊಡೆದು ಹಾಕಲು ಅತ್ಯವಶ್ಯಕ ಕಾನೂನುಗಳಾಗಿವೆ. ಎರಡೂ ಕಾಯಿದೆಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸಬೇಕಿದೆ. ಆದರೆ ಇಂದು ಅಭಿಷೇಕ್ ಪ್ರಕರಣದಲ್ಲಿ ಮೇಲು ನೋಟಕ್ಕೇ ನನಗನ್ನಿಸುವುದೇನೆಂದರೆ ದಲಿತ ದೌರ್ಜನ್ಯ ತಡೆ ಕಾಯಿದೆಯನ್ನು ದಮನ ಮಾಡಲು ಪೋಕ್ಸೋ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ನಾನು ಸತ್ಯವಾಗಲೂ ಹೇಳುತ್ತೇನೆ, ಈ ವಿಚಾರದಲ್ಲಿ ಅಭಿಷೇಕ್ ಮೇಲಾದ ದಾಳಿಯ ವೀಡಿಯೋ ಆಧರಿಸಿ ಇದರ ನ್ಯಾಯ ತೀರ್ಮಾನವನ್ನು ಘನ ನ್ಯಾಯಾಲಯದ ಪರಿಧಿಗೆ ಬಿಡೋಣ. ಅಭಿಷೇಕನ ಮೇಲೆ ಪೋಕ್ಸೋ ಅಡಿ ಸಲ್ಲಿಸಿರುವ ದೂರು ಸರಿಯಾದದ್ದೋ ಇಲ್ಲವೋ ಎಂಬುದನ್ನು ಸಾಕ್ಷ್ಯಾಧಾರಗಳ



ಮೇಲೆ ನ್ಯಾಯಾಲಯ ನಿರ್ಧರಿಸಲಿ. ಹಾಗೊಮ್ಮೆ ಅಭಿಷೇಕ್ ತಪ್ಪು ಮಾಡಿದ್ದರೆ ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಬಹುದಿತ್ತು, ಆದರೆ ಅವರು ಹಾಗೆ ಮಾಡಲಿಲ್ಲ, ಬದಲಾಗಿ ಅವರೇ ಕಾನೂನನ್ನು ಕೈಗೆತ್ತಿಕೊಂಡು ಅಭಿಷೇಕನ ಮೇಲೆ ದಾಳಿ ಮಾಡಿದ್ದಾರೆ, ಅತನನ್ನು ನಗ್ನಗೊಳಿಸಿದ್ದಾರೆ, ಚಪ್ಪಲಿ ಹಾರ ಹಾಕಿದ್ದಾರೆ, ಇದೆಲ್ಲದರ ವೀಡಿಯೋ ಇದೆ. ಇಂತಹದ್ದನ್ನೆಲ್ಲ ನಾವು ಸಹಿಸುವುದಿಲ್ಲ.

ಮಿತ್ರರೆ, ಯಾವುದೇ ದಲಿತ ಯುವಕ ಅಥವಾ ಪುರುಷ ಯಾವುದೇ ಜಾತಿಯ ಸಹೋದರಿಯ ಮೇಲೆ ಅತ್ಯಾಚಾರ ಎಸಗಿದರೆ ನಾವು ಆ ದೌರ್ಜನ್ಯಕ್ಕೆ ತುತ್ತಾದ ಮಹಿಳೆಯ ಜೊತೆ ನಿಲ್ಲುತ್ತೇವೆ. ಅತ್ಯಾಚಾರ ಎಸಗಿದ ದಲಿತ ಪುರುಷನ ಜೊತೆ ನಾವು ನಿಲ್ಲುವುದಿಲ್ಲ, ಯಾಕೆಂದರೆ ನಾವು ಬರೀ ಜೈ ಭೀಮ್ ಎನ್ನುವವರಲ್ಲ, ಜೈ ಭೀಮ್ ಜೊತೆಗೆ ಸಾವಿತ್ರ ಬಾಯಿ ಫುಲೆ ಜಿಂದಾಬಾದ್ ಎನ್ನುತ್ತೇವೆ. ನಮ್ಮ ನಿಲುವು ಸ್ಪಷ್ಟವಾಗಿದೆ. ನಾವು ಜಾತಿವ್ಯವಸ್ಥೆಯ ವಿರುದ್ಧವೂ ಹೋರಾಡುತ್ತೇವೆ, ಹಾಗೆಯೇ ಈ ದೇಶದಲ್ಲಿರುವ ಮನುವಾದ ಮತ್ತು ಪಿತೃಪ್ರಧಾನ ವ್ಯವಸ್ಥೆಯನ್ನೂ ಧ್ವಂಸ ಮಾಡುತ್ತೇವೆ.

ಅಭಿಷೇಕ್ ವಿಷಯದಲ್ಲಿ ಏನಾಗಿದೆ ಎಂಬುದನ್ನು ನಾವೆಲ್ಲರೂ ಬಲ್ಲೆವು. ಇದೇ ತರಹದ ಅನ್ಯಾಯ ನಮ್ಮ ಸಹೋದರ ನಜೀಬ್‌ಗೂ ಆಗಿದೆ. ಜೆಎನ್‌ಯು ವಿದ್ಯಾರ್ಥಿ ನಜೀಬ್ ಕಾಣೆಯಾಗಿ 150 ದಿನಗಳು ಕಳೆದಿವೆ. ಎಬಿವಿಪಿ ಗೂಂಡಾಗಳು ನಜೀಬನನ್ನು ಥಳಿಸಿದರೋ, ಹೆಸರುಗಳನ್ನು ಇತರೆ ವಿದ್ಯಾರ್ಥಿಗಳು ವಿವಿಯ ... ಕೊಟ್ಟಿದ್ದರು. ಆದರೆ ಅವರ್‍ಯಾರನ್ನೂ ಪೊಲೀಸರು ... ತ್ತಿಲ್ಲ, ಬದಲಾಗಿ ಆಗುತ್ತಿರುವುದೇನು? ಎಬಿವಿಪಿ ಗೂಂ... ಮೇಲೆ ಕ್ರಮಕೈಗೊಳ್ಳುವ ಬದಲು ನ್ಯಾಯಕ್ಕಾಗಿ ಹೋ... ತ್ತಿರುವ ನಜೀಬನ ತಾಯಿ ಮತ್ತು ಹೋರಾಟಗಾ... ಬಂಧಿಸಲಾಗುತ್ತಿದೆ. ಇದು ಗುಜರಾತ್ ಮಾಡಲ್; ... ಮೋದಿಜಿ ಸತ್ಯವಾಗಿಸಿರುವ 'ಅಚ್ಛೆ ದಿನ್'.

ರೋಹಿತ್ ವೇಮುಲ ವಿಷಯದಲ್ಲೂ ಹೀಗೆ ಆ... ಈಗ ಎರಡು ದಿನಗಳ ಹಿಂದೆ ಪತ್ರಿಕೆಗಳಲ್ಲಿ ನಾವು ಓದಿ... ಅದೇನೆಂದರೆ ಇನ್ನು ಹದಿನೈದು ದಿನಗಳಲ್ಲಿ ರೋ... ತಾಯಿ - ಅಮ್ಮ ರಾಧಿಕಾ ವೇಮುಲಾ - ತಾವು ... ತಮ್ಮ ಕುಟುಂಬದ ಸದಸ್ಯರು ಮತ್ತು ರೋಹಿತ್ ... ದಲಿತರೆಂದು ಸಾಬೀತುಪಡಿಸಬೇಕೆಂದು ಅವರ ... ಒತ್ತಡ ಹಾಕಲಾಗುತ್ತಿದೆ. ನಮ್ಮೆಲ್ಲರಿಗೂ ಗೊತ್ತು ರೋ... ಜಾತಿವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದ. ಆತನ ಸಾ... ಜಾತಿ ವ್ಯವಸ್ಥೆಯೇ ಕಾರಣವಾಗಿತ್ತು. ... ವಿಶ್ವವಿದ್ಯಾಲಯಗಳಲ್ಲಿ ಇವತ್ತು ದಲಿತ, ಆದಿ... ಹಿಂದುಳಿದ, ಅತಿ ಹಿಂದುಳಿದ ಮತ್ತು ಅಲ್ಪಸಂ... ಮುಸಲ್ಮಾನ ಯುವ ವಿದ್ಯಾರ್ಥಿಗಳಿಗೆ ಪ್ರತಿ ದಿನ ಎಬಿ... ಬಿಜೆಪಿ ಮತ್ತು ಸಂಘಪರಿವಾರದ ಸದಸ್ಯರು ... ರೀತಿಯಲ್ಲಿ ಕಿರುಕುಳ ಕೊಡುತ್ತಿರುತ್ತಾರೆ. ಇಂತಹ ಮನ... ರೋಹಿತ್ ಬಲಿಯಾದದ್ದು. ಆತನಿಗೆ ನ್ಯಾಯ ಸಿಗು... ನೋಡಿಕೊಳ್ಳುವ ಬದಲು ನಮ್ಮ ಜಾತಿವ್ಯವಸ್ಥೆಯು ... ರೋಹಿತ್ ಮತ್ತು ನಜೀಬ್‌ರಂಥ ಏಕಲವ್ಯರ ಹೆಬ್ಬೆಟ್ಟು... ಬಲಿತೆಗೆದುಕೊಳ್ಳುತ್ತಿದೆ.


ಅದಕ್ಕೇ ನಾನು ಹೇಳುವುದು, ಯಾವ ಸಂಘಪರಿ... ಇವತ್ತು ರೋಹಿತ್ ಮತ್ತು ಕನ್ಹಯ್ಯರನ್ನು ದೇಶದ್ರೋಹಿ... ಎಂದು ಕರೆಯುತ್ತಿದೆಯೋ ಅಂತಹ ಸಂಘಪರಿವಾರ, ... ಮತ್ತು ಎಬಿವಿಪಿಯ ಜನರೇ ಇವತ್ತು ಈ ದೇಶದ ... ದೊಡ್ಡ ದೇಶದ್ರೋಹಿಗಳು ಎಂದು.

ಈ ದೇಶದೊಳಗೆ ಕಳೆದ ಮೂರು ಸಾ... ವರ್ಷಗಳಿಂದ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ... ವ್ಯವಸ್ಥೆ ಪ್ರತಿ ವಲಯವನ್ನೂ ಪ್ರವೇಶಿಸಿ ಎಲ್ಲವ... ಕುರೂಪಗೊಳಿಸಿದೆ. ಕಳೆದ ಮೂರು ಸಾವಿರ ವರ್ಷಗ... ದಲಿತರ ಬದುಕು ಅಸಹನೀಯವಾಗಿದೆ. ಇವತ್ತಿಗೂ ... ದಿನ ನಾಲ್ವರು ದಲಿತ ಮಹಿಳೆಯರ ಮೇಲೆ ಅತ್ಯಾ... ನಡೆಯುತ್ತಿದೆ. ಪ್ರತಿ ದಿನ ದಲಿತರ ಕೊಲೆಗಳು ನಡೆಯು... ನೂರಾರು ದಲಿತರ ಬದುಕುಗಳನ್ನು ಕಿತ್ತುಕೊಳ್ಳಲಾಗು... ಅವರ ಮನೆಗಳನ್ನು ಧ್ವಂಸ ಮಾಡಿ ಅವರನ್ನು ಬೀ... ತಳ್ಳಲಾಗುತ್ತಿದೆ. ಪ್ರತಿ 18 ನಿಮಿಷಕ್ಕೆ ದಲಿತರ ವಿ... ಒಂದು ದೌರ್ಜನ್ಯ ನಡೆಯುತ್ತಿದೆ. ಇದರ ವಿರುದ್ಧ ರೋಹಿ... ಹೋರಾಟ ಮಾಡುತ್ತಿದ್ದ; ಮೂರು ಸಾವಿರ ವರ್ಷ... ಶೋಷಣೆಯನ್ನು ಅಳಿಸಲು ಹೋರಾಡಿದ್ದ. ಆದರೆ ... ನನ್ನ ಕ್ರಾಂತಿಕಾರಿ ಸಹೋದರನಿಗೇ "ನೀನು ಜಾತಿ... ಮಾಡುತ್ತಿದ್ದೀಯ. ನೀನು ಅತಿರೇಕವಾದಿ, ... ದೇಶದ್ರೋಹಿ" ಎಂದು ಆರೋಪಿಸಿದರು.

ನಿಜಕ್ಕೂ ಇವತ್ತು ಈ ದೇಶದ ಆಂತರಿಕ ಭ... ಮಾರಕವಾಗಿರುವ ಸಂಘಟನೆಗಳೆಂದರೆ ಅವು ಸಂಘ, ... ಮತ್ತು ಎಬಿವಿಪಿ. ಈ ಮೂರೂ ಸಂಘಟನೆಗಳನ್ನು ... ದೇಶದಿಂದ ಕಿತ್ತೊಗೆಯಲು ನಾವು ಪಣ ತೊಡಬೇ...

ಆದ್ದರಿಂದ, ಈ ಸಂಘಪರಿವಾರದ ವಿರುದ್ಧ ... ಪರ್ಯಾಯ ಮೋರ್ಚಾ ಪ್ರಾರಂಭಿಸಬೇಕಿದೆ. ಆ... ಕರ್ನಾಟಕದ ನೆಲದಿಂದ ನಾನು ನಿನ್ನೆ ಪ್ರಥಮ ... ಒಂದು ಘೋಷಣೆ ಮಾಡಿದೆ. ಅದೇನೆಂದರೆ ... ದಿನಗಳಲ್ಲಿ ಇಡೀ ದೇಶದಾದ್ಯಂತ ಆರೆಸ್ಸೆಸ್ ವಿರುದ್ಧ ... ಎಸ್‌ಎಸ್‌ಎಸ್ - ಅಂದರೆ ಸಂವಿಧಾನ ಸುರಕ್ಷಾ ... - ಎಂಬ ಆಂದೋಲನವನ್ನು ಕಟ್ಟುತ್ತೇವೆ ಮತ್ತು ಮೋ... ಹೇಳುತ್ತೇವೆ "ಮೋದಿಜಿ, ನಾವು ನಿಮ್ಮ ಹಿಂದೂತ್ವ... ಧ್ವಂಸಗೊಳಿಸುತ್ತೇವೆ" ಎಂದು.

ಮಿತ್ರರೆ, ನನಗೆ ಅನ್ನಿಸುತ್ತೆ ರೋಹಿತ್ ವೇಮು...



...ಪ್ರಕರಣವನ್ನು ಒಳಕೊಂಡು ನೋಡಬೇಕೆಂದು. ...ತ್ ಓರ್ವ ಪ್ರಗತಿಪರ ಯುವಕನಾಗಿದ್ದ. ಆತನ ...ಟ ಜಾತಿವ್ಯವಸ್ಥೆಯ ವಿರುದ್ಧ ಮಾತ್ರವಾಗಿರಲಿಲ್ಲ, ...ೋಮುವಾದದ ವಿರುದ್ಧವೂ ಹೋರಾಡುತ್ತಿದ್ದ. ಆತ ...ಗಿದ್ದು ಎಷ್ಟು ದಲಿತ ಪರವಾಗಿದ್ದನೋ ಅಷ್ಟೇ ...್ಮಿಕರ ಪರವೂ ಇದ್ದ. ಆತ ಅದೆಷ್ಟು ರೈತರ ಪರ ...ಡುತ್ತಿದ್ದನೋ ಅಷ್ಟೇ ಕಾರ್ಮಿಕರ ಪರವೂ ...ಡುತ್ತಿದ್ದ. ಆದರೆ ಯಾವತ್ತು ಮೋದಿ ಪ್ರಧಾನಿ ...ೀ ಮತ್ತು ಯಾವಾಗಿನಿಂದ ಬಿಜೆಪಿಯ ಕುತರ್ಕಗಳು ...ವಾದವೋ ಅವತ್ತಿನಿಂದ ಸಂವಿಧಾನದ ...ನೆಯಲ್ಲಿರುವ ಜಾತ್ಯತೀತ ಮತ್ತು ಸಮಾಜವಾದ ...ದಗಳ ಬದಲಾಗಿ ಹಿಂದೂತ್ವ ಮತ್ತು ಕಾರ್ಪೋರೇಟ್ ...ತ್ರ ಎಂಬ ಪದಗಳನ್ನು ತರಲು ಇಚ್ಛಿಸಿದ್ದಾರೆ.

...ಯ್ಯ ಕುಮಾರ್ ಆಗಲಿ, ಜಿಗ್ನೇಶ್ ಮೆವಾನಿ ಆಗಲಿ, ...ತ್ ವೇಮುಲ ಆಗಲಿ ಅಥವಾ ಈ ದೇಶದಲ್ಲಿ ...ವಸ್ಥೆಯನ್ನು ಧ್ವಂಸ ಮಾಡಲು ಬಯಸುವವರಾಗಲಿ, ...ನಿರ್ಮೂಲನೆಗೆ ಪ್ರಯತ್ನಿಸುವವರಾಗಲಿ, ಇಲ್ಲಿ ...ತ ವ್ಯವಸ್ಥೆಯನ್ನು ಬಯಸುವವರಾಗಲಿ, ಯಾರು ...ವಾದಕ್ಕಾಗಿ ಎದ್ದು ನಿಲ್ಲುತ್ತಾರೋ ಅಂತಹ ಎಲ್ಲರ ...ಟ್ಟಡಗಿಸಲು ಸಂಘ ಮತ್ತು ಬಿಜೆಪಿಯ ಜನ ...ಸುತ್ತಾರೆ. ನ್ಯಾಯಕ್ಕಾಗಿ ದೇಶದ ಯುವಜನತೆ ಮತ್ತು ...ರ್ಗಗಳು ಎದ್ದು ನಿಂತರೆ, ಕೇಂದ್ರ ಸರ್ಕಾರ ...ವ್ಯಾಲಯಗಳ ಮೇಲೆ - ಅದು ಹೈದರಾಬಾದ್ ...ವಿವಿ ಆಗಬಹುದು, ಬನಾರಸ್ ವಿವಿ ಆಗಬಹುದು, ...ಯು ಆಗಬಹುದು, ಪುಣೆಯ ಎಫ್‌ಟಿಐಐ ...ುದು ಅಥವಾ ಚೆನ್ನೈಯ ಅಂಬೇಡ್ಕರ್-ಫುಲೆ ಸ್ಟಡಿ ... ಆಗಬಹುದು - ದಾಳಿ ಮಾಡುತ್ತದೆ. ಇಂತಹ ...ದಲ್ಲಿ ನನ್ನದೊಂದು ನಿವೇದನೆ. ಅದೇನೆಂದರೆ ... ತರಹ ಸಂಘ ಪರಿವಾರ ಯುವಕರನ್ನು ಬಳಕೆ ...ಳ್ಳುತ್ತಿದೆಯೋ, ಅದಕ್ಕೆ ಪರ್ಯಾಯವಾಗಿ ಅದಕ್ಕಿಂತ ...ಾದ ಪ್ರಗತಿಪರ ಯುವ ಶಕ್ತಿಯನ್ನು ಕಟ್ಟಲು ...ಹೋರಾಟಗಾರರು ನಾಯಕತ್ವವನ್ನು ಯುವಕರಿಗೆ ...ಕಿದೆ.

...ನು ಊನ ಘಟನೆ ನಂತರ ಹತ್ತು ಹನ್ನೆರಡು ...ನ್ನು ಸುತ್ತಿದ್ದೇನೆ. ಎಲ್ಲ ಕಡೆ ದಲಿತ ಸಂಘಟನೆಗಳು, ...ು, ರಾಜಕೀಯ ಪಕ್ಷಗಳು, ದಲಿತರ ಹಕ್ಕುಗಳಿಗಾಗಿ ...ಡುತ್ತಿರುವವರನ್ನು ಭೇಟಿ ಆಗಿದ್ದೇನೆ. ಈ ಅನುಭವದ ...ದ ಮೇಲೆ ನಾನು ಸೈದ್ಧಾಂತಿಕವಾದ ಒಂದು ...ನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ನಮಗೆ ...ವಾಗಿಯೂ ರಾಜಕೀಯಾಧಿಕಾರ ಬೇಕಿದೆ. ಆದರೆ ...ಯ ಅಧಿಕಾರಕ್ಕಾಗಿ ನಾವೆಷ್ಟು ಹೋರಾಡಬೇಕೋ ... ದಿಟ್ಟವಾಗಿ ಅಂಬೇಡ್ಕರ್ ಅವರ ಕೊನೆಯ ...ಾದ ಜಾತಿವಿನಾಶಕ್ಕೂ ಶ್ರಮಿಸಬೇಕಿದೆ. ಯಾಕೆಂದರೆ ...ಡ್ಕರರು ಕೇವಲ ರಾಜಕೀಯ ಅಧಿಕಾರಕ್ಕೆ ...ಲಿಲ್ಲ, ರಾಜಕೀಯಾಧಿಕಾರದ ಜೊತೆಜೊತೆಗೆ ...ನಾಶಕ್ಕೂ ದುಡಿದಿದ್ದರು. ಆದ್ದರಿಂದ ನಾವು ...ೀಯ ಅಧಿಕಾರದ ಜೊತೆಗೆ ಜಾತಿ ...ಲನೆಗಾಗಿಯೂ ಹೋರಾಡಬೇಕಿದೆ. 1938ರಲ್ಲಿ ...ಡ್ಕರ್ ಅವರು ಬಹಳ ಮುಖ್ಯವಾದ ಮಾತು ...ು. ಅದೇನೆಂದರೆ "ನಮ್ಮ ಶತ್ರು ಬಂಡವಾಳವಾದ ...ಬ್ರಾಹ್ಮಣವಾದ" ಎಂದು. ನಾವು ಮನುವಾದ ...ಜಾತಿವಾದಕ್ಕೆ ಧಿಕ್ಕಾರ ಹೇಳಿದರೆ ಮಾತ್ರ ಸಾಕಾಗಲ್ಲ, ...ಂಡವಾಳವಾದಕ್ಕೂ ಧಿಕ್ಕಾರ ಹೇಳಬೇಕಿದೆ.


...ವು ಕ್ರಾಂತಿಕಾರಿ ಅಂಬೇಡ್ಕರ್ ಬಗ್ಗೆ ಹೆಚ್ಚು ...ಡುವುದಿಲ್ಲ, ನಾವು ಅರ್ಥ ಮಾಡಿಕೊಳ್ಳಬೇಕಿರುವ ... ಯಾವುದೆಂದರೆ ಮೋಹನ್ ಭಾಗವತ್‌ನ ಹೊಟ್ಟೆ ...ುವ ಕೊಬ್ಬು ಅಂಬಾನಿ ಮನೆಯ ಸ್ಯಾಂಡ್ವಿಚ್‌ನಿಂದ ... ಎಂಬುದು. ನಾವು ಭೂಮಿ, ವಸತಿ ಮತ್ತು ...ಕ್ಕೆ ಹೋರಾಡಬೇಕಿದೆ. ನಾನು ದಕ್ಷಿಣ ಭಾರತದ ...ಲ್ಲಿ ಸುತ್ತಾಡುತ್ತಿದ್ದೇನೆ. ನಾನು ದಕ್ಷಿಣ ಭಾರತದ ...ನ್ನು ಕಲಿಯುತ್ತೇನೆ. ನಾವೆಲ್ಲರೂ ಸೇರಿ ಒಂದು ... ರಚಿಸಿ ಅಂಬೇಡ್ಕರ್, ಫುಲೆ ಮತ್ತು ಭಗತ್ ... ಅವರ ಆಶಯಗಳನ್ನು ಈಡೇರಿಸುವ ಕೆಲಸ ...ೀಣ, ಮುಂದೆ ಬರುತ್ತಿರುವ ಭಗತ್ ಸಿಂಗ್ ... ದಿನದಂದು ನಾವೆಲ್ಲರೂ ಸೇರಿ (ಎಲ್ಲಾ ರಾಜ್ಯದವರು ...ಭೂಮಿ, ವಸತಿ ಮತ್ತು ಆಹಾರ ವಿಷಯ ...ಂದು ಸಮಾವೇಶ-ವಿಚಾರ ಸಂಕಿರಣ ಮಾಡೋಣ, ... ದೊಡ್ಡ ಜನಾಂದೋಲನವನ್ನು ರೂಪಿಸೋಣ. ...ದಲಿತ-ದಮನಿತರಿಗೆ ಐದು ಎಕರೆ ಜಮೀನು ...ದು ಹೋರಾಡೋಣ. ನನ್ನ ಕೊನೆಯ ಮಾತು ...ಮಾತುಗಳನ್ನು ಮುಗಿಸುತ್ತೇನೆ.

...ಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸುವ ... "ಈ ದೇಶದ ಹಳ್ಳಿಗಳಲ್ಲಿ ವಾಸಿಸುವವರಿಗೆ ನನಗೆ ... ಮಾಡಲು ಸಾಧ್ಯವಾಗಲಿಲ್ಲ" ಅಂದಿದ್ದರು. ...ರ್ ಅವರ ಈ ಅಪೂರ್ಣ ಕನಸನ್ನು ನನಸು ...ೋಣ.

...ಭೀಮ್, ಇಂಕ್ವಿಲಾಬ್ ಜಿಂದಾಬಾದ್.

...ಗಳು. ■

ಚಲೋ ಉಡುಪಿಯಿಂದ ಚಲೋ ತುಮಕೂರು ತನಕ



ಕೆಲವೇ ದಿನಗಳ ಹಿಂದೆ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಸಂವಿಧಾನ ಜಾರಿಗೊಂಡ ದಿನವನ್ನು 'ಗಣರಾಜ್ಯೋತ್ಸವ' ಹೆಸರಿನಲ್ಲಿ ಆಚರಿಸಿದ್ದೇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕಂಡ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವದ ಪರಿಕಲ್ಪನೆಯನ್ನು ಬಾಯಿ ತುಂಬಾ ಹಾಡಿಹೊಗಳಿದ್ದೇವೆ. ಸಂವಿಧಾನದ ಒಟ್ಟಾರೆ ಆಶಯವೂ ಇದೇ ಆಗಿದೆ ಎಂಬುದನ್ನು ಮರೆಯದೆ ಭಾಷಣದಲ್ಲಿ ಸೇರಿಸಿದ್ದೇವೆ. ಆದರೆ ವಾಸ್ತವದಲ್ಲಿ ಈ ಮೂರೂ ಇಲ್ಲದಿರುವ ಪರಿಸ್ಥಿತಿ ಇನ್ನಷ್ಟು ಹೆಚ್ಚುತ್ತಾ ವಿಸ್ತರಿಸುತ್ತಿದೆ. ಇದಕ್ಕೆ ಇತ್ತೀಚಿನ ದಲಿತ, ಮಹಿಳೆ ಮತ್ತು ಅಲ್ಪಸಂಖ್ಯಾತರ ಮೇಲಿನ ಹಲ್ಲೆಗಳು ಸಾಕ್ಷಿ ನುಡಿಯುತ್ತಿವೆ.

ದಲಿತ ಚಳವಳಿಗಳು ವಿಘಟನೆಗೊಂಡ ಕಾಲಾನಂತರ ದಲಿತರ ಬದುಕು ಇನ್ನಷ್ಟು ಹದಗೆಡುತ್ತಾ ಸಾಗುತ್ತಿದೆ. ಚಳವಳಿಯೊಳಗೆ ಮೂಡಿದ ನಾಯಕತ್ವದ ಐಡೆಂಟಿಟಿ ಮೇಲುಗೈ, ಒಳಜಾತಿಗಳ ಒಳಸುಳಿವು, ಒಗ್ಗೂಡುವುದರ ಹಿಂದೆ ಇರುವ ಅಸಹಾಯಕತೆ ಮುಂತಾದವುಗಳು ದಲಿತರ ಮೇಲಿನ ದೌರ್ಜನ್ಯಕ್ಕೆ ತಕ್ಷಣ ಒಕ್ಕೊರಲಿನಿಂದ ಸ್ಪಂದಿಸುವ ಗುಣವನ್ನು ಕಳೆದುಕೊಳ್ಳುವಂತೆ ಮಾಡಿವೆ. ಇದರಿಂದಾಗಿ ದಲಿತ ಚಳವಳಿಯ ಬಗ್ಗೆ ಅಗಾಧ ವಿಶ್ವಾಸವನ್ನು ಹೊಂದಿದ್ದ ಅನೇಕ ಯುವಜನತೆ ಭ್ರಮನಿರಶನಗೊಳ್ಳುವ ಹಾದಿಗೆ ಬಂದಿದ್ದಾರೆ. ಈ ಯುವಜನತೆಯ ಚಳವಳಿಯ ತೀವ್ರತೆ ಎಷ್ಟಿತ್ತೆಂದರೆ ಯಾವುದಾದರೊಂದು ಮಹಾಮಳೆ ಬಂದರೆ ಅದರಲ್ಲಿ ಮೈ ಪೂರ್ತಿ ಒಡ್ಡಬೇಕೆಂದು ತವಕಪಡುತ್ತಿತ್ತು. ಇಂತಹ ಮಹಾಮಳೆಯನ್ನು 'ಉಡುಪಿ ಚಲೋ' ಜಾಥಾವನ್ನು ಗೆಳೆಯರು ಆಯೋಜಿಸಿದಾಗ ದಲಿತ ದಮನಿತ ಸಮುದಾಯದ ಪ್ರಜ್ಞಾವಂತ ಯುವಕರೆಲ್ಲಾ ಇದಕ್ಕೆ ದನಿಗೂಡಿಸಿ ಇಡೀ ಉಡುಪಿಯನ್ನು ನೀಲಿಮಯ ಮಾಡಿಬಿಟ್ಟರು. 'ಆಹಾರ ನಮ್ಮ ಆಯ್ಕೆ ಮತ್ತು ಭೂಮಿ ನಮ್ಮ ಹಕ್ಕು' ಎನ್ನುವ ಘೋಷಣೆಯನ್ನು ಕರ್ನಾಟಕದ ಮೂಲೆಮೂಲೆಗೆ ತಲುಪಿಸಿ ಹೊಸ ತಲೆಮಾರಿನಲ್ಲಿ ಒಂದಷ್ಟು ಜಾಗೃತಿಯನ್ನು ಮೂಡಿಸಿದರು. ಈಗ ಇದೇ ಗೆಳೆಯರ ಬಳಗ ದಲಿತರ ಮೇಲೆ ಒಟ್ಟಾರೆ ನಡೆಯುತ್ತಿರುವ ಕೊಲೆ ಸುಲಿಗೆ ವಿರುದ್ಧ ಜಾಗೃತಿ ಅಭಿಯಾನವನ್ನು 'ತುಮಕೂರು ಚಲೋ ಜಾಥಾ'ದ ಮೂಲಕ ಹಮ್ಮಿಕೊಳ್ಳಲು ಮುಂದಾಗಿದ್ದಾರೆ. ಸಂವಿಧಾನ ಜಾರಿಗೊಂಡ ಇಷ್ಟು ವರ್ಷಗಳ ನಂತರವೂ ಜಾಗೃತಿ ಅಭಿಯಾನದ ಮೂಲಕ ದಲಿತ, ದಮನಿತರ ಕೊಲೆ, ಸುಲಿಗೆ, ಅವಮಾನದ ಬದುಕನ್ನು ಕೊನೆಗಾಣಿಸಲು ಶ್ರಮಪಡಬೇಕಿರುವುದು ವಿಪರ್ಯಾಸವೇ ಸರಿ.

ಇತ್ತೀಚೆಗೆ ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ದಲಿತ ಯುವಕ ಬೇರೆ ಜಾತಿಯ ಯುವತಿಯನ್ನು ಪ್ರೀತಿಸಿದನೆಂಬ ಕಾರಣ ನೀಡಿ ಮನಸೋ ಇಚ್ಛೆ ಥಳಿಸಲಾಗಿದೆ. ಅದೂ ಅಂಗಾಂಗಗಳು ಊನಗೊಳ್ಳುವಂತೆ. ಇತ್ತ ಚಿಕ್ಕಬಳ್ಳಾಪುರದ ಗುಡಿಬಂಡೆಯಲ್ಲಿ 9ನೇ ತರಗತಿ ವಿದ್ಯಾರ್ಥಿ ಅನುಮಾನಾಸ್ಪದವಾಗಿ ನೇಣಿನಲ್ಲಿ ತೂಗಾಡುತ್ತಿದ್ದಾನೆ. ಇದೂ ಸಾಲದೆಂಬಂತೆ ಭೂಮಾಲೀಕನೊಬ್ಬನ ಗುಂಡಿಗೆ ದಲಿತನ ಪ್ರಾಣಪಕ್ಷಿ ಹಾರಿಹೋಗಿದೆ. ಅಯ್ಯಪ್ಪ ದೇವರ ಪ್ರಸಾದ ತಿಂದ ಕಾರಣ ಜಮಖಂಡಿಯಲ್ಲಿ ದಲಿತ ಬಾಲಕನನ್ನು ಹೊಡೆದು ಸಾಯಿಸಲಾಗಿದೆ. ಇನ್ನೆಷ್ಟು ಬಲಿದಾನಗಳನ್ನು ಇಲ್ಲಿ ಹೇಳಲು ಸಾಧ್ಯ. (ಸರ್ಕಾರದ ಅಂಕಿಅಂಶಗಳೇ ದಲಿತರ ದೌರ್ಜನ್ಯದ ಸರಮಾಲೆಯನ್ನು ಕಾಲಕಾಲಕ್ಕೆ ಪ್ರಕಟಪಡಿಸುತ್ತಲೇ ಬರುತ್ತಿವೆ.) ಇಂತಹವುಗಳನ್ನು ಬರೆಯಲು ಹೊರಟಷ್ಟೂ ಅಕ್ಷರವೇ ರಕ್ತವರ್ಣವಾಗುವ ಭಯ ಕಾಡುತ್ತದೆ.

ಈ ಎಲ್ಲ ಬಲಿದಾನಗಳನ್ನು ಬುಡಸಮೇತ ಕೀಳಬೇಕಿರುವುದು ಸರ್ಕಾರದ ಆದ್ಯ ಕರ್ತವ್ಯ ಆದರೆ ಆಗಾಗುತ್ತಿಲ್ಲ, ಸರ್ಕಾರಗಳು ಪೂರ್ಣ ಪ್ರಮಾಣದಲ್ಲಿ ಕರ್ತವ್ಯ ಮರೆತಿದ್ದಾವೆಂದು ಸಾರಾಸಗಟಾಗಿ ತಳ್ಳಿಹಾಕಲೂ ಬರುವುದಿಲ್ಲ, ಒಂದಷ್ಟು ಮಟ್ಟಿಗೆ ಎಚ್ಚೆತ್ತುಕೊಂಡು ತನ್ನೆರಡು ಕಣ್ಣುಗಳಲ್ಲಿ ಒಂದು ಕಣ್ಣನ್ನು ದಲಿತರ ಬದುಕನ್ನು ಬದಲಿಸುವ ಕಡೆ ಹಾಯಿಸಿವೆ. ಆದರೆ ಇದೆಲ್ಲಾ ಅನುದಾನಗಳನ್ನು ನೀಡುವ ದಕ್ಕಷ್ಟೇ ಸೀಮಿತಗೊಂಡಿರುವುದು ವಿಪರ್ಯಾಸವೇ ಸರಿ! ಇದಕ್ಕೆ ಉದಾಹರಣೆಯೆಂಬಂತೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿಗೆ 52393 ಕೋಟಿ ಹಾಗೂ ಪರಿಶಿಷ್ಟ ಪಂಗಡಕ್ಕೆ 31920 ಕೋಟಿ ಅನುದಾನ ಮತ್ತು 4195 ಕೋಟಿ ಅಲ್ಪಸಂಖ್ಯಾತ ಸಮುದಾಯಕ್ಕೆ ನೀಡಿದೆ. ಹಿಂದಿನ ವರ್ಷ ಇದೇ ಸರ್ಕಾರ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 125ನೇ ಜನ್ಮ ದಿನಾಚರಣೆಯ ನಿಮಿತ್ತ ಪಂಚತೀರ್ಥ ಯೋಜನೆಯನ್ನು ಜಾರಿಗೊಳಿಸಿ ಬಾಬಾ ಸಾಹೇಬರಿಗೆ ಸಂಬಂಧಿಸಿದ ತಾಣಗಳನ್ನು ಸ್ಮಾರಕವನ್ನಾಗಿಸುವತ್ತ ಹೆಜ್ಜೆ ಇಟ್ಟು ಇದಕ್ಕಾಗಿ 150 ಕೋಟಿ ಮೀಸಲಿಟ್ಟಿದೆ.

ಇನ್ನು ರಾಜ್ಯ ಸರ್ಕಾರದ ವಿಚಾರಕ್ಕೆ ಬಂದರೆ 2013ರ ಪರಿಶಿಷ್ಟರ ಉಪಯೋಜನೆ ಕಾಯ್ದೆಯ ಪ್ರಕಾರ ಆಯವ್ಯಯದ ಯೋಜನಾ ಗಾತ್ರದಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ. 17.15 ರಷ್ಟು ಹಣವನ್ನು, ಪರಿಶಿಷ್ಟ ಪಂಗಡದವರಿಗೆ ಶೇ. 6.95 ರಷ್ಟು ಹಣವನ್ನು ಮೀಸಲಿಟ್ಟಿತು. ಅಂದರೆ ಕ್ರಮವಾಗಿ 12,450 ಕೋಟಿ ಮತ್ತು 5,045 ಕೋಟಿಗಳಂತೆ ಒಟ್ಟು 17,495 ಕೋಟಿಗಳನ್ನು ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟಿತು. (ಆದರೆ ಕಳೆದ ಸಾಲಿನ ಬಜೆಟ್ಟಿನಲ್ಲಿ 16,356 ಕೋಟಿಗಳನ್ನು ಮಾತ್ರ ಮೀಸಲಿಟ್ಟು ತಾನು ಮಾಡಿದ ಕಾಯ್ದೆಯನ್ನು ತಾನೇ ಉಲ್ಲಂಘಿಸಿ ದಲಿತರಿಗೆ 1,139 ಕೋಟಿಗಳನ್ನು ತಪ್ಪಿಸಿತು.)

ಇದರೊಂದಿಗೆ ಇದೇ ರಾಜ್ಯ ಸರ್ಕಾರ ಕಳೆದ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮೂಲಕ ಅಂಬೇಡ್ಕರ್ ಅಭಿಯಾನವನ್ನು ಕೈಗೊಂಡು ರಾಜ್ಯದ ಎಲ್ಲಾ ಅಂಬೇಡ್ಕರ್ ಅಧ್ಯಯನ ಕೇಂದ್ರಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆಯಡಿ 50 ಲಕ್ಷರೂಗಳನ್ನು ನೀಡಿತು. ಇದು ಒಂದು ರೀತಿಯಲ್ಲಿ ಹಲವು ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಅವರನ್ನು ಪರಿಚಯಿಸಲಿಕ್ಕೆ ಒಂದು ಹೆದ್ದಾರಿಯನ್ನು ನಿರ್ಮಿಸಿತು. ಈ ಸಾಲಿನಲ್ಲಿ 'ಅಂಬೇಡ್ಕರ್ ಜ್ಞಾನದರ್ಶನ ಅಭಿಯಾನ' ಕಾರ್ಯಕ್ರಮವನ್ನು ಪ್ರಾರಂಭಿಸಿರುವ ಸರ್ಕಾರ ಸುಮಾರು 10 ಕೋಟಿಯನ್ನು ಇದಕ್ಕಾಗಿ ಮೀಸಲಿಟ್ಟಿದೆ. ಇದರ ಮೂಲಕ ಅಂಬೇಡ್ಕರ್ ಅವರನ್ನು ಇನ್ನಷ್ಟು ವಿದ್ಯಾರ್ಥಿಗಳಿಗೆ, ಯುವಜನತೆಗೆ ಬಾಬಾಸಾಹೇಬರ ವಿಚಾರಗಳನ್ನು ಪರಿಚಯಿಸುವ ಸದುದ್ದೇಶ ಸರ್ಕಾರದ್ದು. ಇದು ಸರ್ಕಾರವು ಅಂಬೇಡ್ಕರ್ ಅವರ 125 ನೇ ವರ್ಷಾಚರಣೆ ಪ್ರಯುಕ್ತ ನೀಡುತ್ತಿರುವ ಅತ್ಯುತ್ತಮ ಗೌರವವೇ ಸರಿ.

ಆದರೆ ಇಷ್ಟೆಲ್ಲ ಅನುದಾನ ನೀಡುತ್ತಿರುವ ಸರ್ಕಾರಗಳು ಅನುದಾನ ನೀಡುವುದಷ್ಟೇ ತನ್ನ ಕೆಲಸ ಎಂದು ಕಣ್ಣು ಮುಚ್ಚಿದರೆ ಹೇಗೆ? ದಲಿತರ ಅಭಿವೃದ್ಧಿಯ ಹೆಸರಿನಲ್ಲಿ ಕೋಟಿ ಕೋಟಿ ನೀಡಿ ದಲಿತರ ಕೊಲೆ ಸುಲಿಗೆಗಳ ಕುರಿತು ಜಾಣ ಮೌನವನ್ನು ತಾಳಿದರೆ ಹೇಗೆ? (ಇತ್ತ ಬಂದ ಅನುದಾನಗಳೂ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲವೆಂಬ ಕೂಗೂ ಒಂದು ಕಡೆ ಇದೆ.) ಒಂದು ವೇಳೆ ಅನುದಾನವು ಸಮರ್ಪಕ ಬಳಕೆಯಾದರೆ ದಲಿತರ ಅವಮಾನದ ಬದುಕು ಕೊನೆಗೊಳ್ಳುವುದೇ? ಜಾತಿಯ ವಿಷವನ್ನು ದಲಿತರ ನರನಾಡಿಗಳಿಗೆ ತುಂಬಿ ನಿರ್ನಾಮ ಮಾಡುತ್ತಿರುವ ಶಕ್ತಿಗಳು ಇದರಿಂದ ವಿಚಲಿತಗೊಳ್ಳಲು ಸಾಧ್ಯವೇ? ಇದೆಲ್ಲವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ.

ದಲಿತರ ಅಭಿವೃದ್ಧಿ ಎಂದರೆ ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವುದರಲ್ಲಿ, ಭವನ ಕಟ್ಟುವುದರಲ್ಲಿ, ದಲಿತರ ಕೇರಿಗಳಿಗೆ ಡಾಂಬರು ಹಾಕಿಸುವುದರಲ್ಲಿ, ಪ್ರತಿವರ್ಷ ಅನುದಾನ ನೀಡಿ ಸುಮ್ಮನಾಗುವುದರಲ್ಲಿ, ಶೌಚಾಲಯಗಳನ್ನು ಕಟ್ಟಿಸಿಕೊಡುವುದರಲ್ಲಿ ಮಾತ್ರ ಇಲ್ಲ, ಇವೆಲ್ಲ ಬೇಡವೆಂತಲೂ ಅರ್ಥವಲ್ಲ, ಇವುಗಳು ಮೂರಾಬಟ್ಟೆಯಾಗುತ್ತಿರುವ ದಲಿತರ ಬದುಕನ್ನು ಕೊಂಚ ಕಟ್ಟಿಕೊಳ್ಳಲು ಅನುಕೂಲ ಸಿಂಧುಗಳೇ ಸರಿ. ಆದರೆ ಅಸ್ಪೃಶ್ಯತೆ, ಅವಮಾನದ ಬದುಕನ್ನು ಇದು ಹೋಗಲಾಡಿಸುತ್ತದೆ ಎಂಬುದು ಸುಳ್ಳಲ್ಲವೇ!

ಒಂದು ಕಡೆ ದಲಿತರ ಕೊಲೆ ಸುಲಿಗೆ ನಡೆಯುತ್ತಿದೆ. ಮತ್ತೊಂದು ಕಡೆ ಅನುದಾನಗಳ ಹಣ ಹರಿದುಬರುತ್ತಿದೆ. ಇದು ವಿಪರ್ಯಾಸವಲ್ಲದೆ ಮತ್ತೇನು? ಮೇಲಿನ ಮೂಲಸೌಕರ್ಯಗಳನ್ನು ಸರ್ಕಾರಗಳು ಒದಗಿಸುತ್ತಲೇ ದಲಿತರ ಬದುಕಿನತ್ತ ಇನ್ನೊಂದು ಕಣ್ಣನ್ನು ತೆರೆಯಬೇಕಿದೆ. ದಲಿತರ ಬದುಕು ಅನುದಾನದ ಮೇಲೆ ನಿಂತಿಲ್ಲ ಬದಲಾಗಿ ಸರಿಸಮನಾಗಿ ಅವಮಾನದ ಬದುಕಿನಿಂದ ದೂರ ನಿಲ್ಲುವ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳುವುದರಲ್ಲಿದೆ. ದಲಿತರಿಗೆ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳುವ ಹಾಗೆ ಮಾಡದ ಹೊರತು ಅವರ ಸಮಗ್ರ ಬದುಕಿನ ಬದಲಾವಣೆ ಖಂಡಿತಾ ಅಸಾಧ್ಯ.


ಈ ಹಿನ್ನೆಲೆಯಲ್ಲಿ ಗೆಳೆಯರ ಬಳಗ 'ತುಮಕೂರು ಚಲೋ' ದ ಮೂಲಕ ಗುಬ್ಬಿಯ ಅಭಿಷೇಕ್ ಮೇಲೆ ನಡೆದ ದೌರ್ಜನ್ಯ ಪ್ರಕರಣದಲ್ಲಿ ದಲಿತ ಯುವಕನಿಗೆ ಸೂಕ್ತ ನ್ಯಾಯ ಸಿಗುವಂತೆ, ರಾಜ್ಯಾದ್ಯಂತ ಅವ್ಯಾಹತವಾಗಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯ ಕೊಲೆ, ಹಲ್ಲೆ ಹತ್ಯೆ ಮುಂತಾದ ಪ್ರಕರಣಗಳಿಗೆ ಸೂಕ್ತ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ, ಜಾತಿ ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನ್ಯಾಯ ದೊರೆಯುವ ನಿಟ್ಟಿನಲ್ಲಿ ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತಾ ಪರಿಶಿಷ್ಟ ಜಾತಿ, ವರ್ಗಗಳ ಆಯೋಗ ಮತ್ತು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಕೇಳುತ್ತಾ, ಶೈಕ್ಷಣಿಕ ವಲಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಕೊನೆಯಾಗಬೇಕೆಂದು ಮತ್ತು ರಾಜ್ಯಾದ್ಯಂತ ನಡೆದ ಆದಿವಾಸಿ ಮತ್ತು ಬುಡಕಟ್ಟು ಜನರ ಮೇಲಿನ ನಿರಂತರ ಶೋಷಣೆ ಕೊನೆಗೊಳ್ಳಬೇಕೆಂದು ಒತ್ತಾಯಿಸುತ್ತಾ, ಈ ಎಲ್ಲಾ ಬೇಡಿಕೆಗಳ ಹಿನ್ನೆಲೆಯಲ್ಲಿ ಉಡುಪಿ ಚಲೋದಂತೆಯೇ ತುಮಕೂರು ಚಲೋ ಜಾಥಾವನ್ನು ಆಯೋಜಿಸಿದೆ.



ಈಗಲಾದರೂ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ ತಾನು ತೆರೆದಿರುವ ಒಂದು ಕಣ್ಣಿನ ಜೊತೆಗೆ ಇನ್ನೊಂದು ಕಣ್ಣು ತೆರೆದರೆ ಬಹುಶಃ ದಲಿತರ ಬದುಕಿನಲ್ಲಿ ಬದಲಾವಣೆಯ ಗಾಳಿಯನ್ನು ನೋಡಬಹುದೇನೊ! ಉಡುಪಿ ಚಲೋದ ಮೂಲಕ ಹೊಸ ಭರವಸೆ ಮೂಡಿಸಿದ್ದ ಗೆಳೆಯರು ತಮ್ಮದೇ ಆದ ಅನೇಕ ಮಿತಿಗಳ ನಡುವೆ ಮತ್ತೆ ಮರುಹುಟ್ಟು ಪಡೆದಿದ್ದಾರೆ. ರಚನಾತ್ಮಕ ಸಂಘಟನೆಯ ಕೊರತೆಯನ್ನು ಈಗಲೂ ಎದುರಿಸುತ್ತಿರುವ ಈ ಗೆಳೆಯರ ಬಳಗ 'ಚಲೋ ತುಮಕೂರು' ಮೂಲಕ ಇನ್ನಷ್ಟು ಹೊಸ ಸಾಧ್ಯತೆಗಳ ಕಡೆಗೆ ಚಲಿಸುವ ಹುಮ್ಮಸ್ಸಿನಲ್ಲಿದ್ದಾರೆ. ಇದು ನೆರವೇರಲಿ. ಜೊತೆಗೆ ಕರ್ನಾಟಕದ ಪರ ಐಕ್ಯ ಘೋಷಣೆ ಮೊಳಗುವ ರೀತಿ ದಲಿತ ದಮನಿತರ ಯುವ ಶಕ್ತಿಯನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲಿ.

ಈ ನಾಡಿನ ಪ್ರಗತಿಪರ ವರ್ಗ ಮತ್ತು ಮನುಷ್ಯಪರ ಕಾಳಜಿಯುಳ್ಳವರೆಲ್ಲ ಒಕ್ಕೊರಲಿನಿಂದ ದಲಿತ, ದಮನಿತ ಮತ್ತು ಮಹಿಳೆಯರ ಪರ ನಿಲ್ಲುವ ಅನಿವಾರ್ಯತೆ ಇದೆ. ಇದಿಷ್ಟೇ ಅಲ್ಲದೆ ನಾಗರಿಕರೆನಿಸಿಕೊಂಡ ಹಲವರು ಇದು ಸರ್ಕಾರದ ಕೆಲಸವೆಂದೋ, ತುಮಕೂರು ಚಲೋ ನಡೆಸುತ್ತಿರುವವರ ಕೆಲಸವೆಂದೋ ಕೂರದೆ ದಮನಿತರ ಪರ ನಿಲ್ಲಬೇಕಿದೆ. ಆಗ ಮಾತ್ರ ಸಂವಿಧಾನದ ಮೂಲಭೂತ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವಗಳು ಈ ದೇಶದ ಮಣ್ಣಿನಾಳದಲ್ಲಿ ಗಟ್ಟಿಯಾಗಿ ಬೇರು ಬಿಡಲು ಸಾಧ್ಯ.

■ ಡಾ.ಹೆಚ್.ಡಿ. ಉಮಾಶಂಕರ್



ಅನುವಾದಕನ ಪ್ರಸ್ತಾವನೆ

ಮಾನವ ತನ್ನನ್ನು ರಕ್ಷಿಸಿಕೊಳ್ಳಲು ವನ್ಯಮೃಗಗಳನ್ನು ಮತ್ತು ತನ್ನ ಆಹಾರಕ್ಕಾಗಿ ಕಾಡಿನ ಇತರ ಸಾದು ಪ್ರಾಣಿಗಳನ್ನು ಹಿಂದಿನಿಂದಲೂ ಕೊಲ್ಲುತ್ತಲೇ ಬಂದಿದ್ದಾನೆ. ಕೇವಲ ಕಲ್ಲು, ಕತ್ತಿ, ಕೊಡಲಿ, ಬಿಲ್ಲುಬಾಣಗಳಂತಹ ಆಯುಧಗಳಿದ್ದಾಗ ಮಾನವ ಮತ್ತು ಪ್ರಾಣಿಗಳ ಮಧ್ಯೆ ಒಂದು ಸರಿತೂಕದ ಹೋರಾಟವಿರುತ್ತಿತ್ತು. ಆದರೆ ಸ್ಫೋಟಕಗಳು, ಮದ್ದುಗುಂಡುಗಳಿರುವ ಬಂದೂಕುಗಳು ಬಂದಮೇಲೆ ಪಾಪದ ಕಾಡುಪ್ರಾಣಿಗಳು ಮಾನವನ ದುರಾಸೆಗೆ ನಿರಂತರವಾಗಿ ಬಲಿಯಾಗುತ್ತಾ ತಮ್ಮ ಸಂತತಿಯ ಕೊನೆಯನ್ನು ತಲುಪುವ ಹಂತಕ್ಕೆ ಬಂದಿವೆ. ಇವತ್ತು ಸರ್ಕಾರಗಳು ನೂರಾರು ಕೋಟಿ ರೂಪಾಯಿಗಳನ್ನು ವ್ಯಯಿಸಿ ಅಳಿದುಳಿದಿರುವ ವನ್ಯಮೃಗಗಳನ್ನು ಸಂರಕ್ಷಣೆ ಮಾಡಬೇಕಾದ ಪರಿಸ್ಥಿತಿ ಬಂದಿದೆ.

ಪಾಶ್ಚಿಮಾತ್ಯ ಬೇಟೆಗಾರರನ್ನು ಆಫ್ರಿಕಾ ಮತ್ತು ಭಾರತದ ಕಾಡುಗಳು ಯಾವಾಗಲೂ ಆಕರ್ಷಿಸಿವೆ. ಹಾಗಾಗಿ ಬ್ರಿಟಿಷರ ಆಡಳಿತಕ್ಕೊಳಗಾದಾಗಿನಿಂದ ಭಾರತದ ವನ್ಯಮೃಗಗಳು ನಿರಂತರ ಅಪಾಯಕ್ಕೆ ಸಿಕ್ಕಿಕೊಂಡವು. ಸುಮಾರು ಇನ್ನೂರು ವರ್ಷಗಳ ಹಿಂದಿನಿಂದ ನೂರಾರು ಜನ ಗುರಿಕಾರರು ಆಧುನಿಕ ಬಂದೂಕುಗಳೊಂದಿಗೆ ನಮ್ಮ ವನ್ಯಮೃಗಗಳನ್ನು ಕೊಲೆಗೈಯುತೊಡಗಿದರು. ಅಂತವರಲ್ಲಿ ಕೆಲವರು ತಮ್ಮ ಅನುಭವಗಳನ್ನು ದಾಖಲಿಸಿದರು ಕೂಡ. ಕೆನೆತ್ ಆಂಡರ್ಸನ್ ಮತ್ತು ಜಿಮ್ ಕಾರ್ಬೆಟ್ ಕನ್ನಡದ ಓದುಗರಿಗೆ ಪರಿಚಿತರು. ಈಗ ಆರ್ಥರ್ ನ್ಯೂಜೆಂಟ್ ವಾಲ್ಡೆಮರ್ ಪೋವೆಲ್ ಎನ್ನುವ ಮತ್ತೊಬ್ಬನನ್ನು ಪರಿಚಯಿಸುತ್ತಿದ್ದೇವೆ.



ಪೋವೆಲ್ ಬಗೆಗೆ ಹೆಚ್ಚಿನ ವೈಯಕ್ತಿಕ ವಿವರಗಳು ಸಿಗುವುದಿಲ್ಲ. ಆತ ಬರೆದಿದ್ದು ಕೂಡ ಈಗ ಪರಿಚಯಿಸಲಿರುವ "ವ್ಯಾಘ್ರನ ಕರೆ" (ಕಾಲ್ ಆಫ್ ದಿ ಟೈಗರ್) ಎನ್ನುವ ಒಂದೇ ಪುಸ್ತಕ ಇರಬೇಕು. ಮಿಲಿಟರಿಯಲ್ಲಿ ಅಧಿಕಾರಿಯಾಗಿದ್ದ ಪೋವೆಲ್ 20ನೇ ಶತಮಾನದ ಪ್ರಾರಂಭದಲ್ಲಿ ಭಾರತದ ಉದ್ದಗಲಕ್ಕೂ ತಿರುಗಾಡಿ ಸಾಕಷ್ಟು ಹುಲಿ ಚಿರತೆಗಳನ್ನು ಬೇಟೆಯಾಡಿದ್ದ. ಕೆನೆತ್ ಆಂಡರ್ಸನ್‌ನಂತೆಯೇ ಕಾಡು ಮತ್ತು ಕಾಡುಪ್ರಾಣಿಗಳ ಬಗೆಗೆ ಅಗಾಧವಾದ ಜ್ಞಾನವನ್ನು ಹೊಂದಿದ್ದ ಪೋವೆಲ್ ಮೋಜಿನ ಬೇಟೆಯಾಡುತ್ತಿದ್ದುದೇ ಹೆಚ್ಚು ಎನ್ನಿಸುತ್ತದೆ. ಕೆನೆತ್ ಆಂಡರ್ಸನ್ ಕೂಡ ಪ್ರಾರಂಭದಲ್ಲಿ ತಾನೂ ಮೋಜಿಗಾಗಿ ಕಾಡುಪ್ರಾಣಿಗಳನ್ನು ಕೊಂದಿದ್ದನ್ನು ಒಪ್ಪಿಕೊಂಡರೂ ನಂತರದ ವರ್ಷಗಳಲ್ಲಿ ಕೇವಲ ನರಭಕ್ಷಕಗಳನ್ನು ಮಾತ್ರ ಬೇಟೆಯಾಡುವ ನೈತಿಕ ಮಾನದಂಡವನ್ನು ಹಾಕಿಕೊಂಡಿದ್ದ. ಪೋವೆಲ್‌ನ ಬರಹಗಳಲ್ಲಿ ಅಂತಹ ಕಾಳಜಿ ಅಲ್ಲಲ್ಲಿ ಕಾಣಿಸಿದರೂ ಎಷ್ಟೋ ಸಾರಿ ನಿರುಪದ್ರವಿಗಳಾದ ವನ್ಯಮೃಗಗಳನ್ನು ಈತ ಕೊಂದಿದ್ದನೆನ್ನುವ ಅಂಶವನ್ನು ಅವನ ಬರಹಗಳು ಹೇಳುತ್ತವೆ. ಹಾಗಿದ್ದರೂ ವನ್ಯಮೃಗಗಳ ಮತ್ತು ಆಗಿನ ಕಾಲದ ಜನಜೀವನದ ಬಗೆಗೆ ತಿಳಿಯುವ ದೃಷ್ಟಿಯಿಂದ ಈತನ ಪುಸ್ತಕ ಕುತೂಹಲಕಾರಿ ಎಂದು ಇದರ ಅನುವಾದವನ್ನು ಕೈಗೆತ್ತಿಕೊಂಡಿದ್ದೇವೆ. ಇಂತಹ ಬರಹಗಳನ್ನು ಓದಿದರೆ ನಾವು ಕಳೆದುಕೊಂಡ ವನ್ಯಸಂಪತ್ತು ಎಷ್ಟು ಅಗಾಧವಾದದ್ದು ಎನ್ನುವುದರ ಅರಿವಾಗುತ್ತದೆ.

ಪೋವೆಲ್‌ನ ಮುನ್ನುಡಿ

ಇಲ್ಲಿನ ಬೇಟೆಯ ಕಥೆಗಳ ಹರಹು ಉತ್ತರದ ಹಿಮಾಲಯದಿಂದ ದಕ್ಷಿಣದ ನೀಲಗಿರಿ ಪರ್ವತಗಳ ನಡುವಿನ ಪ್ರದೇಶದ ಉದ್ದಗಲಕ್ಕೂ ವ್ಯಾಪಿಸಿದೆ. ಸಮಕಾಲೀನರಿಗಲ್ಲದೆ ಒಂದು ಕಾಲಕ್ಕೆ ಭಾರತದಲ್ಲಿದ್ದು ಈಗ ಪ್ರಪಂಚದ ಎಲ್ಲಾ ಕಡೆ ನೆಲೆಸಿರುವ ಸಾಕಷ್ಟು ಜನರಿಗೆ ತಮ್ಮ ಹಳೆಯ ನೆನಪುಗಳನ್ನು ನವೀಕರಿಸಲು ಈ ಬರಹಗಳು ಸಹಾಯ ಮಾಡಬಹುದು. ಇಲ್ಲಿನ ಮೊದಲ ಭಾಗದ ಬರಹಗಳು ನಾನು ಬೇಟೆಯನ್ನು ಪ್ರಾರಂಭಿಸಿದ ದಿನಗಳಲ್ಲಿ ಮಾಡಿದ ತಪ್ಪುಗಳ ಬಗೆಗೆ ಇದ್ದರೆ ನಂತರದ ಬರಹಗಳು ನಾನು ಕಾಡು ಮತ್ತು ವನ್ಯಮೃಗಗಳ ಬಗೆಗೆ ಅನುಭವಿಯಾಗಿ ಹುಲಿಯ ಕೂಗಿನ ನಕಲು ಮಾಡುವುದನ್ನು ಕೈಗೂಡಿಸಿಕೊಂಡ ಮೇಲಿನ ಮಾಡಿದ ಪ್ರಯತ್ನಗಳ ಬಗೆಗೆ ಇದೆ. ನನ್ನ ಈ ಅನುಭವಗಳು ಹೊಸಬರಿಗೆ ಕಾಡುಪ್ರಾಣಿಗಳು ಮತ್ತು ಬೇಟೆಯ ಬಗೆಗೆ ತಿಳಿಯಲು ಸಹಾಯ ಮಾಡಬಹುದೆಂದು ಆಶಿಸುತ್ತೇನೆ. ಹಾಗಿದ್ದರೂ ಈ ವಿಚಾರಗಳಲ್ಲಿ ನಾನೊಬ್ಬ ತಜ್ಞ ಎಂದು ಹೇಳಿಕೊಳ್ಳುತ್ತಿಲ್ಲ.

ಹುಲಿ ಚಿರತೆಗಳ ಬೇಟೆಗೆ ಬೇರೆಬೇರೆ ಬೇಟೆಗಾರರು ತಮ್ಮ ಬಳಿ ಇರುವ ಹಣ ಮತ್ತು ಧೈರ್ಯದ ಆಧಾರದ ಮೇಲೆ ಭಿನ್ನಭಿನ್ನ ಮಾರ್ಗಗಳನ್ನು ಅನುಸರಿಸುತ್ತಾರೆ. ಸುಲಭವಾಗಿ ಬೇಟೆಗೆ ಸಿಗಬಹುದಾದ ಪ್ರಾಣಿಗಳಿಗಿಂತ ಆಕಸ್ಮಿಕವಾಗಿ ಎದುರಾಗಿ ಮಾರಣಾಂತಿಕ ಭಯವನ್ನು ಹುಟ್ಟಿಸಿದ ಪ್ರಾಣಿಗಳ ಬೇಟೆ ಹೆಚ್ಚು ತೃಪ್ತಿಯನ್ನು ನೀಡುತ್ತದೆ. ಮಚಾನುಗಳಲ್ಲಿ ಸುರಕ್ಷಿತವಾಗಿ ಕುಳಿತು ನಮ್ಮ ಶಕ್ತಿಯುತ ಬಂದೂಕುಗಳಿಂದ ಹುಲಿಯನ್ನು ಕೊಲ್ಲುವುದರಲ್ಲಿ ನನಗೆ ಹೆಚ್ಚಿನ ಆಕರ್ಷಣೆ ಇರಲಿಲ್ಲ. ಹಾಗೆ ನೋಡಿದರೆ ಹುಲಿಯನ್ನು ಹೊಡೆದು ಉರುಳಿಸುವ ಕ್ರಿಯೆಗಿಂತ ಅದನ್ನು ಬೆನ್ನುಹತ್ತುವುದರಲ್ಲಿ ಇರುವ ರೋಮಾಂಚನವೇ ಹೆಚ್ಚು. ಹುಲಿಯ ಚರ್ಮವನ್ನು ಅಥವಾ ಅದರ ಛಾಯಚಿತ್ರವನ್ನು ನೆನಪಿನ ಕಾಣಿಕೆಯಾಗಿ ಇಟ್ಟುಕೊಳ್ಳುವುದಕ್ಕಿಂತ ಅದು ನೆನಪಿನ ಕಣ್ಣುಗಳಲ್ಲಿ ಉಳಿಸಿಹೋಗುವ ಚಲನಚಿತ್ರ ನನಗೆ ಹೆಚ್ಚು ಆಪ್ತವಾದದ್ದು. ಕಣ್ಣಿನ ದೃಷ್ಟಿಯನ್ನೇ ಕಳೆದುಕೊಂಡ ಮೇಲೂ ಮನಸ್ಸಿನಲ್ಲಿ ಮೂಡಿರುವ ಇಂತಹ ಚಿತ್ರವನ್ನು ಅಳಿಸುವುದು ಯಾರಿಗೆ ಸಾಧ್ಯ?

ಬಹಳ ವರ್ಷಗಳ ಹಿಂದೆ ಮಧ್ಯಪ್ರದೇಶದ ಕಾಡುಗಳಲ್ಲಿ ಬೇಟೆಗೆ ಹೋಗಿದ್ದಾಗ ನನ್ನ ಬೇಟೆಯ ಸಾಥಿಗಳಾ... ದರ್ಬಾರಿ ಮತ್ತು ಶಕ್ತು ನನಗೆ ಒಂದು ಕಥೆಯನ್ನು ಹೇಳಿದ... ಒಬ್ಬ ಯುವ ಅಧಿಕಾರಿ ನೆಲದ ಮೇಲೆಯೇ ಹುಸಿರೆಲೆಗಳ... ಮರೆಯನ್ನು ಮಾಡಿಕೊಂಡು ಇಡೀ ರಾತ್ರಿ ಕುಳಿತು ಬೆ... ಜಾವದಲ್ಲಿ ಕೆಲವೇ ಅಡಿಗಳ ಅಂತರದಲ್ಲಿ ಇದ್ದ ಎ... ಹುಲಿಗಳನ್ನು ಹೊಡೆದಿದ್ದ. ಇದು ಬಹ... ಅಪಾಯಕಾರಿಯಾದ ಸಾಹಸವಾಗಿದ್ದರೂ ನನಗೆ ... ಯುವಕನನ್ನು ಮೆಚ್ಚದೆ ಇರಲಾಗಲಿಲ್ಲ. ಆಫ್ರಿಕಾದ ಕಾಡುಗಳ... ಮುಳ್ಳುಗಳ ಮರೆಯಲ್ಲಿ ನೆಲದ ಮೇಲೆಯೇ ಕುಳಿ... ಸಿಂಹಗಳನ್ನು ಬೇಟೆಯಾಡುವುದು ಅಪರೂಪವೇನಲ್ಲ. ಆದ... ದಟ್ಟಕಾಡುಗಳಲ್ಲಿ ನೆಲದ ಮೇಲೆ ಕುಳಿತು ಹುಲಿ ಬೇಟೆ... ಯತ್ನಿಸುವುದು ಅತ್ಯಂತ ಅಪಾಯಕಾರಿ.

ನಾನು ಇನ್ನೂ ಒಂದು ಹುಲಿಯನ್ನೂ ಕೊ... ಹೊಡೆಯದಿರುವ ಕಾಲದಲ್ಲಿ ನೂರಾರು ಹುಲಿಗಳನ್ನ... ಕೊಂದ ಒಬ್ಬರನ್ನು ಭೇಟಿಯಾಗಿದ್ದೆ. ಆತ ಆಗ ನ... ಕಣ್ಣಿಗೆ ಒಬ್ಬ ಮಹಾನಾಯಕನಂತೆ ಕಂಡಿದ್ದ. ಒಮ್ಮೆ ಅವ... ಜಿಂಕೆಗಳ ಹಿಂಡನ್ನು ಹಿಂಬಾಲಿಸುತ್ತಿದ್ದಾಗ, ಅದೇ ಗುಂಪಿಗಾ... ಹೊಂಚುಹಾಕುತ್ತಿದ್ದ ಹುಲಿಯೊಂದನ್ನು ಕಂಡಿದ್ದರು. ಕೇವ... 50 ಅಡಿ ದೂರದಲ್ಲಿದ್ದ ಆ ದೊಡ್ಡ ಗಂಡು ಹುಲಿಯ... ಅವರು ಅನಗತ್ಯವಾಗಿ ಬೇಟೆಯಾಡದೆ ಬಿಟ್ಟಿದ್ದರು. ... ಅನುಭವವನ್ನು ಕೇಳಿದ ಮೇಲೆ ನನ್ನ ಕಣ್ಣಿನಲ್ಲಿ ಅವ... ವ್ಯಕ್ತಿತ್ವ ಕುಸಿದುಹೋಗಿತ್ತು!

ಕೊಂದ ಪ್ರಾಣಿಗಳನ್ನು ತಿನ್ನಲು ಬರುವ ಹುಲಿಯ... ಮಚಾನುಗಳಲ್ಲಿ ಕುಳಿತು ಬೇಟೆಯಾಡುವುದು ... ಸಾಮಾನ್ಯವಾದ ಕ್ರಮ. ಕೇವಲ ಒಂದು ಗನ್ ಹೊಂದಿ... ಎಲ್ಲರೂ ಪ್ರಯತ್ನಿಸಬಹುದಾದ ಮಾರ್ಗ ಇದು. ಆದ... ನೂರಾರು ಜನ ಅಟ್ಟಾಳುಗಳನ್ನು ಒಟ್ಟುಮಾಡಿ ಕಾಡಿನ... ಅಡಗಿರುವ ಪ್ರಾಣಿಗಳನ್ನು ಸೋವುಗೆ ಮಾಡುತ್ತಾ... ಹೊರತಂದು ಬೇಟೆಯಾಡುವುದು ಹೆಚ್ಚು ರೋಮಾಂಚ... ಮತ್ತು ದುಬಾರಿ. ಇದು ಹಗಲುಹೊತ್ತಿನ... ನಡೆಯುವುದರಿಂದ ಸಂಪೂರ್ಣ ಬೆಳಕಿನಲ್ಲಿ ನಡೆದು ಬರು... ಹುಲಿಯನ್ನು ನೋಡುವುದೇ ಒಂದು ಅಪೂರ್ವ ದೃ... ಗಂಟೆಗಟ್ಟಲೆ ಕಾಲನ್ನು ನೋಯಿಸಿಕೊಂಡು ಸೊಳ್ಳೆಗಳ... ಕಡಿಸಿಕೊಳ್ಳುತ್ತಾ ಕಾಯುವಾಗ ಆಗುವ ದೈಹಿಕ ಹಿಂಸೆಯ...

ಪ್ರಥಮ ಚುಂಬನಂ...!

ನನ್ನ ಪ್ರಾಥಮಿಕ ಹಂತದ ಸಾಹಸಗಳ ಬಗೆಗೆ ಹೇಳುವುದರ ಮೂಲಕ ನಾನೇ ನನ್ನ ಹೆಸರಿಗೆ ಮಸಿ ಬಳಿದುಕೊಳ್ಳುತ್ತಿದ್ದೇನೆಯೇ ಎಂದು ಭಯವಾಗುತ್ತಿದೆ!

ಮೊದಲು ನಿಮ್ಮನ್ನು ಸುಂದರ ನೀಲಿಗಿರಿ ಬೆಟ್ಟಗಳ ತಪ್ಪಲಿನಲ್ಲಿ ಇರುವ ಮೆಟ್ಟುಪಾಳ್ಯಮ್‌ಗೆ ಕರೆದೊಯ್ಯುತ್ತೇನೆ. ಆ ದಿನಗಳಲ್ಲಿ ಕಾಡಾನೆಗಳು ರಾತ್ರಿಯ ಹೊತ್ತಿನಲ್ಲಿ ಊರಿನ ಹತ್ತಿರದ ತೋಟಗಳಿಗೆ ನುಗ್ಗಿ ನಾಶಮಾಡುತ್ತಿದ್ದವು. ಕ್ರಿಸ್ಮಸ್‌ನ ಕೆಲವು ರಜಾದಿನಗಳಲ್ಲಿ ತಮಿಳುನಾಡು ಮೂಲದ ನನ್ನ ಸಹಾಯಕ ಬಾಲುವಿನೊಡಗೂಡಿ ಅಲ್ಲಿಗೆ ಹೊರಟೆ. ನಾಲ್ಕು



ಭಾಷೆಗಳನ್ನು ಬಲ್ಲ ಬಾಲು ನನಗೆ ಅನುವಾದಕನಾಗಿ, ಅಡಿಗೆಯವನಾಗಿ, ಗನ್ ಹೊರುವ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಮೆಟ್ಟುಪಾಳ್ಯಮ್‌ನಲ್ಲಿ ಒಬ್ಬ ಶಿಕಾರಿ ಮತ್ತು ಎರಡು ಕೂಲಿಗಳನ್ನು ನೇಮಿಸಿಕೊಂಡೆ.

ಒಂದು ಬೆಳಗ್ಗೆ ಸೂರ್ಯ ಹುಟ್ಟುವ ಮೊದಲೇ ನಾವು ಐದೂ ಜನ ಕಾಡಿನತ್ತ ಹೊರಟೆವು. ತೋಟಗಳ ದಾಳಿಯನ್ನು ಮುಗಿಸಿ ಹಿಂತಿರುಗುತ್ತಿದ್ದ ಆನೆಯ ಸದ್ದುಗಳನ್ನು ಕೇಳುತ್ತ ಸುಮಾರು ಏಳು ಮೈಲು ದೂರ ದಟ್ಟ ಕಾಡಿನಲ್ಲಿ ಗಾಡಿಯ ಹಾದಿಯೊಂದನ್ನು ಹಿಡಿದು ಮುಂದೆ ಹೋದೆವು. ಸೂರ್ಯ ಮೇಲೇಳುವಷ್ಟರಲ್ಲಿ ಮೋಯರ್ ನದಿಯ ಹತ್ತಿರ ಬಂದಿದ್ದೆವು. ಅಲ್ಲಿನ ಪ್ರಕೃತಿ ಸೌಂದರ್ಯ ನನ್ನ ನೆನಪಿನಲ್ಲಿ ಈಗಲೂ ಹಸಿರಾಗಿದೆ. ಎಡದಿಕ್ಕಿನಲ್ಲಿನ ಹುಲ್ಲಿನ ಇಳಿಜಾರು ಬೆಟ್ಟದ ಬುಡದವರೆಗೂ ಹಬ್ಬಿಕೊಂಡು ಮತ್ತೆ ದಟ್ಟ ಅಡವಿಯಿಂದ ಆವೃತವಾಗಿರುವ ಇನ್ನೊಂದು ಬೆಟ್ಟವಾಗಿ ಮುಗಿಲಿನವರೆಗೂ ಮೇಲೇರುತ್ತಿತ್ತು. ಆ ಬೆಟ್ಟದ ತುದಿಯಲ್ಲಿ ಕಡಿದಾದ ಬಂಡೆಗಳು ನಿಂತಿದ್ದವು. ಮುಂಜಾವಿನ ಸೂರ್ಯ ಕಿರಣಗಳು ಚಳಿಗಾಲದ ಮಂಜನ್ನು ತೂರಿಕೊಂಡು ಹೊರಬರುತ್ತಿದ್ದವು. ನನ್ನ ಎದುರಿಗೂ ದಟ್ಟ ಅಡವಿಯೊಂದಿದ್ದು ಅದರಾಚೆ ಮತ್ತೊಂದು ಬೆಟ್ಟಗಳ ಸಾಲು ಕಾಣಿಸುತ್ತಿತ್ತು. ಬೆಟ್ಟದ ಮೇಲಿನಿಂದ ಹೊರಟ ಸಾಂಬಾರ್ ಜಿಂಕೆಗಳ ಕೂಗು ಮುಂಜಾವಿನ ಮೌನವನ್ನು ಭೇದಿಸಿ ಹಲವಾರು ಮೈಲುಗಳ ದೂರದಿಂದ ಕೇಳುತ್ತಿತ್ತು. ಬೇಟೆಗಾರನಾಗಿ ಆಗಿನ್ನೂ ಪ್ರಥಮ ಹೆಜ್ಜೆಗಳನ್ನು ಇಡುತ್ತಿದ್ದ ನಾನು ಅಡವಿಯ ಈ ಸೌಂದರ್ಯದಿಂದ ಮೂಕವಿಸ್ಮಿತನಾಗಿದ್ದೆ.

ಮುಂದಿನ ದಟ್ಟ ಕತ್ತಲಿನ ಅರಣ್ಯವನ್ನು ಹೊಕ್ಕೊಡನೆ ಜೊತೆಗೆ ಬಂದಿದ್ದ ಶಿಕಾರಿ ನಾವು ಕಾಡುಕೋಣ ಅಥವಾ ಹುಲಿಯನ್ನು ಇಲ್ಲಿ ನೋಡುವ ಸಾಧ್ಯತೆ ಇದೆ ಎಂದು ಹೇಳಿದ. ಕಾಡಿಗೆ ಇನ್ನೂ ಹೊಸಬನಾಗಿದ್ದ ನಾನು ಅವನ ಮಾತನ್ನು ನಂಬಿ ಬಂದೂಕನ್ನು ಗಟ್ಟಿಯಾಗಿ ಹಿಡಿದು ಬಳ್ಳಿಗಳು, ಲಂಟಾನ ಮುಳ್ಳುಗಳು, ಹುಲ್ಲು ಪೊದೆಗಳ ಮಧ್ಯೆ ಆನೆಗಳು ಮಾಡಿದ್ದ ದಾರಿಯಲ್ಲಿ ತೆವಳಿಕೊಂಡು ಹೋಗುತ್ತಿದ್ದೆ. ಆಗ ಆನೆಗಳು ಮಾತ್ರ ಬರದಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದೆ. ಆನೆಗಳ ಮೇಲೆ ಬಂದೂಕನ್ನು ಚಲಾಯಿಸುವುದು ಕಾನೂನುಬಾಹಿರವಾಗಿತ್ತು. ಆ ದಟ್ಟಡವಿಯಲ್ಲಿ ಹುಲಿ ಅಥವಾ ಕಾಟಿಕೋಣಗಳನ್ನು ಅರಸುವುದು ಹುಲ್ಲಿನ ರಾಶಿಯಲ್ಲಿ ಸೂಜಿಯನ್ನು ಹುಡುಕುವಷ್ಟು ಕಷ್ಟವಾಗಿತ್ತು. ಅಂತೂ ಮೂರು ಗಂಟೆಗಳ ಕಷ್ಟದ ಪ್ರಯಾಣದ ನಂತರ ಬಿದಿರು ಮೆಳೆಗಳು ಎದುರಾಗಿತ್ತಲ್ಲದೆ ಮೋಯರ್ ನದಿಯ ನಿನಾದ ಕೇಳಿಬಂತು. ಗನ್‌ನ್ನು ಬಾಲುವಿನ ಕೈಗೆ ಕೊಟ್ಟು ಸುಧಾರಿಸಿಕೊಳ್ಳ ತೊಡಗಿದೆ.

ನದಿಯ ಕಡೆ ಸ್ವಲ್ಪವೇ ದೂರ ಹೋಗುವಷ್ಟರಲ್ಲಿ ಒಂದು ಬೃಹದಾಕಾರದ ಸಲಗ ಬಿದಿರು ಮೆಳೆಗಳಿಂದ ಹೊರಬಂದು ನಮ್ಮೆದುರು ಕಾಣಿಸಿಕೊಂಡಿತು. ನನ್ನ ಮುಂದೆ ಹೋಗುತ್ತಿದ್ದ ಶಿಕಾರಿಗಳು "ಆನೇ..." ಎಂದು ಕೂಗುತ್ತಾ ಹಿಂತಿರುಗಿ ನನ್ನನ್ನು ತಳ್ಳಿಕೊಂಡು ಓಡತೊಡಗಿದರು. ಬಂದೂಕಿಗಾಗಿ ನಾನು ಕೈಯೊಡ್ಡುವಷ್ಟರಲ್ಲಿ ಬಾಲು ಕೂಡ ಓಡುತ್ತಾ ಎಡವಿ ಬಂದೂಕನ್ನು ಬೀಳಿಸಿ ಕಾಲಿಗೆ ಬುದ್ಧಿ ಹೇಳಿದ. ಬಂದೂಕನ್ನು ಕೈಗೆತ್ತಿಕೊಂಡು ಸುಮಾರು 100 ಅಡಿ ದೂರದಿಂದ ನನ್ನನ್ನೆ ನೋಡುತ್ತಿದ್ದ ಆನೆಯ ಹಣೆಗೆ ಗುರಿಹಿಡಿದು ಅದು ಮುಂದೆ ಬರುವುದನ್ನೇ ಕಾಯತೊಡಗಿದೆ. ಆದರೆ ಸಲಗ ಹಿಂತಿರುಗಿ ನಿಧಾನವಾಗಿ ಕಾಡಿನಲ್ಲಿ ನಡೆದುಕೊಂಡುಹೋಯಿತು.

ಇದು ಭಾರತದ ಕಾಡುಗಳಲ್ಲಿ ನಾನು ನೋಡಿದ ದೊಡ್ಡ ಮೊದಲ ವನ್ಯಮೃಗವಾಗಿತ್ತು. ದುಃಖದ ಸಂಗತಿಯೆಂದರೆ ಮಾರನೇ ದಿನ ಆ ಆನೆಯನ್ನು ಯಾರೋ ಬೇಟೆಗಾರರು ಕೊಂದು ಹಾಕಿದ್ದರು. ಅದು ಮನುಷ್ಯರಿಗೆ ಮತ್ತು ಆಸ್ತಿಪಾಸ್ತಿಗಳಿಗೆ ಸಾಕಷ್ಟು ಹಾನಿಮಾಡುತ್ತಿದ್ದು ಅದನ್ನು ರೌಡಿ ಎಂದು ಗುರುತಿಸಲಾಗಿತ್ತು ನಿಜ. ಆದರೆ ನನ್ನ ದೃಷ್ಟಿಯಲ್ಲಿ ಅದು ನನ್ನ ಪ್ರಾಣ ಉಳಿಸಿದ ವೃದ್ಧ ಕರುಣಾಳು ಮಹನೀಯನಾಗಿತ್ತು.

ಒಂದೆರಡು ದಿನಗಳ ನಂತರ ವೆಲ್ಲಿಂಗ್‌ಟನ್‌ನಿ... ಬಂದ ಇಬ್ಬರು ಸ್ನೇಹಿತರು ನನ್ನನ್ನು ಸೇರಿಕೊಂಡರು. ... 40 ಜನ ಅಟ್ಟಾಳುಗಳನ್ನು (ಪ್ರಾಣಿಗಳನ್ನು ಅಟ್ಟಿಸಿಕೊಂಡ... ಸೋವುಗೆ ಮಾಡುತ್ತಾ ಬೇಟೆಗಾರನ ಕಡೆ ತಳ್ಳುವವರು... ಕರೆದುಕೊಂಡು ನೀಲಗಿರಿ ಬೆಟ್ಟಗಳ ಬುಡದ ದಟ್ಟಕಾಡಿ... ಹೋದೆವು. ನನ್ನ ಸ್ನೇಹಿತರಿಗಾಗಿ ಸೂಕ್ತ ಜಾಗಗಳ... ಮಚಾನುಗಳು ನಿರ್ಮಾಣವಾದವು. ಆಗಲೇ ಅಟ್ಟಾಳುಗ... ಕೂಗು ಕೇಳಿಬಂದಿದ್ದರಿಂದ ನಾನು ಮತ್ತು ಬಾಲು ಸ... ಕಡಿದಾದ ಬಂಡೆಯೊಂದನ್ನು ಏರಿ ಕುಳಿತೆ... ಕೊರಕಲೊಂದನ್ನು ಹಾದುಬಂದಿರುವ ಕಾಲುದಾರಿಯೊಂ... ಪಕ್ಕದಲ್ಲಿ ಹೋಗುತ್ತಿತ್ತು ಎದುರುಗಿದ್ದ ದಟ್ಟ ಅರಣ್ಯದ... ಸಂಪೂರ್ಣ ಕತ್ತಲು ಆವರಿಸಿದ್ದು ಪೊದೆಗಳ ಒಳಗೆ ಏನ... ಕಾಣುತ್ತಿರಲಿಲ್ಲ. ಆದರೆ ಇನ್ನೂ ಉತ್ತಮವಾದ ಜಾಗವನ್ನು ಹುಡುಕಲು ಸಮಯ ಮಿಂಚಿಹೋಗಿತ್ತು.

ಅಟ್ಟಾಳುಗಳ ಕೂಗಾಟ ಜೋರಾಗಿ ಸಾಗಿದ್ದು ಹತ್ತಿ... ಬರುತ್ತಾಹೋದಂತೆ ಇನ್ನೂ ಹೆಚ್ಚಾಗಿ ಕೇಳತೊಡಗಿತು... ಅಪಾಯದ ಮುನ್ಸೂಚನೆಯನ್ನು ನೀಡುತ್ತಿದ್ದ ಅದು ಬಹ... ಪರಿಣಾಮಕಾರಿಯಾಗಿರುತ್ತಿತ್ತು. ಅಟ್ಟಾಳುಗಳು ಸುಮಾ... 200 ಅಡಿಯಷ್ಟು ದೂರದಲ್ಲಿದ್ದಾಗ ನನ್ನ ಬಲಭಾಗದಲ್ಲಿ... ಬೆಟ್ಟವನ್ನು ಪ್ರಾಣಿಯೊಂದು ಏರುತ್ತಿರುವ ಸದ್ದಾಯಿತು... ನಾನು ಆ ಕಡೆ ತಿರುಗುವಷ್ಟರಲ್ಲಿ ನನಗೆ ಎಡಗ... ಮೂಲೆಯಿಂದ ಏನೋ ಚಲನೆ ಕಂಡಿತು. ಕೊರಕಲಿ... ಕಡೆಯಿಂದ ಚಿರತೆಯೊಂದು ನಮ್ಮಕಡೆ ಬರುತ್ತಿದ್ದುದು... ಅರಿವಾಯಿತು. ಭಯದಿಂದ ವೇಗವಾಗಿ ಬರುತ್ತಿದ್ದ ಅದು... ನಮ್ಮನ್ನು ಗಮನಿಸಿರಲಿಲ್ಲ. ಹೆದರಿಕೆಯಿಂದ ನಡುಗುತ್ತಿ... ಬಾಲುವನ್ನು ಹಾಯ್ದು ಚಿರತೆ ನಾನು ಬಂದೂಕನ್ನು ... ಗುರಿಹಿಡಿಯುವಷ್ಟರಲ್ಲಿ ದಟ್ಟಡವಿಯಲ್ಲಿ ಕಣ್ಮರೆಯಾಯಿತು...

ಈ ಮಧ್ಯೆ ಭಾರೀ ಸಲಗವೊಂದು ನಮ್ಮ ಮಧ... ಅರಣ್ಯದಲ್ಲಿ ಸಿಕ್ಕಿಹಾಕಿಕೊಂಡಿತು. ಅಟ್ಟಾಳುಗಳಿಂ... ದೂರಹೋಗಿ ತಪ್ಪಿಸಿಕೊಳ್ಳುವ ಭರದಲ್ಲಿ ಅದು ಅಪ... ಕಡೆಯೇ ಓಡತೊಡಗಿತು. ಅಟ್ಟಾಳುಗಳ ಕೂಗಾಟವ... ಕೇಳಿ ಉಗ್ರ ಕೋಪದಲ್ಲಿ ಮರಗಳನ್ನು ಬೀಳಿಸಿಕೊಂಡು... ಅಲ್ಲಿಲ್ಲಾ ಓಡುತ್ತಾ ಅಂತೂ ಕೊನೆಗೆ ನಮ್ಮ ಸ್ನೇಹಿತರು... ಕುಳಿತಿದ್ದ ಮಚಾನನ್ನು ಹಾಯ್ದು ಮಾಯವಾಯಿತು. ... ಅವತ್ತಿನ ಬೇಟೆಯನ್ನು ಮುಗಿಸಿ ಹಿಂತಿರುಗಿದೆವು.

ಆಗ ನನಗೆ ಬಂದ ಸುದ್ದಿಯ ಪ್ರಕಾರ ಕೊಲ್ಲಲ್ಪಟ್ಟ... ರೌಡಿ ಸಲಗದ ಸುತ್ತ ಸಾಕಷ್ಟು ಹೆಣ್ಣಾನೆಗ...



ಹ ದೃಶ್ಯವನ್ನು ನೋಡಿದಾಗ ಮಾಯವಾಗುತ್ತದೆ. ನ ರಾಜನನ್ನು ಅತಿ ಹತ್ತಿರದಿಂದ ನೋಡುವಾಗ ವೇಗದಿಂದ ಎದೆಬಡಿತ ನಿಂತ ಹಾಗಿರುತ್ತದೆ. ಸಾಕಷ್ಟು ಲಿಗಳನ್ನು ಕಂಡ ಮೇಲೂ ನನಗೆ ಇಂತಹ ಭವವಾಗುತ್ತದೆ ಎಂದರೆ ಇದರಲ್ಲಿ ಉತ್ಪ್ರೇಕ್ಷೆ ಏನೂ ಕೆಲವೊಮ್ಮೆ ಹುಲಿ ಬರದಿದ್ದರೂ ಇತರ ಪಕ್ಷಿಪ್ರಾಣಿಗಳ ಗುಗಳು, ಅನಿರೀಕ್ಷಿತವಾಗಿ ಕಂಡುಬರುವ ಇತರ ಣಿಗಳು ಮತ್ತು ಹತ್ತಿರದಲ್ಲೆಲ್ಲೋ ಕೇಳಿಬರುವ ಹುಲಿಯ ್ಜನೆ ಪ್ರಕೃತಿಪ್ರಿಯರ ಹೃದಯಕ್ಕೆ ತಂಪೆರೆಯುತ್ತವೆ. ಾನುಗಳಲ್ಲಿ ರಾತ್ರಿ ಕುಳಿತು ಕಾಯುವವರಿಗೆ ಇಂತಹ ರಂತ ಅನುಭವಗಳಾಗದಿದ್ದರೂ, ಕಾಡುಪ್ರಾಣಿಗಳ ಯ, ಜೀವನ, ಅವುಗಳ ವಿಧವಿಧದ ಕೂಗುಗಳ ಗೆ ಹೆಚ್ಚು ಕಲಿಯಲು ಅವರಿಗೆ ಸಾಧ್ಯವಾಗುತ್ತದೆ. ಹತ್ತಾರು ಬಾರಿ ಹಗಲು ಹೊತ್ತಿನಲ್ಲಿ ತಿರುಗಿದಾಗ ವ ಜ್ಞಾನಕ್ಕಿಂತಲೂ ಹೆಚ್ಚು. ಹಗಲು ಹೊತ್ತಿನಲ್ಲಿ ಪ್ರಾಣಿಗಳು ತಮ್ಮ ಶತ್ರುವಾದ ಮಾನವನಿಂದ ಯಾಗಿ ಕುಳಿತಿದ್ದರೆ ರಾತ್ರಿಯ ಹೊತ್ತು ಅವು ಕಾಡನ್ನು ಸ್ವಂತ ಸಾಮ್ರಾಜ್ಯವನ್ನಾಗಿ ಮಾಡಿಕೊಳ್ಳುತ್ತವೆ. ಕಾಡಿನಲ್ಲಿ ು ಹೊತ್ತು ಮಾತ್ರ ತಿರುಗುವುದು ಎಂದರೆ ಪ್ಯಾರೀಸ್ ಾವನ್ನು ರಾತ್ರಿಯ ಹೊತ್ತು ನೋಡುವ ಆನಂದದಿಂದ ಕೊಂಡಂತೆ!

ಹುಣ್ಣಿಮೆಯ ರಾತ್ರಿಯಲ್ಲದಿದ್ದರೆ ಮತ್ತು ಮರದ ನೆರಳುಗಳಿಂದ ಹೊರಬರದಿದ್ದರೆ ಸಾಮಾನ್ಯ ರಾತ್ರಿಗಳಲ್ಲಿ ಹುಲಿಯನ್ನು ನೋಡುವುದು ಅಸಾಧ್ಯ. ಕೆಂಪು ಮಿಶ್ರಿತ ಬೂದು ಬಣ್ಣದ ಹುಲಿ ಚಿರತೆ ಜಿಂಕೆಗಳ ಹೊರ ಕವಚ ಮಾನವನ ದೃಷ್ಟಿಗೆ ಸಿಗುವುದಿಲ್ಲ. ಕತ್ತಲಿನಲ್ಲಿ ಮನುಷ್ಯರಿಗೆ ಕಾಣುವುದು ಬಿಳಿ ಬಣ್ಣದಲ್ಲಿರುವ ಹುಲಿಯ ಎದೆಯ ಭಾಗ, ಚಿರತೆಯ ಗಂಟಲು ಮತ್ತು ಜಿಂಕೆಗಳ ಬೆನ್ನಿನ ಹಿಂಭಾಗ ಮಾತ್ರ. ಚಿರತೆಗಳ ಗುಂಪೊಂದು ಕಾಡಿನಲ್ಲಿ ಕತ್ತಲಿನಲ್ಲಿ ಚಲಿಸುತ್ತಿದ್ದರೆ ಅವುಗಳ ಗಂಟಲಿನ ಬಿಳಿಯಭಾಗ ಅದೃಶ್ಯವಾಗಿರುವ ಮನುಷ್ಯನ ಟೋಪಿಯಂತೆ ಕಾಣುತ್ತಿರುತ್ತದೆ. ಚಂದ್ರನ ಬೆಳಕು ಹರಡುತ್ತಿದ್ದಂತೆ ಸಂಪೂರ್ಣ ಆಕೃತಿ ಕಣ್ಣಿಗೆ ಬಿದ್ದರೂ ಪ್ರಾಣಿಗಳ ಬಣ್ಣ ಮಾತ್ರ ಹಿನ್ನೆಲೆಯ ಬಣ್ಣಕ್ಕೆ ಅನುಸಾರವಾಗಿ ಬದಲಾಗುತ್ತಿರುತ್ತದೆ. ಕಪ್ಪು ವರ್ಣದ ಹಿನ್ನೆಲೆಯಲ್ಲಿ ಹುಲಿ ಬೂದು ಬಣ್ಣದ್ದಾಗಿ ಕಾಣಿಸಿದರೆ ತಿಳಿಯಾದ ಬಣ್ಣಗಳ ಹಿನ್ನೆಲೆಯಲ್ಲಿ ಪೂರ್ಣ ಕಪ್ಪಾಗಿ ಕಾಣಿಸುತ್ತದೆ. ಹಗಲು ಹೊತ್ತಿನ ಹಸಿರು ಹಿನ್ನೆಲೆಯಲ್ಲಿ ಅದರ ವರ್ಣವಿನ್ಯಾಸ ನಿಚ್ಚಳವಾಗಿ ಕಾಣುತ್ತದೆ. ರಾತ್ರಿಯ ಹೊತ್ತು ಅದರ ಮೈಮೇಲಿನ ಬಿಳಿಯ ಪಟ್ಟೆಗಳು ದೇಹದ ಹೊರ ಆಕೃತಿಯನ್ನು ತೋರಿಸಿದರೂ ಮುಖದ ವಿಚಿತ್ರ ವರ್ಣವಿನ್ಯಾಸ ಹತ್ತಿರದಿಂದ ನೋಡುವವರಿಗೆ ಯಾವುದೋ ನಿರ್ಜೀವ ವಸ್ತುವನ್ನು ಕಂಡಂತಹ ಭ್ರಮೆ ಹುಟ್ಟಿಸುತ್ತದೆ. ಹುಲಿ ಸ್ವಭಾವತಃ ನಿಶಾಚರ ಪ್ರಾಣಿಯಾಗಿರುವುದರಿಂದ ರಾತ್ರಿಯ ಹೊತ್ತಿನಲ್ಲಿ ತನ್ನನ್ನು ಮರೆಯಾಗಿಸಿಕೊಳ್ಳಲು ಇದು ಪ್ರಕೃತಿ ನೀಡಿದ ವರವೇ ಇರಬೇಕು.

ಭಾರತದ ಹಳೆಯ ತಲೆಮಾರಿನವರು ಹುಲಿಯನ್ನು ಬೇಟೆಯಾಡಲು ಜನರ ಗುಂಪೊಂದರ ಮೂಲಕ ಅದನ್ನು ಬೆನ್ನುಹತ್ತುವುದೇ ಉತ್ತಮ ಮಾರ್ಗ ಎನ್ನುತ್ತಾರೆ. ರಾತ್ರಿಯ ಹೊತ್ತು ಮಚಾನಿನಲ್ಲಿ ಬರುವ ಖಾತ್ರಿಯಿಲ್ಲದ ಹುಲಿಗಾಗಿ ಗಂಟೆಗಟ್ಟಲೆ ಕುಳಿತು ಕಾಯುವ ಕಿರಿಕಿರಿಯನ್ನು ಇದು ತಪ್ಪಿಸುತ್ತದೆ. ಹಗಲಿನಲ್ಲಿ ಇದನ್ನು ಬೆನ್ನುಹತ್ತಿದ್ದಾಗ ಬೇಟೆಗಾರ ಗೆಲ್ಲುವ ಸಾಧ್ಯತೆಗಳು ಹೆಚ್ಚು, ಅಷ್ಟೇ ಅಲ್ಲದೆ ಹುಲಿಯನ್ನು ಬೆನ್ನುಹತ್ತಿ ಬುದ್ಧಿಮತ್ತೆಯಲ್ಲಿ ಅದನ್ನು ಮಣಿಸಿ ಕೊಲ್ಲುವುದು ಹೆಚ್ಚು ರೋಮಾಂಚಕಾರಿ ಕೂಡ. ಹಾಗಾಗಿ ಬೇಟೆಗಾರನಿಗೆ ಇದರಿಂದ ಸಿಗುವ ತೃಪ್ತಿ ಕೂಡ ಹೆಚ್ಚಿನ ಮಟ್ಟದ್ದು.

ಆದರೆ ಹುಲಿಯನ್ನು ಬೆನ್ನುಹತ್ತಲು ಬೇಕಾಗುವ ನೂರಾರು ಜನರು ಹಿಂದೆ ಕೆಲವೇ ಆಣೆ ಕೂಲಿಗೆ ಸಿಗುತ್ತಿದ್ದರು. ಹುಲಿ ಬೇಟೆ ಯಶಸ್ವಿಯಾದರೆ ಒಂದೆರಡು ಆಣೆ ಹೆಚ್ಚು ಕೊಟ್ಟಾಗ ಅತ್ಯಂತ ಖುಷಿಯಾಗುತ್ತಿದ್ದರು. ಆದರೆ ಬದಲಾದ ಇವತ್ತಿನ ದಿನಗಳಲ್ಲಿ ಹೀಗೆ ಒಂದು ದೊಡ್ಡ ಗುಂಪನ್ನು ಒಂದುಗೂಡಿಸಲು ನೂರರಿಂದ ಮುನ್ನೂರು ರೂಪಾಯಿಗಳು ಖರ್ಚಾಗಬಹುದು. ಇದನ್ನು ಭರಿಸಲು ಶಕ್ತಿ ಇರುವ ಬೇಟೆಗಾರರು ಬಹಳ ಕಡಿಮೆ. ಜೊತೆಗೆ ಭಾರತದ ಕೆಲವು ಸ್ಥಳಗಳಲ್ಲಿ ಇಷ್ಟೆಲ್ಲಾ ಕೂಲಿಗಳನ್ನು ಒಗ್ಗೂಡಿಸುವುದೂ ಕಷ್ಟದ ಕೆಲಸ.

ಇಂತಹ ವಾಸ್ತವದ ಕಲ್ಪನೆಗಳಿಲ್ಲದ ಹೊಸ ಬೇಟೆಗಾರರು ಹುಲಿಯನ್ನು ಕೊಂದು ಅದರ ಚರ್ಮವನ್ನು ಗಳಿಸಿ ಎಲ್ಲರನ್ನು ಮೆಚ್ಚಿಸುವ ಭ್ರಮೆಯನ್ನು ಹೊತ್ತು ಕಾಡಿಗೆ ಹೋಗಬಹುದು. ಆದರೆ ಗಾಯಗೊಂಡ ಹುಲಿ ಅತ್ಯಂತ ಅಪಾಯಕಾರಿ ಪ್ರಾಣಿ ಎನ್ನುವ ಅರಿವಿಲ್ಲದೆ ಅದರ ಬೇಟೆಗೆ ಪ್ರಯತ್ನಿಸುವವರು ತಮ್ಮ ಪ್ರಾಣಕ್ಕೆ ಕುತ್ತು ತಂದುಕೊಳ್ಳುವ ಸಾಧ್ಯತೆಗಳಿವೆ. ನುರಿತ ಬೇಟೆಗಾರರಿಗೂ ಸಹ ಕೆಲವೊಮ್ಮೆ ಒಂದೇ ಪ್ರಯತ್ನದಲ್ಲಿ ಹುಲಿಯನ್ನು ಕೊಲ್ಲುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಹೊಸಬರು ಹುಲಿಯನ್ನು ಗಾಯಗೊಳಿಸಿ ಜೀವಂತ ಉಳಿಸುವ ಸಾಧ್ಯತೆಗಳೇ ಹೆಚ್ಚು. ಹುಲಿಯನ್ನು ಗಾಯಗೊಳಿಸಿರುವ ಬೇಟೆಗಾರ ಅದನ್ನು ಹಿಂಬಾಲಿಸಿ ಕೊಲ್ಲದಿದ್ದರೆ ಅಂತಹ ಹುಲಿ ಮನುಷ್ಯರು ಮತ್ತು ಸಾಕುಪ್ರಾಣಿಗಳಿಗೆ ತೀರಾ ಅಪಾಯಕಾರಿಯಾಗುತ್ತದೆ.

ಹುಲಿಯೊಂದು ತನ್ನ ಪೂರ್ಣ ಶಕ್ತಿಯನ್ನು ಹಾಕಿ ಘರ್ಜಿಸಿದಾಗ ಹೊರಡುವ ಧ್ವನಿ ಪ್ರತಿಧ್ವನಿಗಳು ಇಡೀ ಕಾಡಿಗೆ ನಡುಕ ಹುಟ್ಟಿಸುತ್ತದೆ. ಹೆಚ್ಚಿನ ಪ್ರಾಣಿಗಳು ಮತ್ತು ಮಾನವ ಕೂಡ ಈ ಕೂಗಿನಿಂದ ದೂರ ಉಳಿಯುವ ಪ್ರಯತ್ನ ಮಾಡುತ್ತಾರೆ. ಬಹಳ ಕಡಿಮೆ ಬೇಟೆಗಾರರು ಇಂತಹ ಕೂಗುನ್ನು ತಮ್ಮ ಅಣಕದ ಕೂಗಿನ ಮೂಲಕ ಉತ್ತರಿಸಿ ಹುಲಿಯನ್ನು ಹತ್ತಿರ ಸೆಳೆಯಲು ಪ್ರಯತ್ನಿಸಿದ್ದಾರೆ ಮತ್ತೆ ಇದರಲ್ಲಿ ಯಶಸ್ವಿಯಾಗಿರುವವರ ಸಂಖ್ಯೆ ಇನ್ನೂ ಕಡಿಮೆ. ನಾನೂ ಇಂತಹ ಅಣಕು ಕೂಗನ್ನು ಅಭ್ಯಾಸ ಮಾಡಲು ಬಹಳ ಕಾಲ ಶ್ರಮ ಪಟ್ಟಿದ್ದೇನೆ. ಸಾಕಷ್ಟು ಸೋಲಿನ ನಂತರ ಹುಲಿಯೊಂದು ಪ್ರಥಮ ಬಾರಿಗೆ ನನ್ನ ಕೂಗಿಗೆ ಉತ್ತರಿಸಿದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಅನನುಭವಿ ಬೇಟೆಗಾರರು ಇಂತಹ ಪ್ರಯತ್ನ ಮಾಡಿ ಹುಲಿಯನ್ನು ಸೆಳೆಯುವುದು ಬಹಳ ಅಪಾಯಕಾರಿ ಎಂದು ಎಚ್ಚರಿಸುತ್ತಿದ್ದೇನೆ.

ಈ ಪುಸ್ತಕವನ್ನು ನನ್ನ ಭಾರತೀಯ ಶಿಕಾರಿ ಸ್ನೇಹಿತರಾದ ದರ್ಬಾರಿ, ಶಕ್ತು ಮತ್ತು ಅಭು ಅವರ ನೆನಪಿಗೆ ಅರ್ಪಿಸುತ್ತಿದ್ದೇನೆ. ಇವರ ಸ್ನೇಹ ಸಹಕಾರವಿಲ್ಲದೆ ನನ್ನ ಪ್ರಾರಂಭಿಕ ಪ್ರಯತ್ನಗಳು ವ್ಯರ್ಥವಾಗಿ ಹೋಗುತ್ತಿತ್ತು. ■



ಾಯಿಸಿದ್ದವು. ತಮ್ಮ ದಣಿಯ ಸಾವಿನ ವಿರುದ್ಧ ಸಾಕಷ್ಟು ಟೆ ಎಬ್ಬಿಸಿದ ಅವುಗಳು ಆ ಸಲಗವನ್ನು ಎತ್ತಿ ನಿಲ್ಲಿಸಲೂ ತ್ನಿಸಿದ್ದವು. ಈ ಕರುಣಾಜನಕ ದೃಶ್ಯವನ್ನು ನಾನು ರೆ ನೋಡಬಯಸಿದೆ. ಆದರೆ ಆಗಲೇ ಕತ್ತಲಾಗಿದ್ದರಿಂದ ಯೋಜನೆಯನ್ನು ಮರುದಿನಕ್ಕೆ ಮುಂದೂಡಿದೆ.

ನನ್ನ ಕಾಲಿಗೆ ಗಾಯವಾಗಿದ್ದರಿಂದ ಮರುದಿನ ಇಪ್ಪತ್ತು ು ದೂರದ ಆ ಸ್ಥಳಕ್ಕೆ ಹೋಗಲು ಜಟಕಾಗಾಡಿ ದನ್ನು ವ್ಯವಸ್ಥೆ ಮಾಡಿಕೊಂಡೆ. ಹಿಂದಿಯಲ್ಲಿ ಜಟ್ಕಾ ವ ಶಬ್ದಕ್ಕೆ ದೊಡ್ಡ ಆಘಾತ ಎನ್ನುವ ಅರ್ಥವಿದೆ. ಾಗಾಡಿಯಲ್ಲಿ ಕುಳಿತವರಿಗೆ ಇಂತಹ ಅನುಭವವಾ ತು! ನಾನು ಸೂರ್ಯ ಹುಟ್ಟುವ ಮೊದಲೇ ಹೊರ ಬಯಸಿದ್ದರೂ ಗಾಡಿಯವನು ಆನೆಯ ಭಯದಿಂದ ತ್ತು ಗಂಟೆಗೆ ಮೊದಲು ಹೊರಡಲು ಒಪ್ಪಲಿಲ್ಲ. ನಾಲ್ಕು ಜನ ಜಟಕಾದಲ್ಲಿ ತೂರಿಕೊಂಡೆವು. ನನ್ನ ದೇಹಕ್ಕೆ ಕೆಳಗಿನಿಂದ ಕೂರಲು ಹಾಕಿದ ಹಲಿಗೆ ಮೇಲಿನ ಬಿದಿರುಗಳ ಮುಚ್ಚಿಗೆ ಭಾರೀ ಹೊಡೆತವನ್ನು ತ್ತಿದ್ದವು! ಆ ಬಡಕಲು ಹೆಣ್ಣುಕುದುರೆ ಬೆಟ್ಟಗುಡ್ಡಗಳ ಮ ರಸ್ತೆಯಲ್ಲಿ ನಮ್ಮನ್ನು ಸರಾಗವಾಗಿ ಎಳೆದುಕೊಂಡು ಯಿತು. ಕಡಿದಾದ ಏರಿನಲ್ಲಿ ನಾವು ಇಳಿದು ಯನ್ನು ತಳ್ಳಿದರೂ ಆ ಕುದುರೆಯ ಶ್ರಮ ನನಗೆ ಗೆಯಾಯಿತು. ಮೋಯರ್ ನದಿಯ ಹತ್ತಿರಕ್ಕೆ ಬಂದು ಾವನ್ನು ನಿಲ್ಲಿಸಿದೆವು. ಅಲ್ಲಿಂದ ಆನೆಯ ಶವವಿದ್ದಕಡೆ ಾಲುದಾರಿಯಲ್ಲಿ ಹೊರಟೆವು. ಕೆಲವು ಗಂಟೆ ುವಷ್ಟರಲ್ಲಿ ನಾವು ದಾರಿತಪ್ಪಿರುವುದರ ಅರಿವಾಯಿತು. ಗೆ ದಾರಿತೋರಿಸಲು ಬಂದಿದ್ದವನು ನನಗೆ ಮತ್ತು ವಿಗೆ ಅಲ್ಲೇ ಕುಳಿತುಕೊಳ್ಳಲು ಹೇಳಿ ಆನೆಯ ನ್ನು ಹುಡುಕಲು ಹೊರಟ. ಮೂರು ಗಂಟೆಗಳ ಬಂದ ಅವನು ತನ್ನ ಪ್ರಯತ್ನ ವಿಫಲವಾದ ತಿಳಿಸಿದ. ಯಾವುದೋ ಭಯ ಅಥವಾ ನಂಬಿಕೆಯಿಂದಾಗಿ ಅವನು ಆನೆಯ ಶವವನ್ನು ಕಲು ಹೋಗದೆ ಮೂರುಗಂಟೆ ಹತ್ತಿರದಲ್ಲೇ ಸುತ್ತಾಡಿ ರಬೇಕೆಂದು ನನಗೆ ಅನುಮಾನವಾಯಿತು.

ಾವು ಮೋಯರ್ ನದಿಯನ್ನು ದಾಟಿ ಮತ್ತೊಬ್ಬ ರ್ಗದರ್ಶಕನನ್ನು ಹುಡುಕಿಕೊಂಡು ಗಂಡಾ ಎನ್ನುವ ಬಂದೆವು. ಆ ಹಳ್ಳಿಯ ಬಳಿ ಹುಲಿಯೊಂದು ಮರಿಯನ್ನು ಕೊಂದುಹಾಕಿತ್ತು, ತಾಯಿ ಆನೆ ಕಾಡಿನಲ್ಲಿ ರೋಷದಿಂದ ಸುತ್ತಾಡುತ್ತಿತ್ತು, ಹಾಗಾಗಿ ಯಾರೂ ನಮಗೆ ದಾರಿತೋರಿಸಲು ಕಾಡಿಗೆ ಬರಲು ಸಿದ್ಧರಿರಲಿಲ್ಲ. ಆಗಲೇ ಮಧ್ಯಾಹ್ನ ಮೀರುತ್ತಾ ಬಂದಿದ್ದರಿಂದ ನಾನು ಹತಾಶೆಯಿಂದ ಭಾರೀ ಬಹುಮಾನದ ಆಮಿಷವೊಡ್ಡಿ ಒಬ್ಬನನ್ನು ಒಪ್ಪಿಸಿದೆ.

ಮುನ್ನೂರು ಅಡಿ ದೂರವಿದ್ದ ಕಾಡನ್ನು ಪ್ರವೇಶ ಮಾಡಿದ ಕೂಡಲೆ ಆನೆಗಳ ನೂರಾರು ಹೆಜ್ಜೆ ಗುರುತುಗಳನ್ನು ನೋಡಿ ಆಶ್ಚರ್ಯವಾಯಿತು. ಇಲ್ಲಿನ ಜನಗಳು ಮೂವತ್ತು ಅಡಿ ಎತ್ತರದಲ್ಲಿ ಏಕೆ ರಾತ್ರಿಯನ್ನು ಕಳೆಯುತ್ತಾರೆ ಎಂದು ನನಗೆ ಆಗ ಮನದಟ್ಟಾಯಿತು. ಒಂದು ಕಡೆ ನದಿ ಮತ್ತೊಂದು ಕಡೆ ಬೆಟ್ಟ-ಇವೆರಡರ ಮಧ್ಯದ ಚಿಕ್ಕ ಕಾಲುದಾರಿಯಲ್ಲಿ ಬೆಳೆದ ಪೊದೆಗಳ ನಡುವೆ ಹಾಯ್ದು ಹೋಗುವುದು ಪ್ರಯಾಸಕರವಾಗಿತ್ತು, ಆ ದುರ್ಗಮ ಕಾಡಿನಲ್ಲಿ ಅರ್ಧ ಮೈಲು ಹೋಗುವಷ್ಟರಲ್ಲಿ ಆನೆಯೊಂದರ ಕೋಪದ ಘರ್ಜನೆಯನ್ನು ಕೇಳಿ ಸ್ತಬ್ಧರಾಗಿ ನಿಂತೆವು. ನಾವು ಸರಸರನೆ ಬೆಟ್ಟವನ್ನೇರುತ್ತಾ ಉರುಳಿದ ಮರದ ಹಿಂದೆ ಆಶ್ರಯ ಪಡೆದೆವು. ತಾಯಿ ಆನೆ ತನ್ನ ಕೋಪವನ್ನು ಪೂರ್ಣವಾಗಿ ವ್ಯಕ್ತಪಡಿಸುತ್ತಿದ್ದುದರಿಂದ ಒಂದು ಗಂಟೆ ನಾವು ಅಲ್ಲೇ ಕಳೆದೆವು. ಅಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆನ್ನುವಷ್ಟರಲ್ಲಿ ಆನೆಯೂ ನಮ್ಮ ದಿಕ್ಕಿನಲ್ಲಿಯೇ ಹೊರಟಿತು. ಅದೃಷ್ಟವಶಾತ್ ಅದು ನಮ್ಮನ್ನು ನೋಡಿರಲಿಲ್ಲ, ಆದರೆ ಅದು ನಮ್ಮ ಜಟಕಾಬಂಡಿ ಇದ್ದ ದಿಕ್ಕಿನಲ್ಲಿ ಹೋಗಿತ್ತು. ನಾವು ಬಂಡಿಯ ಹತ್ತಿರ ಬಂದಾಗ ಕುದುರೆ ಮತ್ತು ಗಾಡಿಯವ ಗಡಗಡ ನಡುಗುತ್ತಾ ನಿಂತಿದ್ದರು. ಆನೆ ಕೋಪದಿಂದ ಘರ್ಜಿಸುತ್ತಾ ಅವರಿಂದ 400 ಅಡಿ ದೂರದಲ್ಲಿಯೇ ಹೋಗಿತ್ತು. ಮತ್ತೊಮ್ಮೆ ಅಪಾಯ ಎದುರಾಗುವ ಮೊದಲು ನಾವು ಅಲ್ಲಿಂದ ಹೊರಟೆವು.


ನಮ್ಮ ಮಾರ್ಗದರ್ಶಕ ಹೇಳಿದಪ್ರಕಾರ ಕೊಂದ ಆನೆಯ ಮರಿಯನ್ನು ಮತ್ತೊಮ್ಮೆ ತಿನ್ನಲು ಬಂದ ಹುಲಿಯನ್ನು ಅಲ್ಲಿಯೇ ಕಾಯುತ್ತಿದ್ದ ತಾಯಿ ಆನೆ ಓಡಿಸಿತ್ತು. ಅದು ಅಷ್ಟಕ್ಕೇ ನಿಲ್ಲದೆ ಈಗ ಹುಲಿಯ ಬೆನ್ನುಬಿದ್ದಿತ್ತು. ದೂರದಲ್ಲಿ ಅದರ ಘರ್ಜನೆಗಳು ಈಗಲೂ ಕೇಳುತ್ತಿದ್ದವು.

ನಾವು ಒಂದು ಮೈಲು ಹೋಗುವಷ್ಟರಲ್ಲಿ ಪೂರ್ಣ ಕತ್ತಲಾಯಿತು. ಗಾಡಿಯವನ ಬಳಿ ದೀಪವೂ ಇರಲಿಲ್ಲ, ಆ ದಟ್ಟಡವಿಯಲ್ಲಿ ಓಡುತ್ತಿದ್ದ ಕುದುರೆ ಒಮ್ಮೆಲೆ ನಿಂತುಬಿಟ್ಟಿತು. ನಮ್ಮೆದುರಿಗಿದ್ದ ರಸ್ತೆಯಲ್ಲಿ ಹುಲಿಯೊಂದನ್ನು ನೋಡಿದ್ದಾಗಿ ಗಾಡಿಯವನು ಹೇಳಿದ. ದುರ್ಬಲವಾಗಿದ್ದ ನನ್ನ ಟಾರ್ಚ್‌ನ ಬೆಳಕನ್ನು ಹರಿಸುತ್ತಾ ನಾನು ಗಾಡಿಯಿಂದ ಇಳಿದು ಪಕ್ಕದ ಪೊದೆಗಳತ್ತ ಇಣುಕಿದೆ. ಒತ್ತಾದ ಪೊದೆಗಳ ಮಧ್ಯೆ ಏನೂ ಕಾಣದಿದ್ದರೂ ಹುಲಿಯ ಗುಟುರು ಮಾತ್ರ ಕೇಳಿತು. ಇದರಿಂದ ಎಚ್ಚೆತ್ತ ಸಾಂಬಾರ್ ಜಿಂಕೆಗಳು ಮತ್ತು ಆನೆಗಳು ಜೋರಾಗಿ ಕೂಗತೊಡಗಿದವು. ಗಾಡಿಯಲ್ಲಿದ್ದವರು ನನ್ನನ್ನು ಹಿಂದೆ ಬರುವಂತೆ ಒತ್ತಾಯಿಸಿದರು. ನಾನು ಮರುಮಾತಿಲ್ಲದೆ ಹಾಗೆ ಮಾಡಿದೆ.

ನಮ್ಮ ಪುಟಾಣಿ ಕುದುರೆ ಸಾಕಷ್ಟು ಬಲವಂತ ಮಾಡಿದ ಮೇಲೆ ಮುಂದೆ ಹೊರಟಿತು. ಒಮ್ಮೆ ಹೊರಟ ನಂತರ ಅದು ರೇಸಿನ ಕುದುರೆಯಂತೆ ನಾಗಾಲೋಟದಲ್ಲಿ ಓಡಿ ಒಂದು ಮೈಲಿನ ನಂತರವೇ ಉಸಿರನ್ನು ಎಳೆದುಕೊಳ್ಳಲು ನಿಂತಿತು.

ಹೀಗೆ ನನ್ನ ಪ್ರಥಮ ಪ್ರಯತ್ನ ಗುಡ್ಡ ಕಡಿದು ಇಲಿ ಹಿಡಿದಂತೆ ಹಾಸ್ಯಾಸ್ಪದವಾಗಿ ಮುಕ್ತಾಯವಾಯಿತು.


(ಮುಂದುವರೆಯುವುದು)



ಮರದಲ್ಲಿ ಮನೆ!

ಗಂಡಾ ಹಳ್ಳಿಯಲ್ಲಿ ಬತ್ತದ ಗದ್ದೆಗಳ ತುದಿಯ ಎತ್ತರದ ಬದುವಿನ ಮೇಲೆ ಗುಡಿಸಲುಗಳಿದ್ದವು. ಆದರೆ ಇದು ಹಳ್ಳಿಗರ ಹಗಲಿನ ಉಪಯೋಗಕ್ಕೆ ಮಾತ್ರವಾಗಿತ್ತು. ರಾತ್ರಿ ಮಲಗಲು ಅವರು ದೊಡ್ಡ ಗಟ್ಟಿಯಾದ ಮರದಲ್ಲಿ ಸುಮಾರು ಮೂವತ್ತು ಅಡಿ ಎತ್ತರಕ್ಕೆ ಹಲಗೆಗಳನ್ನು ಕಟ್ಟಿ ಅದರ ಸುತ್ತ ಮಕ್ಕಳು ಉರುಳಿಹೋಗದಂತೆ ಕೋಲುಗಳ ತಡೆ ನಿರ್ಮಿಸಿದ್ದರು. ಹೆಂಗಸರು ಮತ್ತು ಮಕ್ಕಳು ಯಾವುದೇ ಏಣಿಯ ಸಹಾಯವಿಲ್ಲದೆ ಸರಾಗವಾಗಿ ಮರವನ್ನು ಏರಿ ಹೋಗುತ್ತಿದ್ದುದನ್ನು ನೋಡಿ ನಾನು ದಂಗಾಗಿಹೋದೆ. ಒಬ್ಬ ಹೆಂಗಸು ತನ್ನ ಬೆನ್ನಮೇಲೆ, ಮತ್ತೊಬ್ಬಳು ನಿತಂಬಕ್ಕೆ ಮಕ್ಕಳನ್ನು ಕಟ್ಟಿಕೊಂಡು ಶ್ರಮಪಡದೆ ಮರವೇರಿದ್ದನ್ನು ನಾನು ನೋಡಿದೆ. ನಾಲ್ಕು ವರ್ಷಕ್ಕಿಂತ ದೊಡ್ಡ ಮಕ್ಕಳು ತಮ್ಮ ಕೈಕಾಲುಗಳ ಹಿಡಿತದಿಂದ ತಾವೇ ಮೇಲೇರುತ್ತಿದ್ದರು. ಹೆಣ್ಣು ಮಕ್ಕಳು ಬಹಳ ಕಡಿಮೆ ಬಟ್ಟೆ ಧರಿಸಿದ್ದರೆ ಗಂಡು ಮಕ್ಕಳ ಮೈಮೇಲೆ ಅದೂ ಇರಲಿಲ್ಲ! ಮೂವತ್ತು ಅಡಿ ಎತ್ತರಕ್ಕೆ ಏಕೆ ಮಲಗು ಕಟ್ಟೆಯನ್ನು ಮಾಡಿಕೊಂಡಿದ್ದೀರೆಂದು ಕೇಳಿದ್ದಕ್ಕೆ ಅವರು ಕಾಡಾನೆಗಳು ಹಾದಿದರೂ ಕೂಡ ತಲುಪಲಾರದಂತೆ ಮಾಡುವುದು ತಮ್ಮ ಉದ್ದೇಶ ಎಂದು ಹೇಳಿದರು. ಆನೆಗಳಿಗೆ ಹಾರುವ ಅಭ್ಯಾಸವಿರದಿದ್ದರೂ ಹುಲಿ ಚಿರತೆಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಉದ್ದೇಶ ಹಳ್ಳಿಯವರದ್ದಾಗಿರಬೇಕು ಎನ್ನಿಸಿತು.

ಮೋದಿ ಒಬ್ಬ ಭಂಡ ನಾಟಕಕಾರ



ದೇವಮಾನವ, ಬಾಬಾ, ಅಮ್ಮಾ, ಗುರುಗಳು ಸಾರ್ವಜನಿಕ ದರ್ಶನದ ವೇಳೆ ಅವರ ಕಡೆಯ ಜನರೇ ತಮ್ಮ ಚೇಲಾಗಳನ್ನು ಸಭಿಕರ ನಡುವೆ ಅಂಗವಿಕಲರಂತೆ ಅಥವಾ ರೋಗಿಷ್ಟರಂತೆ ವೇಷ ಮಾಡಿ ಕುಳ್ಳಿರಿಸುತ್ತಿದ್ದರು. ನಂತರ ಈ ವೇಷಧಾರಿಗಳು ದೇವಮಾನವರ ಕೈಯಿಂದ ಪ್ರಸಾದ ಸ್ವೀಕರಿಸಿದ ಕೂಡಲೇ ಅವರ ಅಂಗವಿಕಲತೆ ಅಥವಾ ರೋಗ ತಕ್ಷಣ ನಿವಾರಣೆ ಆದಂತೆ ನಟಿಸುತ್ತಾ ಕುಣಿಯುತ್ತಿದ್ದರು. ವಿದೇಶಿ ಮಿಶನರಿ ಬೆನ್ನಿ ಹಿನ್ ಬೆಂಗಳೂರಿಗೆ ಬಂದಿದ್ದಾಗ ಹೀಗೇ ಮಾಡಿದ್ದ. ನಮ್ಮ ಪ್ರೊಟೆಸ್ಟೆಂಟ್ ಮಿಷನರಿಗಳೂ ದೇಶದಲ್ಲೆಡೆ ಹೀಗೆಯೇ ನಾಟಕ ಆಡಿ ತಮ್ಮ ಭಕ್ತರನ್ನು ಸಮ್ಮೋಹನಗೊಳಿಸುತ್ತಾರೆ.

ಆದರೆ ಈಗ ನಮ್ಮ ಪ್ರಧಾನ ಮಂತ್ರಿಗಳೇ ಉತ್ತರ ಪ್ರದೇಶದ ಚುನಾವಣಾ ಪ್ರಚಾರದ ವೇಳೆ ಇಂತಹ ನಾಟಕಕ್ಕೆ ಇಳಿದಿದ್ದಾರೆ ಎಂಬ ಸುದ್ದಿ ಕೆಲವು ಹಿಂದಿ ಪತ್ರಿಕೆಗಳು ಪ್ರಕಟಿಸಿವೆ! ಉತ್ತರ ಪ್ರದೇಶದಲ್ಲಿ ಒಂದೆಡೆ ಸತ್ತ ಮಗುವಿನ ತಲೆಯ ಮೇಲೆ ಮೋದಿ ಕೈಯಿಟ್ಟ ಕೂಡಲೇ ಆ ಮಗು ಜೀವಂತ ಆಯಿತಂತೆ, ಇನ್ನೊಂದೆಡೆ ಮೋದಿ ಒಬ್ಬ ಕುರುಡನ ಕಣ್ಣ ಮೇಲೆ ಕೈಯಿಟ್ಟ ಕೂಡಲೇ ಅವನಿಗೆ ದೃಷ್ಟಿ ಬಂತಂತೆ, ಮತ್ತೊಂದೆಡೆ ಮೋದಿ ಮುಟ್ಟಿದ ಕೂಡಲೇ ಒಬ್ಬ ರೋಗಿ ಸ್ವಸ್ಥನಾದನಂತೆ. ಹೀಗೆ ಮೋದಿ ಚುನಾವಣಾ ಪ್ರಚಾರಕ್ಕೆ ಹೋದೆಡೆಯೆಲ್ಲಾ ಇಂತಹ ನಾಟಕ ಆಡಲಾಗುತ್ತಿದೆಯಂತೆ. ಅಂದರೆ ಮೋದಿ ತನ್ನ ತಾರುಣ್ಯದಲ್ಲಿ 12 ವರ್ಷ ಹಿಮಾಲಯದಲ್ಲಿ ತಪಸ್ಸು ಮಾಡಿದ್ದ ಕಟ್ಟುಕಥೆ ಕಟ್ಟಿ, ಈ ತಪಸ್ಸಿನಿಂದ ಲೋಕೋದ್ಧಾರಕ್ಕಾಗಿ ಅವರಲ್ಲಿ ಇಂತಹ ಪವಾಡ ಶಕ್ತಿ ಆವಿರ್ಭವಿಸಿದೆ, ಹಾಗಾಗಿ ಅವರೊಬ್ಬ ದೊಡ್ಡ ಸಂತ ಮತ್ತು ಮಹಿಮಾ ಪುರುಷನಾಗಿದ್ದು ಅವರನ್ನು ಈ ಚುನಾವಣೆಯಲ್ಲಿ ಗೆಲ್ಲಿಸುವುದರಿಂದ ಭಾರತದ ಉದ್ಧಾರವಾಗುತ್ತದೆ ಎಂದು ಉತ್ತರ ಪ್ರದೇಶದ ಮತದಾರರ ಮೇಲೆ ಮಾನಸಿಕ ಪ್ರಭಾವ ಬೀರಲು ಇಂತಹ ನಾಟಕ ಆಡಲಾಗುತ್ತಿದೆ.

ಉತ್ತರ ಪ್ರದೇಶದ ಮೊದಲ ಹಾಗೂ ಎರಡನೇ ಹಂತದ ಮತದಾನ ಮುಗಿದ ನಂತರ ಸಿಕ್ಕಿರುವ ಗುಪ್ತ ಮಾಹಿತಿಯಂತೆ ಬಿಜೆಪಿ ಪಕ್ಷಕ್ಕೆ ಯುಪಿಯಲ್ಲಿ ಭಾರಿ ಹಿನ್ನಡೆಯಾಗಬಹುದು ಎಂದು ಮೋದಿ-ಅಮಿತ್ ಷಾ ಜೋಡಿಗೆ ಭಾಸವಾಗಿರುವುದರಿಂದ ಮೋದಿಯೊಬ್ಬ ಪುಣ್ಯಪುರುಷ, ತನ್ನ ಪವಾಡದಿಂದ ದೇಶದ ಕಷ್ಟ ನೀಗಿಸಬಲ್ಲ ಮಹಾತ್ಮ ಎಂದು ಬಿಂಬಿಸಿ ಮೌಢ್ಯಭರಿತ ಭಾವುಕ ಜನರ ವೋಟು ಬಾಚುವ ಮನೋವೈಜ್ಞಾನಿಕ ತಂತ್ರ ಹೆಣೆದಿರುವಂತಿದೆ. 2014 ರಲ್ಲಿ ಸೆಲ್ಫಿಯಿಂದ ಯುವಕರನ್ನು ಸಮ್ಮೋಹನಗೊಳಿಸಿ ವೋಟು ಬಾಚಿದಂತೆ ಈಗ ಧಾರ್ಮಿಕ ಸೆಲ್ಫ್ಲೆಸ್‌ನಿಂದ ಮುಗ್ಧ ಜನರ ಮೌಢ್ಯವನ್ನು ಬಂಡವಾಳ ಮಾಡಿಕೊಂಡು ವೋಟು ಸೆಳೆಯುವ ಪ್ರಯತ್ನ ಬಾಬಾ ಮೋದಿಶ್ರೀ ಮಾಡುತ್ತಿರುವಂತಿದೆ.


ಹಿಂದಿನ 60 ವರ್ಷಗಳಲ್ಲಿ ಇಂತಹ ಒಬ್ಬ ಭಂಡ ನಾಟಕಕಾರನನ್ನು ಭಾರತ ಕಂಡಿರಲಿಲ್ಲ!!

- ಜೆ. ರವಿಕಿರಣ, ಮೈಸೂರು



'ರಾಗು' ಎಂಬ ಮಲವನ್ನು ಎಸೆದು ಮಾನ ಉಳಿಸಿಕೊಳ್ಳಿ

'ಸರ್ವ ಗುಣಾ ಕಾಂಚನಮಾಶ್ರಯತೀ' ಎಂಬುದೊಂದು ಮಾತಿದೆ. ದುಡ್ಡಿದ್ದಲ್ಲಿ ನೀವು ಬೇಕೆನಿಸಿದ 'ಗುಣ'ಗಳನ್ನು ಕೊಂಡುಕೊಳ್ಳಬಹುದು. ಅಷ್ಟೇ ಯಾಕೆ, ತನ್ನ 'ಗುಣ'ಗಳಿಗೆ ಡ್ಯಾಮೇಜ್ ಆದಾಗ ತೇಪೆ ಹಾಕಿಕೊಂಡು ಹೊಸ ಬಿಲ್ಡಪ್ಪನ್ನು ಸಹ ತೋರ ಹೋಗಬಹುದು. ಒಟ್ಟಾರೆ, ನಿಮ್ಮ ದುಡ್ಡಿನ ಅಥವ ದುಡ್ಡು ಬಿಚ್ಚುವ ಹಿನ್ನೆಲೆಯನ್ನನುಸರಿಸಿ ನಿಮ್ಮ ಗುಣಾವಗುಣಗಳು ಸಮಾಜದಲ್ಲಿ ಬೇಕಾದಂತೆ ಟ್ಯೂನ್ ಮಾಡಿಕೊಳ್ಳಲು ಸಾಧ್ಯವಿದೆ. ಹೀಗೆಂದು ಸದ್ಯದಲ್ಲಿ ಸಾಧಿಸಿ ತೋರಿಸಿರುವಾತ ಬೇರೆ ಯಾರೂ ಅಲ್ಲ ಅದೇ ನಮ್ಮ ಸರ್ವಸಂಘ ಪರಿತ್ಯಾಗಿ, ಕಾಮಲೋಭಗಳೇ ಮೊದಲಾದ ಷಡ್ವೈರಿಗಳ ಜುಟ್ಟು ಹಿಡಿದು ಮೆಟ್ಟನಿಂತ ಸಹಸ್ರ ಸಹಸ್ರ ಸಂತ ಪೂಜಿತನಾದ ರಾಗು ಸಾಮಿ. (ದುಡ್ಡು ಪೀಕಿಕೊಂಡು 'ಸಂತರ ಸಂತೆ'ಯನ್ನೇ ನಿಮಗಾಗಿ ಜಮಾಯಿಸುತ್ತೇನೆಂದು ರಾಘುಗೆ ಭರವಸೆ ನೀಡಿದ ಕೆಲ ಸಂತ ಗುತ್ತಿಗೆದಾರರು ರೀಮ್ ಗಟ್ಟಲೆ ಕೇಸರಿ ಬಟ್ಟೆಯಿಂದ ಸಿಂಪಲ್ಲಾಗಿ ಹೊಲಿಯಬಹುದಾದ ನೈಟಿಯಂತಹ ಗೌನನ್ನು ತಯಾರಿಸಿ ಕಾಂಜಿ ಪೀಂಜಿಗಳಿಗೆಲ್ಲ ಅದನ್ನು ತೊಡಿಸಿ ಘಾಟಿ ಸುಬ್ರಹ್ಮಣ್ಯಕ್ಕೆ ದಾಸುಗಳನ್ನು ಕಳಿಸಿದಂತೆ ರಾಗು ಸಭೆಗಳಿಗೆ ಬಿಟ್ಟಿದ್ದರಂತೆ. ರಾಗ ದ್ವೇಷಗಳನ್ನು ಮೀರಿದ ನೈಜ ಸಂತರಿಗೆ ರಾಗುನಂತಹ ಯಬಡೇಸಿಗಳ ಗಂಜಿ ಕಾಸಿಗೆ ಓಡೋದಿ ಬರುವ ಹರ್ಕತ್ತು ಯಾವತ್ತಿಗೂ ಇರೋಲ್ಲ)



ರಾಗುನ ವಿರುದ್ಧ ಇಬ್ಬರು ಮಹಿಳೆಯರು ಈ ದೇಶದಲ್ಲಿ ಬಹುದೊಡ್ಡ ಅಪರಾಧವೆಂದೇ ಪರಿಗಣಿತವಾಗಿರುವ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದರೆ, ಬಲಾಢ್ಯರ ಒತ್ತಡ ಹಾಗು ಮರ್ಯಾದೆಯ ಭಯ ಇತ್ಯಾದಿಗಳ ಕಾರಣಕ್ಕೆ ಅನೇಕರಿಗೆ ತಿಳಿದೂ ಇನ್ನೂ ಸುಪ್ತಾವಸ್ಥೆಯಲ್ಲೇ ಮಲಗಿರುವ ಬೆಳಕಿಗೆ ಬಾರದ ಅಪರಾಧಗಳು ಇನ್ನೆಷ್ಟೋ..!!? ಏನೆಲ್ಲಾ ತಿಪ್ಪರಲಾಗ ಹಾಕಿದರೂ ದುಡ್ಡು ಚೆಲ್ಲಿದರೂ ಈ ರಾಗು ವಿವಾಹಿತ ಮಹಿಳೆಯೊಡನೆ ಸಂಪರ್ಕಕ್ಕಾಗಿ ಹಪಹಪಿಸಿದ್ದ ಹಾಗು ಅದರಲ್ಲಿ ಯಶಸ್ಸನ್ನೂ ಕಂಡಿದ್ದ ಎಂಬುವುದನ್ನು ಮುಚ್ಚಿಡಲು ಯಾರಿಂದಲೂ ಆಗಲೇ ಇಲ್ಲ. ಅದು ಅತ್ಯಾಚಾರವೋ ಇನ್ನೊಂದೋ ಪೀಠದ ಗೌರವಕ್ಕಂತೂ ಚ್ಯುತಿ ತರುವಂತಹ ವಿಚಾರವಂತೂ ಹೌದು. ಇದೆಲ್ಲ ತಿಳಿದೂ ಇನ್ನೂ ಆತನನ್ನು ಬೆಂಬಲಿಸುವುದರ ಮೂಲಕ ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಡುತ್ತಿರುವ, ಮಾನಸಿಕವಾಗಿ ತೀರಾ ಘಾಸಿಗೊಂಡಿರುವ ಒಬ್ಬ ಮಹಿಳೆಗೆ ಹಾಗು ಆಕೆಯ ಕುಟುಂಬಕ್ಕೆ ಸಿಗಬೇಕಾದಂತಹ ನ್ಯಾಯಕ್ಕೆ ತೊಡರುಗಾಲು ಹಾಕುತ್ತಿರುವುದಾದರೂ ಯಾತಕ್ಕೆ?

ಹೌದು, ಆಧ್ಯಾತ್ಮಿಕ ಸಾಧನೆಗಳ ಹೊರತಾಗಿ ಯೋಚಿಸಿದಲ್ಲಿ ಈ ಕಾಮಕ್ರೋಧಗಳೆಲ್ಲ ಮನೋಸಹಜ ವಿಚಾರಗಳೇ. ರಾಗು ಇದನ್ನು ಮೀರಿದ್ದಾನೆಂದರೆ ಅದು ಭಾವುಕರ ನಂಬಿಕೆಯೇ ಹೊರತು ವಾಸ್ತವವಲ್ಲ. ಇದೀಗ ಅತೀ ಸಹಜವಾಗಿ ಅಲ್ಲಲ್ಲಿ ಕೇಳಿಬರುವ ಧಾರ್ಮಿಕ ವ್ಯಕ್ತಿಗಳ ಇಂತಹ ವಿಚಾರವನ್ನು ಈತನಿಗೆ ಸಂಬಂಧಿಸಿ ನಾವೆಲ್ಲ ಒಪ್ಪಿಕೊಂಡರೆ, ನಮ್ಮ ಯತಿಯ ನೆಪದಲ್ಲಿ ತಮ್ಮ ಪೀಠದ ಮರ್ಯಾದೆಯನ್ನು ಇತರರ ಮುಂದೆ ಹರಾಜಿಗಿಟ್ಟಂತೆ ಎನ್ನುವ ಭಯ ಕೆಲ ನಿಷ್ಠರದ್ದು. (ಆದರೆ ಇದನ್ನು ವೃಥಾ ಎಳೆಯುವುದರಿಂದ ಸಮುದಾಯಕ್ಕೆ ಅಪಕೀರ್ತಿ ಗಟ್ಟಿಗೊಳ್ಳುತ್ತಿರುವುದನ್ನಿವರು ಮರೆಯುತ್ತಾರೆ.) ಒಂದು ಬಗೆಯಲ್ಲಿ ಇದು ಒಪ್ಪುವ ಮಾತೇನೋ ಹೌದಾಗಿದ್ದರೂ ಮೈಸ್ಫೂರ್ತಿ ಕೊಳಕಾಗಿಸಿಕೊಂಡು ಕೇವಲ ದುಡ್ಡು ಹಾಗು ಬೆಂಬಲಿಗರ ಹಿನ್ನೆಲೆಯನ್ನೇ ನಂಬಿ ತಾನೊಬ್ಬ ಮಿ. ಕ್ಲೀನ್ ಎಂದು ಪೋಜು ನೀಡುವ ರಾಗುವನ್ನು ಇನ್ನೆಷ್ಟು ಸಮಯ ಇದೇ ರೀತಿ ಹೊತ್ತು ತಿರುಗಲು ಸಾಧ್ಯ ಸ್ವಾಮೀ..

ರಾಗು ವಿರುದ್ಧ ಧ್ವನಿಯೆತ್ತಿದ ಪ್ರೇಮಲತಾ ದಂಪತಿಗಳ ಬಾಯಿ ಮುಚ್ಚಿಸಲು ರಾಗು ಚೇಲಾಗಳು ದಾಖಲಿಸಿದ ಬ್ಲಾಕ್ ಮೇಲ್ ದೂರು ಕೂಡ ಇದೀಗ ಟುಸ್ ಎನ್ನುವ ಹಂತದಲ್ಲಿದೆ. ಇಡೀ ಪ್ರಕರಣ ನಡೆದದ್ದು ಇಬ್ಬರ ವೈಯಕ್ತಿಕ ಸಂಬಂಧದ ವಿಚಾರದಲ್ಲಿ, ಆದರೆ ಹೋರಾಟಕ್ಕೆ ಯಾವನೋ ಸಂಬಂಧವೇ ಇಲ್ಲದ ಜನಾಂದೋಲನದ ಕರೆ ಕೊಡುತ್ತಾನೆ. ಕೆಕ್ಕಾರು ಮಠದಲ್ಲಿ ರಾಘು ಅಡಗಿದಾಗ ಆತನ ಸುತ್ತ ದಲಿತರ, ಶೂದ್ರರ ಕೋಟೆ ಹಾಗು ಅಟ್ರಾಸಿಟಿ ಭೂತವನ್ನು ಕಟ್ಟಿ ಬಿಡಲಾಯಿತು. ಇದೀಗ ಸಂತ್ರಸ್ತೆ ಪ್ರೇಮಲತಾ ದಂಪತಿಗಳಿಗೆ ನ್ಯಾಯಾಲಯದಿಂದ ಸಕಾರಾತ್ಮಕ ಸ್ಪಂದನೆ ದೊರೆತರೆ ಇದರ ವಿರುದ್ಧ ಜನಾಂದೋಲನವಂತೆ. ದುಡ್ಡಿನ ಮದದ ಇವ್ರುಗಳು ಜನಗಳಿಗೇನು ಬೇರೆ ಕೇಮೇ ಇಲ್ಲವೇನೊ ಎಂದು ಭಾವಿಸಿದಂತಿದೆ. ಇದನ್ನೆಲ್ಲ ನೋಡಿದಾಗ ಬೇಂದ್ರೆಯವರ

'ಬಾಣಂತಿ ಎಲುಬ ಸಾಬಾಣಾದ ಬಿಳುಪಿನ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ..
ಕುರುಡು ಕಾಂಚಾಣ ಕುಣಿಯುತಲಿತ್ತೋ?
ಕಾಲಿಗೆ ಬಿದ್ದವರ ತುಳಿಯುತಲಿತ್ತೋ'
ಕವನ ನೆನಪಾಗುತ್ತದೆ.

ಈ ರಾಗುವಿನ ಕಾಂಚಾಣದ ಜಾರುವಿಕೆಯೂ ಒಂದು ದಿನ ನ್ಯಾಯದ ಮುಂದೆ ಸೋಲೊಪ್ಪಲೇ ಬೇಕಾಗುತ್ತದೆ. ಇದನ್ನು ಆತನನ್ನು ಹೊತ್ತು ಮೆರೆಯುತ್ತಿರುವ ಧಣಾಯಸ್ವಾಂತಿಗಳು (ರಾಗುವಿನ ಹಣದ ಮೇಲೆ ಕಣ್ಣಿಟ್ಟವರು) ಮೊದಲು ಅರ್ಥ ಮಾಡಿಕೊಳ್ಳಲಿ.

-ಓದುಗ, ಮಂಗಳೂರು


ಕಂಡಿರಾ 'ಅಚ್ಛೇ ದಿನ್'?

ಸಾಮಾನ್ಯವಾಗಿ ಪ್ರತಿ ವರ್ಷ ಫೆಬ್ರವರಿ ಕೊನೆಯಲ್ಲಿ ಕೇಂದ್ರದ ಬಜೆಟ್ ಮಂಡಿಸುವುದು ರೂಢಿಯಾಗಿದ್ದರೆ ಈ ಬಾರಿ ಪಂಚರಾಜ್ಯಗಳ ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡು ಮೋದಿ ಸರ್ಕಾರ ಫೆಬ್ರವರಿ ಆರಂಭದಲ್ಲೇ ಬಜೆಟ್ ಮಂಡಿಸಿ ತಾನು ಖರೀದಿಸಿದ ಮಾಧ್ಯಮಗಳ ಮೂಲಕ ಅದನ್ನು ದೊಡ್ಡದಾಗಿ ಬಿಂಬಿಸಿಕೊಂಡು ಆ ಮೂಲಕ ಲಾಭ ಪಡೆಯಲು ಹವಣಿಸಿದ್ದನ್ನೆಲ್ಲ ನೋಡಿದರೆ ಇವರ ಸಾಧನೆಯ ಬಂಡವಾಳ ಝೀರೋ ಎಂಬುವುದನ್ನು ಅವರೇ ಪರೋಕ್ಷವಾಗಿ ಒಪ್ಪಿಕೊಂಡದ್ದು ಸ್ಪಷ್ಟವಾಗಿತ್ತು. ನವೆಂಬರ್ 8ರಂದು ನೋಟ್ ಬ್ಯಾನ್ ಗಳಿಗೆಯಲ್ಲಿ ಹೇಳಿಕೊಂಡಂತೆ ಡಿಸೆಂಬರ್ 31 ರಂದು ಯಾವ ಒಳ್ಳೆಯ ಬದಲಾವಣೆಯೂ ಆಗಲಿಲ್ಲ. ಅಂದಿನ ಅತಿ ನಿರೀಕ್ಷಿತ ಮೋದಿ ಭಾಷಣವೂ ಕಳಪೆ ಮಟ್ಟದಲ್ಲಿದ್ದು ಜನರ ಪರದಾಟಕ್ಕೆ ಇದು ಯಾವ ಸಹಾಯವನ್ನೂ ಮಾಡಲಿಲ್ಲ. ಬಳಿಕ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದ ಬಜೆಟ್ ಭಾಷಣದಲ್ಲೂ ಅವರೇ ಹಿಂದೆ ಬಿಂಬಿಸಿಕೊಂಡಿರುವ 'ಐತಿಹಾಸಿಕ' ಹಾಗು 'ಅಭೂತಪೂರ್ವ' ನೋಟ್ ಬ್ಯಾನ್ ವಿಚಾರದ ಪ್ರಸ್ತಾಪವನ್ನೇ ಉದ್ದೇಶಪೂರ್ವಕವಾಗಿ ಕೈಬಿಡಲಾಯ್ತು. ಹಾಗಾದರೆ ಅಚ್ಛೇ ದಿನ್ ಹೆಸರೇಳಿ ಕುರ್ಚಿಯೇರಿದ ಇವರುಗಳ ಸಾಧನೆಯಾದರೂ ಏನು?

ಇತ್ತೀಚೆಗೆ ಪರಮ ರಾಷ್ಟ್ರೀಯವಾದಿ ಹಾಗು ಮತೀಯವಾದಿ ಸಂಘಟನೆಯಾದ ಶಿವಸೇನೆಯ ಮುಖವಾಣಿ ಸಾಮ್ನಾದಲ್ಲೂ ಈ ಅಚ್ಛೇದಿನ್ ವಾಲಾಗಳ ಟೊಳ್ಳುತನವನ್ನು ಒಪ್ಪಿಕೊಂಡು ಅದನ್ನು ನೇರವಾಗಿ ಬಹಿರಂಗಪಡಿಸಿತ್ತು. ಮಾತು ಮಾತಿಗೆ –



ಕೊನೆಗೆ ವಿದೇಶೀ ನೆಲದಲ್ಲಿಯೂ – ಹಿಂದಿನ ಸರಕಾರವನ್ನು ಹಾಗು ಕಳೆದ 68 ವರ್ಷಗಳನ್ನು ಕರಾಳವೆಂದು ಟೀಕಿಸುವ (ಆ ಮೂಲಕ ತಾನು ದೇಶೋದ್ಧಾರಕ್ಕೆಂದೇ ಅವತರಿಸಿದ ಅವತಾರ ಪುರುಷನೆಂದು ಬಿಂಬಿಸುವ) ಮೋದಿಗೆ ಶಿವಸೇನೆ ಕೊಟ್ಟ ಉತ್ತರ ಆತನ ಜನ್ಮಕ್ಕೆ ಬೇಕಾಗುವಷ್ಟಿತ್ತು, ಅದು ಸತ್ಯವೂ ಕೂಡ. ಅದರ ಪ್ರಕಾರ ಒಂದು ವೇಳೆ ಹಿಂದಿನ ಕಾಂಗ್ರೆಸ್ ಆಡಳಿತ ಕಳಪೆಯಾಗಿದ್ದರೆ ಈಗ ಮೋದಿ ಸೋಮಾಲಿಯಾ ಬುರುಂಡಿಯಂತಹ ದರಿದ್ರ ಸ್ಥಿತಿ ತಲುಪಿದ ಭಾರತವನ್ನು ಆಳಬೇಕಿತ್ತು, ಆದರೆ ಸ್ಥಿತಿ ಹಾಗಿಲ್ಲ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಮನಮೋಹನ್ ಸಿಂಗರ ಕೊಡುಗೆಯನ್ನು ಯಾವ ಕಾರಣಕ್ಕೂ ಅಲ್ಲಗಳೆಯಲಾಗದು ಎಂದು ಮೋದಿ ಮಹಾತ್ಮನ



ಮುಸುಡಿಗೇ ಸಾಮ್ನಾ ನೇರವಾಗಿ ಇಕ್ಕಿದೆ. ಇಂದಿರಾ ಗಾಂಧಿ... ತ್ಯಾಗ ಹಾಗು ದಿಟ್ಟತನ, ರಾಜೀವರ ಬೋಫೋರ್ಸ್... ಹೊರತಾಗಿಯೂ ತಾಂತ್ರಿಕತೆಯ ಪ್ರೋತ್ಸಾಹ, ನರಸಿಂಹರಾವ್... ಹಾಗು ಮನಮೋಹನ್ ಸಿಂಗರ ಆರ್ಥಿಕ ಸುಧಾರಣಾ ಕ್ರ... ಹಾಗು ಅಭಿವೃದ್ಧಿ ಕ್ರಮಗಳನ್ನು ಕೆಲ ನ್ಯೂನತೆಯ ಹೊರತಾಗಿಯೂ ಯಾವತ್ತಿಗೂ ಕಡೆಗಣಿಸಲಾಗದು. 1971 ರಲ್ಲಿ ಇಂದಿರಾ... ಯುದ್ಧದ ಮೂಲಕ ಪಾಕ್‌ಗೆ ಪಾಠ ಕಲಿಸಿದ್ದಲ್ಲದೇ ಬ್ಯಾಂಕ್... ರಾಷ್ಟ್ರೀಕರಣ ಮಾಡಿದ್ದರು. ಆದರೆ ಮೋದಿಯ ಟುಸ್ಸೀ... ನೋಟ್ ಬ್ಯಾನ್ ಹಾಗು ಪಾಕ್ ನೊಡನೆ ಮಾತುಕತೆ ಯ... ಕ್ರಮ ಕೈಗೊಳ್ಳುವುದಕ್ಕೂ ಮುಂದಾಗದಿರುವಿಕೆ ಗಡಿಯ... ನಿರಂತರ ಗಲಭೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮೋದಿ... ನೇರವಾಗಿ ಸಾಮ್ನಾ ಮಂಗಳಾರತಿ ಮಾಡಿದೆ.

ಮೋದಿ ಯಾವುದಕ್ಕೂ ನೇರ ಉತ್ತರಿಸಲಾರ ರಾಹುಲ್... ಗಾಂಧಿ ಹೇಳಿದ ಲಂಚ ಆರೋಪಕ್ಕೆ ಈತನದ್ದು ಲೇವಡಿ... ಉತ್ತರವೇ ವಿನಹ ಅದಕ್ಕೆ ಸಮರ್ಥಕವೆನಿಸುವಂತೆ ಉತ್ತರಿಸಿ... ಮಾತುಮಾತಿಗೂ ಹಿಂದಿನ ಸರಕಾರ ಹಾಗು ಕಾಂಗ್ರೆಸಿಗರ... ಟೀಕಿಸಿ ತನ್ನ ಟೊಳ್ಳುತನವನ್ನು ಮುಚ್ಚಿಕೊಳ್ಳುವ ಈತ... ಈ ವ್ಯಸನದ ಬಗ್ಗೆ ಕಳೆದ ವರ್ಷ ವಾಟ್ಸ್ ಆಪ್‌ನ... ಹರಿದಾಡುತ್ತಿದ್ದ ಸಂದೇಶವೊಂದು ಹೀಗಿತ್ತು:

"ಮೋದಿ ಇನ್ನೂ ಹುಟ್ಟಿರಲಿಲ್ಲ... ಅಷ್ಟರಲ್ಲಿ ಭಾರ... ಪಾಕ್‌ನೊಡನೆ ಒಂದು ಯುದ್ಧ ಗೆದ್ದುಕೊಂಡಿತ್ತು.

ಮೋದಿ ಇನ್ನೂ ಮಾತು ಕಲಿತಿರಲಿಲ್ಲ... ಭಾರ... ವಿಶ್ವದ ಶ್ರೇಷ್ಠ ಸಂವಿಧಾನವೊಂದನ್ನು ರಚಿಸಿ ಅನುಷ್ಠಾ... ಗೊಳಿಸಿತ್ತು.

ಮೋದಿ ಪುಟ್ಟ ಹೆಜ್ಜೆಯಿಡಲು ಕಲಿಯುವಾಗಲೇ ದೇ... ಏಷಿಯನ್ ಕ್ರೀಡಾ ಕೂಟಗಳಲ್ಲಿ ತನ್ನ ಛಾಪನ್ನು ಮೂಡಿಸಿ...

ಮೋದಿ ಗಿಲ್ಲಿ ದಾಂಡು ಹಿಡಿಯುವ ಹೊತ್ತಿಗೆ... ದೇಶ ಪ್ರತಿಷ್ಠಿತ ಬಾಕ್ರಾನಂಗಲ್ ಹಾಗು ಖುಷಿಂದ... ಅಣೆಕಟ್ಟುಗಳನ್ನು ಕಟ್ಟಿತ್ತು.

ಆತ ಶಾಲಾ ಪುಸ್ತಕದ ಪುಟ ತಿರುಗಿಸುವ ಹೊತ್ತಿ... ದೇಶ ಬಾಬಾ ಪರಮಾಣು ಸಂಶೋಧನಾ ಕೇಂದ್ರವ... ಆರಂಭಿಸಿತ್ತು.

ಆತ ತನ್ನ ಮನೆಯಲ್ಲಿ ಲಾಟೀನು ಹಚ್ಚುವುದನ್ನು... ಕಲಿಯುವಾಗ ದೇಶ ತಾರಾಪುರ ಪರಮಾಣು ವಿದ್ಯುತ್... ಕೇಂದ್ರವನ್ನು ಆರಂಭಿಸಿತ್ತು.

ಆತ ಬಟ್ಟೆ ಉಡಲು ಕಲಿಯುವ ಹೊತ್ತಿನಲ್ಲಿ ದೇಶದ... ಉನ್ನತ ಶಿಕ್ಷಣ ಸಂಸ್ಥೆಗಳಾದ ಐಐಟಿ, ಐಐಎಂ, ಏಮ್ಸ್... ಐಐಎಸ್‌ಸಿ ಮತ್ತು ಅನೇಕ ಪ್ರತಿಷ್ಠಿತ ವಿದ್ಯಾಕೇಂದ್ರಗಳ... ತಲೆಯೆತ್ತಿದ್ದವು.

ಆತ ಇನ್ನೂ ತನ್ನ ಮೂಗು ಒರೆಸುವುದನ್ನು ಕಲಿತಿರಲಿ... ಆವಾಗಲೇ ನೆಹರೂ ನವರತ್ನ ಕಂಪೆನಿಗಳನ್ನು ಸ್ಥಾಪಿಸಿದ್ದರು...

ಆತ ಇತಿಹಾಸ ಪಾಠ ಉರು ಹೊಡೆಯುವ ಹೊತ್ತಿ... ನೆಹರೂ ದೇಶದಿಂದ ಪೋರ್ಚುಗೀಸರನ್ನು ಓಡಿಸಿದ್ದರು...

ಈತನಿಗೆ ತುಪ್ಪಳ ಮೀಸೆ ಹುಟ್ಟುವ ಹೊತ್ತಿಗೆ ದೇಶದ... ಇಸ್ರೋ ಆರಂಭವಾಗಿತ್ತು.

ಸರಿಯಾಗಿ ಗಡ್ಡ ಮೀಸೆ ಮೂಡುವ ಹೊತ್ತಿಗೆ ದೇಶದ... ಶ್ವೇತ ಕ್ರಾಂತಿ ನಡೆದಿತ್ತು.

ಆತ ಚೆಡ್ಡಿ ಹಾಕೋ ಕಾಲದಲ್ಲಿ ದೇಶದಲ್ಲಿ ಔದ್ಯೋಗಿ... ಶಕೆ ಸುರುವಾಗಿತ್ತು.

ಆತ ಸಂಘದ ಬಾಗಿಲು ಸಂದಿಯ ಕಸ ಗುಡಿಸು... ವೇಳೆಯಲ್ಲಿ ಇಂದಿರಾ ಗಾಂಧಿ ಪಾಕಿಸ್ತಾನ ಎಂಬ ಪಾಕ್... ಮೈಸೂರ್ ಪಾಕ್‌ನಂತೆ ತುಂಡರಿಸಿ ಬಾಂಗ್ಲಾದ ಹುಟ್ಟಿ... ಕಾರಣರಾಗಿದ್ದರು. ಸೀಮೆಗಿಲ್ಲದ ಸರ್ಜಿಕಲ್ ಸ್ಟ್ರೈಕ್ ಎಸ... ಪಾಕ್‌ನ ಒಂದು ಲಕ್ಷ ಸೈನಿಕರು ಇಂದಿರಾ ಆಡಳಿತ... ಶರಣು ಶರಣು ಎಂದಿದ್ದರು.

ಆತ ಅರ್ಥ ಶಾಸ್ತ್ರ ಓದುವ (?!) ಹೊತ್ತಿಗೆ ದೇಶದಲ್ಲಿ... ಬ್ಯಾಂಕ್‌ಗಳ ರಾಷ್ಟ್ರೀ ಕರಣ ಪ್ರಕ್ರಿಯೆ ನಡೆದಿತ್ತು.

ಆತ ವಯಸ್ಕ ಎನಿಸುವ ಹೊತ್ತಿಗೆ ಇಂದಿರಾ ಚೀನಾ... ತೆಕ್ಕೆಯಲ್ಲಿರುವ ಸಿಕ್ಕಿಮ್ಮನ್ನು ಭಾರತಕ್ಕೆ ಸೇರಿಸಿದ್ದರು.

ಈತ ಸೈಕಲ್ ಕಲಿಯಲು ಹೋಗಿ ಮಂಡಿ ಗಾಯ... ಮಾಡಿಕೊಳ್ಳುವ ಹೊತ್ತಿಗೆ ದೇಶದಲ್ಲಿ ವಿಮಾನ... ಹೆಲಿಕಾಪ್ಟರ್‌ಗಳ ಉತ್ಪಾದನೆ ಆರಂಭಗೊಂಡಿತ್ತು.

ಆತ ಭಾಷಣ ಕಲೆ ಕಲಿಯುವ ಹೊತ್ತಿಗೆ ರಾಜೀವ್... ಗಾಂಧಿ ದೇಶಾದ್ಯಂತ ಪುರುಸೊತ್ತಿಲ್ಲದೇ ಅಲ್ಲಲ್ಲಿ ಟೀವಿ... ಟವರ್‌ಗಳನ್ನು ಉದ್ಘಾಟಿಸುವುದರಲ್ಲೇ ಮುಳುಗಿದ್ದರು...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು...

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕಿಷೋರ್‌ರಾಜ್ 2

ಮೆಂಡೊೋಜನ ಮ'ರೋಸ...

56ರ ವಯೋಮಾನದ ಬ್ರಿಲಿಯಂಟೆ ಮೆಂಡೊಜ 2005ರಿಂದ ...ಯವರೆಗೆ 16 ಕಥಾಚಿತ್ರಗಳನ್ನು ನಿರ್ದೇಶಿಸಿದ್ದಾನೆ. ಪ್ರತಿಭಾನ್ವಿತ ಸಿನಿಮಾ ...ರ್ದೇಶಕರು ಪ್ರದರ್ಶನದ ಆಯ್ಕೆಗಾಗಿ ಹಂಬಲಿಸುವ ಕ್ಯಾನ್ಸ್, ವೆನಿಸ್ ಹಾಗು ...ರ್ಲಿನ್ ಅಂತಾರಾಷ್ಟ್ರೀಯ ಸಿನಮ ಹಬ್ಬಗಳಲ್ಲಿ ಮೆಂಡೊಜನ ಸಿನಿಮಾಗಳು ...ತವಾಗಿ ಆಯ್ಕೆಯಾಗುತ್ತಿವೆ. 2009ರ ಕ್ಯಾನ್ಸ್ ಚಿತ್ರೋತ್ಸವದಲ್ಲಿ ತನ್ನ ...ತಾಯ್" ಸಿನಿಮಾ ನಿರ್ದೇಶನಕ್ಕೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ...ದಿರುವ ಮೆಂಡೊಜ, ಅದೇ ವರ್ಷ ಸಿನಿಮಾ ಕಲಾವಂತಿಕೆಯ ಮೇರು ...ಭೆಗಾಗಿ ಕ್ಯಾನ್ಸ್ ಚಿತ್ರೋತ್ಸವದಲ್ಲಿ ನೀಡಲಾಗುವ ಪಲ್ಮ್‌ಡೇಒರ್ ಪ್ರಶಸ್ತಿಗೂ ...ಮಾಂಕಿತನಾಗಿದ್ದ ಮತ್ತೂ ಆ ವರ್ಷ ಈ ಮೇರು ಪ್ರಶಸ್ತಿ ಕೆನ್ ಲೋಚ್‌ಗೆ ...ತು ಎನ್ನುವುದೇ ಮೆಂಡೋಜನ ಸಿನಿಮಾ ಕಲಾವಂತಿಗೆ ನಿದರ್ಶನವಾಗಿದೆ. ...16ರ ಕ್ಯಾನ್ಸ್ ಸಿನಿಮಾ ಹಬ್ಬದಲ್ಲಿ ಈ ಸಿನಿಮಾದ ನಾಯಕಿ ಜಾಕ್ವಲಿನ್ ...ೋಸ್ ಅತ್ಯುತ್ತಮ ನಟನೆಗೆ ಪ್ರಶಸ್ತಿ ಪಡೆದಿರುವಳು.


ಸಿನಿಮಾದ ಕಥಾ ಸಾರಾಂಶ

...ರೋಸ ಮತ್ತು ಅವಳ ಗಂಡ ನೆಸ್ಟರ್, ನಡು ವಯಸ್ಸು ದಾಟುತ್ತಿರುವ ...ಸಾರವಂದಿಗರು. ರಾಜಧಾನಿ ಮನೀಲದ ಕೆಳವರ್ಗದ ಮಂದಿ ಬದುಕುವ ...ಲೋನಿಯಲ್ಲಿ ಒಂದು 'ಸರೀ-ಸರೀ' ಇಟ್ಟುಕೊಂಡು ಎರಡು ಗಂಡು ಎರಡು ...ಣ್ಣು ಮಕ್ಕಳನ್ನು ಹೊಂದಿದ ಸಂಸಾರವನ್ನು ಸರಿದೂಗಿಸುತ್ತಿರುವವರು. 'ಸರೀ-ಸರೀ' ...ದರೆ ತಾವಿರುವ ಮನೆಯ ಒಂದು ಭಾಗದಲ್ಲೇ, ಕಾಲೋನಿಯವರಿಗೆ ...ಸಯುಕ್ತವಾದ ದಿನಸಿಗಳನ್ನು ಮಾರಾಟ ಮಾಡುವ ಪುಟ್ಟ ಅಂಗಡಿ-ಫಿಲಿಪೈನ್ಸಿನ ...ರಗಳ ಕೆಳ ವರ್ಗದ ಜನ ಬದುಕುವ ಕಾಲೋನಿಗಳಲ್ಲಿ ಇದ್ದು, ವಿಶಿಷ್ಟ ...ರು ಪಡೆದಿರುವ ದಿನಸಿ ಅಂಗಡಿ. ಇಂಥ ದಿನಸಿ ಅಂಗಡಿಗಳಲ್ಲಿ ಉದ್ರಿ ...ಪಾರವೇ ಜಾಸ್ತಿಯಲ್ಲವಾ. ಉದ್ರಿ ತೀರಿಸಲು ಜನ ಜೂಜು, ಮೀಟರ್ ... ವ್ಯವಹಾರ, ಕುರಿ (ಹಲವು ಜನ ಒಗ್ಗೂಡಿ, ತಿಂಗಳಿಗೆ ನಿಗದಿತ ಹಣ ...ಮಾ ಮಾಡಿ, ಸಂಕಷ್ಟದಲ್ಲಿದ್ದಾಗ, ಸರತಿಯಾಧಾರದಲ್ಲಿ ವಾರ್ಷಿಕ ಜಮಾವಣೆಯನ್ನು ...ಯಬಹುದಾದ ಅನಧಿಕೃತ ಹಣಕಾಸು ವ್ಯವಹಾರ)ಗಳಿಂದ ನಿಭಾಯಿಸುತ್ತಾ ...ುಕುವ ಸಮುದಾಯ. ನೆಸ್ಟರ್ ಅಂಥಾ ಜವಾಬ್ದಾರಿ ಇರುವ ಗಂಡಸಲ್ಲ; ...ು ಮಕ್ಕಳು ಕಾಲೋನಿಯ ಉಳಿದ ಮಕ್ಕಳಂತೆ ನಿರ್ದಿಷ್ಟ ಉದ್ಯೋಗವಿರದ ...ಗಾಮಿಗಳು; ಹಿರಿಯ ಮಗಳು ಕಾಲೇಜು ಕಟ್ಟೆ ಹತ್ತಿರುವ ಹುಡುಗಿ; ...ಸಳೇ ಸಂಸಾರ-ವ್ಯಾಪಾರಗಳನ್ನು ನಿಭಾಯಿಸುವ ಗಟ್ಟಿಗಾತಿ. ಇಂತಿರಲು ...ರೋಸ ಸರೀ-ಸರೀ'ಯ ವ್ಯಾಪಾರದಿಂದ ನಾಲ್ಕು ಮಕ್ಕಳ ಈ ಸಂಸಾರದ ...ಟ್ಟೆ ತುಂಬುವುದಿಲ್ಲವಾಗಿ, ರೋಸ ಹಾಗು ನೆಸ್ಟರ್ ಮಾದಕ ವಸ್ತು ವ್ಯಾಪಾರದ ...ಕಡೆಯ ಕೊಂಡಿಯಾಗಿ ಒಂದಷ್ಟು ಹೆಚ್ಚು ಹಣ ಗಳಿಸುವ ವ್ಯವಹಾರಕ್ಕೆ ...ದ್ದಾರೆ. ಹೀಗೆ ಜೀವನೋಪಾಯವಿರುವ ಜಗದಲ್ಲಿ ಒಬ್ಬರು ಮತ್ತೊಬ್ಬರಿಗೆ ...ಂಡಿ. ರೋಸಳ ಮಾದಕ ವಸ್ತು ವ್ಯವಹಾರದಲ್ಲಿ, ಅವರಿಗಿಂತ ಕೊಂಚ ...ಕೂಲಸ್ಥನಾದ ಜಾಮಿ ಎಂಬ ಯುವಕನಿದ್ದಾನೆ; ಇವರ ವ್ಯವಹಾರಗಳನ್ನು ... ಹಾಗು ರೋಸಳಿಗಿಂತಲೂ ಕೆಳಸ್ಥಿತಿಯಲ್ಲಿರುವ ಬಾಲಕನೊಬ್ಬನೂ ಇದ್ದಾನೆ. ... ನೆಸ್ಟರನ ಹುಟ್ಟುಹಬ್ಬವಿದ್ದು ಅದಕ್ಕೆ ತಯಾರಿ, ಯಾವ ನೆಂಟರನ್ನು ...ಟ್ಟಕ್ಕೆ ಕರೆಯಬೇಕು, ಯಾವ ಅವಮಾನಿಸುವ ನೆಂಟರನ್ನು ಕರೆಯಕೂಡದು ...ು ವಾಗ್ವಾದ ನಡೆಯುತ್ತಲೇ ರಾತ್ರಿಯೂಟದ ತಯಾರಿ ನಡೆದಿರುತ್ತದೆ; ... ಮನಿಲಾದ ಮಾದಕ ವಸ್ತು ನಿಗ್ರಹದಳದ ಪೋಲಿಸರು, 'ಮಾರೋಸ ... ಸರೀ' ಮೇಲೆ ದಾಳಿ ನಡೆಸಿ, ಇದ್ದ ಅಲ್ಪ ಮಾಲು, ಅಂಗಡಿಯಲ್ಲಾದ ... ಹಾಗು ಕಾಲೇಜು ಹುಡುಗಿಯ ಮೊಬೈಲನ್ನು ಜಪ್ತಿ ಮಾಡಿ, ರೋಸ ...ು ಲೆಸ್ಟರರನ್ನು ಬಂಧಿಸಿ ಠಾಣೆಗೆ ಕರೆದೊಯ್ಯುತ್ತದೆ. ಪೋಲಿಸರೂ ದಂಧೆ ...ಡುವವರೇ! ಒಂದು ಲಕ್ಷ ರೂಪಾಯಿ ಕೊಟ್ಟು ಕೇಸಿಂದ ಬಚಾವಾಗಿ, ... ಕಠಿಣ ಶಿಕ್ಷೆಗೆ ತಯಾರಾಗಿ ಎಂಬ ಡೀಲು ಮುಂದಿಡುತ್ತಾರೆ. ನಮ್ಮ ಬಳಿ ...ಷ್ಟು ಕಾಸಿಲ್ಲ ಮತ್ತು ಮಾಲು ನಮ್ಮದಲ್ಲ ಎಂದು ರೋಸ-ನೆಸ್ಟರ್ ...ಗರೆಯುತ್ತಾರೆ; ಪೋಲೀಸರೋ ಡೀಲು ಮಾಸ್ತರುಗಳು: ನಿಮಗೆ ಸರಬುರಾಜು ...ಡುವವನ ಯಾರು ಎಂಬ ಮಾಹಿತಿ ಕೊಡಿ ಎಂಬ ಡೀಲು ಇಡುವರು. ...ೇಸ ಜಾಮಿಯ ಗುರುತು ತಿಳಿಸಿ, ಹಿಡಿಸಿಕೊಡುವಳು; ಜಾಮಿಗೆ ಹಿರಿಯ ...ೊಲಿಸರ ಸಂಪರ್ಕವಿರುವುದನ್ನು ಕಂಡುಕೊಳ್ಳುವ ತಳ ಪೋಲಿಸರು, ಅವನನ್ನು ...ಸಿ, ಅವನ ಹೆಂಡತಿಯನ್ನು ಕರೆಸಿ 50,000 ಪೀಕಿಸುವವರು. ಮತ್ತೂ 50,000 ದಕ್ಕದೇ ಡೀಲು ಇತ್ಯರ್ಥವಾಗದು ಎಂದು ಪಟ್ಟು ಹಿಡಿಯುವರು. ಇದೀಗ, 50,000 ರೂಪಾಯಿಗಳನ್ನು ರೋಸಳ ಮೂರು ಪ್ರಾಯದ ಮಕ್ಕಳು ಹಾಗು ರೋಸ ಹೇಗೆ ಹೊಂದಿಸುತ್ತಾರೆ ಎನ್ನುವುದೂ ಮತ್ತೂ ಈ ಹೊಂದಿಸುವ ಕೆಲಸದಲ್ಲಿ ಅವರು ಎದುರಿಸುವ ತಳಮಳ, ಅವಮಾನಗಳು ಸಿನಿಮಾದ ಉಸಿರು.

ಈ ಸಿನಿಮಾ ಯಾಕೆ ಮುಖ್ಯ?

ಸತ್ಯಜಿತ್ ರಾಯ್, ಪೌರಾತ್ಯ ಹಾಗು ಪಾಶ್ಚಿಮಾತ್ಯ ಸಿನಿಮಾಗಳ ಮೂಲ ವ್ಯಾಕರಣ ವ್ಯತ್ಯಾಸಗಳ ಕುರಿತು 'ನಮ್ಮ ಸಿನಿಮಾಗಳು, ಅವರ ಸಿನಿಮಾಗಳು' ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲಿಅವರು ಪೌರಾತ್ಯ ಸಿನಿಮಾಗಳಲ್ಲಿ ಯಾಕೆ ಕಥನಕ್ಕೆ ಪ್ರಾಮುಖ್ಯತೆ ಇರುತ್ತದೆ ಎನ್ನುವುದನ್ನು ಅರ್ಥೈಸಲು ಯತ್ನಿಸಿದ್ದಾರೆ. ಪೌರಾತ್ಯ ದೇಶಗಳಲ್ಲಿ ಕಥನ ನಿರೂಪಣೆ ಇಲ್ಲದ ಕಲಾಪ್ರಕಾರಗಳನ್ನು ಜನರು ಸಾಮಾನ್ಯವಾಗಿ ಒಪ್ಪರು. ಚಿತ್ರಕಲೆಗೆ ಬಣ್ಣದ ಛಾಯೆಗಳೇ ಭಾಷೆಯಾಗಿದ್ದು, ಆ ಭಾಷೆಯಲ್ಲೇ ಚಿತ್ರಕಲೆ ಮಾತನಾಡಬೇಕು; ಆದರೆ, ಚಿತ್ರಕಲೆಗಳಲ್ಲಿ ನಮಗೆ ಈಗಾಗಲೇ ಪರಿಚಿತವಿರುವ ಕಥನಗಳ ಪ್ರತಿನಿಧಿಸುವ ವರ್ಣಛಾಯ ರೂಪಗಳು ಬಹುಪ್ರಿಯ-ಹೊಸ ಭಾವ ನಿರೂಪಣೆಗಳು ಜನಸಾಮಾನ್ಯರಿಗೆ ಅರ್ಥೈಸುವ ಸಹಜ ಸಹಜ ಶಿಕ್ಷಣ ವ್ಯವಸ್ಥೆ ಇರದಿರುವುದೂ ಒಂದು ಸ್ಥಾಪಿತ ರಾಜಕೀಯವೇ ಸರಿ! ಅಂತೆಯೇ, ಸಿನಿಮಾವೂ ದೃಶ್ಯ-ಧ್ವನಿಗಳ ಭಾಷೆಯ ಮಾಧ್ಯಮ-ದೃಶ್ಯ-ದನಿಗಳಲ್ಲಿ ಮಾತನಾಡುವಂತಹುದು: ಅಲ್ಲಿ ಕಥನದ ಅವಶ್ಯಕತೆ ಇಲ್ಲ ಎಂಬ ಅನೇಕ ಪ್ರಯೋಗಗಳು ಪಶ್ಚಿಮದಲ್ಲಿ ನಡೆಯುತ್ತಿವೆ. ಆದರೆ, ಪೂರ್ವದಲ್ಲಿ, ಸಾಮಾಜಿಕ ವ್ಯಾಖ್ಯಾನವೊಂದನ್ನು, ಆ ವಿದ್ಯಮಾನಗಳ ಪಾತ್ರಗಳಾದ ಜನಸಾಮಾನ್ಯರಿಗೆ ತಲುಪಿಸಲು ಸಾಧ್ಯವಿಲ್ಲವಾದರೆ, ಅಂಥ ಸಿನಿಮಾಗಳ ಉದ್ದೇಶವೇ ಈಡೇರದು. ಕೆಲವೇ ಕೆಲವು ಅಪವಾದಗಳನ್ನು ಹೊರತುಪಡಿಸಿ, ಪೌರಾತ್ಯ ಖ್ಯಾತ ಸಿನಿಮಾ ನಿರ್ದೇಶಕರು ದೃಶ್ಯ-ಧ್ವನಿ-ಕಥನ ಕೌಶಲಗಳ ಮೂಲಕ ತಮ್ಮ ಕಾಣ್ಕೆಯನ್ನು ಪ್ರೇಕ್ಷಕರಿಗೆ ಕಾಣಿಸುವ ಹೊಣೆ ಹೊತ್ತಿದ್ದಾರೆ- ಆ ಮೂಲಕ ವಿಶಿಷ್ಟ ಪೌರಾತ್ಯ ಸಿನಿಮಾ ವ್ಯಾಕರಣ ರೂಪಿಸಿದ್ದಾರೆ. 'ಮಾರೋಸ' ಅಂಥ ಪೌರಾಶ್ಯ ದೃಶ್ಯ-ಧ್ವನಿ-ಕಥನಾ ವ್ಯಾಕರಣಕ್ಕೆ ಉತ್ತಮ ಉದಾಹರಣೆಯಾದ ಸಿನಿಮಾ.

ಮೆಂಡೊಜಗೆ ಇಲ್ಲಿ, ಮನಿಲಾದ ಕೆಳಸ್ತರದ ಜನರ ಬದುಕು ಎಷ್ಟು ಅಭದ್ರವಾದುದು; ಅದಕ್ಕಿರುವ ಸಾಮಾಜಿಕ-ರಾಜಕೀಯ ಹಿನ್ನೆಲೆ ಏನು ಎನ್ನುವುದನ್ನು ಮೆಲುವಾಗಿ ಹೇಳುವ ಉದ್ದೇಶವಿದೆ. ಅದಕ್ಕೆ ಬೇಕಿರುವ ಕಥನಾಮಾರ್ಗದ ಪ್ರಾಮುಖ್ಯತೆಯ ಅರಿವೂ ಅವನಿಗಿದೆ. ಮನಿಲಾದ ಕೆಳವರ್ಗದ



ಮ'ರೋಸ (2016)
ನಿರ್ದೇಶನ: ಬ್ರಿಲಿಯಂಟೆ ಮೆಂಡೊಜ
ದೇಶ: ಫಿಲಿಪೈನ್ಸ್



ಕಾಲೋನಿಯಲ್ಲಿ, ಸಕಲವೂ ಸಾಮಾನ್ಯವಾಗಿರುವಂತೆ ಕಾಣುವ ದೈನಂದಿನ ಬದುಕಿನ ಚಿತ್ರಣವನ್ನು ಈ ಸಿನಿಮಾ ದೃಶ್ಯ-ಧ್ವನಿಗಳ ದೃಶ್ಯಗಳಲ್ಲಿ ಕಟ್ಟಿಕೊಡುತ್ತದೆ. ಪ್ರತಿ ಬಿಡಿ ದೃಶ್ಯವೂ ಕಥನವನ್ನು ಕಟ್ಟುವ ಒಂದು ಕೊಂಡಿಯಾಗಿದೆ. ಇಂಥ ಬದುಕಿನಲ್ಲಿ ಪ್ರಭುತ್ವದ ಅಂಗವೊಂದು ಪ್ರವೇಶಿಸಿ ಇಡೀ ಸಂಸಾರದ ಸಾಮಾನ್ಯ ನೆಮ್ಮದಿಯನ್ನು ಅಲ್ಲೋಲಕಲ್ಲೋಲಗೊಳಿಸುವ ಒಂದು ಸಹಜ ವಿದ್ಯಮಾನದ ವಸ್ತುವನ್ನು ನಿರ್ದೇಶಕ ಎತ್ತಿಕೊಂಡಿದ್ದಾನೆ; ಆ ಮೂಲಕ ಈ ರೀತಿ ಬದುಕುತ್ತಿರುವ ಜನರ ಬದುಕಿನ ಭದ್ರತೆ ಎಷ್ಟು ತೆಳುವಾದದ್ದು ಎಂದು ಸಿನಿಮಾ ನಿರೂಪಿಸುತ್ತದೆ. ಸಾಮಾಜಿಕ-ರಾಜಕೀಯ ಭ್ರಷ್ಟಾಚಾರ ಕೊನೆಗೂ ಕೆಳವರ್ಗದವರನ್ನೇ ಅಪರಾಧಿಯಾಗಿಸುವ, ಪ್ರಭುತ್ವದಿಂದ ಹೆಚ್ಚೇನನ್ನೂ ಬೇಡದೆಯೂ ಅವರು ಪ್ರಭುತ್ವದ ಅಪರಾಧಗಳನ್ನು ತಮ್ಮ ಬದುಕಿನ ಸ್ಥಿತಿಯ ಅಪರಾಧವಾಗಿಸಿಕೊಳ್ಳ ಬೇಕಾದಂಥ ವಾತಾವರಣದ ಕ್ರೌರ್ಯವನ್ನು ಸಂಸಾರವಂದಿಗರ ಕಥನದ ಮೂಲಕ ನಿರೂಪಿಸುವುದು ಅಂದುಕೊಂಡಷ್ಟು ಸುಲಭವಲ್ಲ; ಕಾಣುವುದಕ್ಕೆ ಸುಲಭವೆನಿಸುವುದರ ಹಿಂದೆ ಪಡಬೇಕಾದ ಕಲಾಕಷ್ಟಗಳಿಗೆ ಈ ಸಿನಿಮಾವನ್ನು ಉದಾಹರಿಸಬಹುದು. ಲಂಕೇಶರ 'ಅಕ್ಕ' ಕಾದಂಬರಿ ಕೆಳವರ್ಗದ ಸಾಮಾನ್ಯವೆನಿಸುವ ಒಂದು ಬದುಕಿನ ತೆಳು ಪದರವನ್ನು ಸೀಳುವ ಅದೃಶ್ಯ ವ್ಯವಸ್ಥೆಯ ಚಾಕುವಿನ ಹರಿತವನ್ನು ನಮಗೆ ಕಾಣಿಸುತ್ತದೆಯೋ, ಅದೇ ಗಹನತೆಯಲ್ಲಿ 'ಮಾರೋಸ' ಕಂಡರಿಸುತ್ತದೆ.

ಮೇಲೆ ಸಿನಿಮಾದ ಕಥಾಸಾರಾಂಶ ಹೇಳಿರುವೆ. ಆದರೆ ಈ ಸಾರಾಂಶವನ್ನು ದೃಶ್ಯ-ಧ್ವನಿಯಲ್ಲಿ ಹೆಣೆಯುವುದರ ನಾಜೂಕಿಗೆ ನಾವು ಈ ಸಿನಿಮಾ ನೋಡಬೇಕು. ನಾಜೂಕಿಗೆ ಸಿನಿಮಾದ ಎರಡು ದೃಶ್ಯಗಳ ಉದಾಹರಣೆ ಕೊಡುವೆ: ಸಿನಿಮಾ ಶುರುವಾಗುವುದು, ರೋಸ, ಮನಿಲಾದ ಪ್ರತಿಷ್ಠಿತ ಸೂಪರ್ ಮಾರ್ಕೆಟನಿಂದ ತನ್ನ ಸರೀ ಸರೀಗೆ ದಿನಸಿಗಳನ್ನು ಕೊಂಡು, ಕೌಂಟರಿನಲ್ಲಿ ಹಣ ಪಾವತಿಸುವ ದೃಶ್ಯದಿಂದ. ಆ ದೃಶ್ಯದಲ್ಲಿ, ಚಿಲ್ಲರೆ ಇಲ್ಲ ಎಂದು ಅದರ ಮೌಲ್ಯದ ಚಾಕಲೇಟು ನೀಡುವಾಗ ರೋಸ, 'ನಂಗೇ ಬೇಡ್ವೇ ಬೇಡ! ಇಷ್ಟು ದೊಡ್ಡ ಅಂಗಡಿ ಇಟ್ಟುಕೊಂಡು ಚಿಲ್ಲರೆ ವ್ಯವಸ್ಥೆ ಇರದಿದ್ರೇ ಏನು ನಿಮ್ದು ವ್ಯಾಪಾರ' ಅಂತ ಜಗಳಕ್ಕೆ ನಿಲ್ಲುತ್ತಾಳೆ. ಅವಳು ಕೆಳವರ್ಗದ ಗಟ್ಟಿಗಾತಿತನವನ್ನು ಆ ದೃಶ್ಯಕಟ್ಟಿ ಕೊಡುತ್ತದೆ. ರೋಸಳ ಮೂರು ಮಕ್ಕಳು ಅವರು ಕೊಡಬೇಕಾದ ಲಂಚದ 46,000 ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಮತ್ತೂ 4,000 ಕೊಡದೆ ಕೇಸು ಖತಂ ಆಗೋದಿಲ್ಲ ಅಂತ ಪೋಲಿಸರು ಪಟ್ಟು ಹಿಡಿದು, ರೋಸಳನ್ನು ಸಂಪಾದಿಸಿಕೊಂಡು ಬರುವುದಕ್ಕೆ ಬಿಡುಗಡೆಗೊಳಿಸಿದ್ದಾರೆ. ಠಾಣೆಯಿಂದ ತನ್ನ ಕಾಲೋನಿಗೆ ನಡೆದೇ ಬರುವಾಗ ಕಾಲೋನಿಯ ಪಡ್ಡೆಗಳು ಅವಳ ಮಾದಕದ್ರವ್ಯ ವ್ಯವಹಾರವನ್ನು ಗೇಲಿ ಮಾಡುವ ಮಾತನಾಡಿದಾಗಲೂ ಆಕೆ ಲಕ್ಷಿಸದೇ ನಡೆಯುತ್ತಾಳೆ. ರೋಸ, ತನ್ನ ಕಾಲೋನಿಯ ಗಿರವಿ ಅಂಗಡಿಯವನೊಬ್ಬನ ಹತ್ತಿರ ಹೋಗಿ, ತನ್ನ ಮಗಳ ಮೊಬೈಲನ್ನು 4000ಕ್ಕೆ ಗಿರವಿ ಇಡುವಾಗ ಮಾಡುವ ಚೌಕಾಶಿಯಲ್ಲೂ ಅವಳು ಗಟ್ಟಿಗಾತಿಯೇ. ನಾಲ್ಕು ಸಾವಿರಕ್ಕೆ ಗಿರವಿ ಇಟ್ಟು, ಠಾಣೆಗೆ ಹೋಗಲು ಬಸ್‌ಚಾರ್ಜ್ ಬೇಡುವಾಗ ಅವಳ ಧ್ವನಿ ಅರ್ಧ ದೈನ್ಯವಾಗುತ್ತದೆ. ಗಿರವಿದಾರ ಅಸಡೆಯಿಂದ ಚಿಲ್ಲರೆ ಕೊಡುವಾಗಲೂ ಅವಳು ಅವಮಾನಿತಳಾಗುವುದಿಲ್ಲ. ಸಿನಿಮಾದ ಕಡೆಯ ದೃಶ್ಯ: ರೋಸ ಎರಡು ದಿನಗಳಿಂದ ಏನೂ ತಿಂದಿರುವುದಿಲ್ಲ; ಬಸ್‌ಚಾರ್ಜಿಗೆ ಅಂತ ಗಿರವಿದಾರನ ಬಳಿ ಬೇಡಿ ಪಡೆದ ಚಿಲ್ಲರೆಯಲ್ಲಿ ಒಂದಿಷ್ಟು ಆಹಾರಕೊಂಡು ಗಬ ಗಬ ಅಂತ ತಿನ್ನುತ್ತಿರುವಾಗ, ಹಿನ್ನೆಲೆಯಲ್ಲಿ ಅವಳ ಮಾದಕದ್ರವ್ಯ ವ್ಯವಹಾರದ ಬಗ್ಗೆ ಪಡ್ಡೆಗಳ ಕುಹಕ ಧ್ವನಿಗಳು ಕೇಳಿದಾಗ ಅವಳ ಮುಖದಲ್ಲಿ ವ್ಯಕ್ತವಾಗುವ ಅಸಹಾಯಕತೆಯಲ್ಲಿ ಸಿನಿಮಾ ಕೊನೆಯಾಗುತ್ತದೆ.

ಜಾಕ್ವಲಿನ್ ರೋಸ್‌ಗೆ ಕ್ಯಾನ್ಸ್‌ನಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ದೊರಕಿದ್ದು ಆಕಸ್ಮಿಕವಲ್ಲ. ಮೊದಲ ಹಾಗು ಕೊನೆಯ ದೃಶ್ಯಗಳ ಅವಳ ಮುಖಭಾವವಷ್ಟೇ ಸಿನಿಮಾದ ಇಡಿ ವಿಷಾದ ಕಾವ್ಯದ ಭಾವಗಳನ್ನು ಹಿಡಿದಿಡುತ್ತದೆ. ■

...ತ ಗಾಳಿಯಲ್ಲಿ ಲಾಠಿ ಬೀಸುವ ಹೊತ್ತಲ್ಲಿ ದೇಶದಲ್ಲಿ ...ಟರ್ ಹಾಗು ಮಾಹಿತಿ ತಂತ್ರಜ್ಞಾನದ ಹೊಸ ಆವರಿಸತೊಡಗಿತ್ತು.

...ತ ಗುಜರಾತಿನಲ್ಲಿ ವಾಘೇಲ ಮತ್ತು ಕೇಶುಬಾಯಿ ...ಂದಿಗೆ ತಂತ್ರದಲ್ಲಿ ತೊಡಗಿದ್ದಾಗ ದೇಶದಲ್ಲಿ ಮನ...ಹನ್ ಸಿಂಗ್ ಆರ್ಥಿಕ ಉದಾರೀಕರಣ ಆರಂಭಿಸಿದ್ದರು. ...ತ ಪ್ರಧಾನಿಯ ಕುರ್ಚಿಯತ್ತ ಕಣ್ಣು ಹಾಯಿಸುವ ...ವೇ ಭಾರತ ಗರಿಷ್ಠ ವಿದೇಶಿ ಮುದ್ರಾಕೋಶವುಳ್ಳ ...ಸ ಹತ್ತು ರಾಷ್ಟ್ರಗಳಲ್ಲಿ ಸ್ಥಾನ ಗಿಟ್ಟಿಸಿಕೊಂಡಾಗಿತ್ತು. ...ಇದರ ಹೊರತಾಗಿಯೂ ಚಂದ್ರಯಾನ, ಮಂಗಳಯಾನ, ...ೋ, ಮೋನೋ ರೈಲು, ಜಿಎಸ್‌ಎಲ್‌ವಿ, ಸುಧಾರಿತ ...ಸ್ಯ ನೌಕೆಗಳು, ಕ್ಷಿಪಣಿಗಳು, ಇನ್ನೂ ಬೇಕಷ್ಟು ಲೆಕ್ಕವಿಲ್ಲದ ...ನೆಗಳೆಲ್ಲ ಯಾವ ಬಡಾಯಿಗಳಿಲ್ಲದೇ ದೇಶದಲ್ಲಿ ...ಶರವಾಗಿ ನಡೆದಿದ್ದವು."

...ಆದರೆ ಸೈನಿಕರು ಪ್ರಾಣ ಒತ್ತೆಯಿಟ್ಟು ಮಾಡಿದ ...ಕಲ್ ಸ್ಟ್ರೈಕ್‌ಅನ್ನು ಈತ ತನ್ನ ರಾಜಕೀಯ ಬಿಲ್ಡಪ್ಪಿಗಾಗಿ ...ಕೊಂಡು ದೇಶಪ್ರೇಮದ ನಾಟಕವಾಡುತ್ತಾ ಪ್ರಧಾನ ..., ಫಕೀರ, ಇನ್ನೆಂಥದ್ದೋ ಹೆಸರುವೇಷಗಳನ್ನು ಹಾಕುತ್ತಾ ...ರದ ಓಷಾಚ್ಛಾದಿತ ಗುಡಿಗಳಲ್ಲಿ ಹಸರೆ ಕಾಯುವ ಸೈನಿಕರಿಗೆ ತಿನ್ನಲೂ ಸರಿಯಾದ ವ್ಯವಸ್ಥೆಯನ್ನೂ ಮಾಡದೇ ಅವರು ದೂರಿದರೆ ದೂರಿದಾತನನ್ನೇ ಶಿಕ್ಷಿಸ ಹೋಗುವ ಈ ಭಂಡ ವ್ಯಕ್ತಿಗಳ ಅಚ್ಛೇದಿನ್ ಬಂದರೆಷ್ಟು ಬಿಟ್ಟರೆಷ್ಟು.

- ಶಂಕರ್, ಉಡುಪಿ

ಧರ್ಮಸ್ಥಳದಲ್ಲಿ ಮೋದಿಯಿಂದ ಪ್ರಮಾಣ ಮಾಡಿಸಲಿ ಶೋಭಕ್ಕ

ಕಳೆದವಾರ ಶೋಭಾ ಕರಂದ್ಲಾಜೆ ಉಡುಪಿಯ ಟೋಲ್-ಗೇಟ್ ವಿವಾದದಲ್ಲಿ ಆಸಕ್ತಿ ವಹಿಸುತ್ತಿಲ್ಲ ಮತ್ತು ತನ್ನ ಕ್ಷೇತ್ರದಲ್ಲಿ ಒಂದು ಪೈಸೆಯ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ಅಲ್ಲಿಯ ಜನತೆ ಆರೋಪಿಸಿದಾಗ ಅವರು ವಾಟ್ಸಪ್ ಗ್ರೂಪಿನಲ್ಲಿ "ಧರ್ಮಸ್ಥಳ ಮಂಜುನಾಥ ನಿಮ್ಮ ಆರೋಪಕ್ಕೆ ಉತ್ತರಿಸುತ್ತಾನೆ. ಅಣ್ಣಪ್ಪ ಸ್ವಾಮಿ ಎಲ್ಲವನ್ನೂ ನೋಡಿಕೊಳ್ಳುತ್ತಾನೆ" ಎಂದು ಕಮೆಂಟ್ ಮಾಡಿ ಉಡುಪಿಯ ಜನತೆಗೆ ದೇವರ ಆಣೆಪ್ರಮಾಣದ ಭಯ ಹುಟ್ಟಿಸಲು ಪ್ರಯತ್ನಿಸಿದ್ದು ಈಗ ಜಿಲ್ಲೆಯಲ್ಲಿ ದೊಡ್ಡ ಸುದ್ದಿಯಾಗಿದೆ. ಅವರು "ಮಂಜುನಾಥ ಉತ್ತರಿಸುತ್ತಾನೆ, ಅಣ್ಣಪ್ಪ ನೋಡಿಕೊಳ್ಳುತ್ತಾನೆ" ಎಂದು ಬರೆದಿರುವುದು ನೋಡಿದರೆ ಮಂಜುನಾಥಸ್ವಾಮಿ ಅವರ ಕಚೇರಿಯ ಗುಮಾಸ್ತ ಹಾಗೂ ಅಣ್ಣಪ್ಪಸ್ವಾಮಿ ಅವರ ಬೌನ್ಸರ್ ಆಗಿರುವಂತೆ ಕಾಣುತ್ತಿದೆ.



ಒಬ್ಬ ಸಂಸದರಾಗಿ ಜವಾಬ್ದಾರಿಯುತ ಸ್ಥಾನದಲ್ಲಿರು ವವರು ಅಡಿಗಡಿಗೆ ದೇವರ ಭಯ ಹುಟ್ಟಿಸಿ ತನ್ನ ಮುಖ ಉಳಿಸಿಕೊಳ್ಳಲು ಜನರನ್ನು ಧಾರ್ಮಿಕ ಹಾಗೂ ಭಾವನಾತ್ಮಕ ಬ್ಲ್ಯಾಕ್-ಮೇಲ್ ಮಾಡುವುದು ಸರಿಯೇ ಎಂದು ಧರ್ಮದ ಬ್ರೋಕರುಗಳ ಪಕ್ಷವಾದ ಬಿಜೆಪಿಯವರು ಸ್ವಲ್ಪ ಜಿಜ್ಞಾಸೆ ಮಾಡುವುದು ಒಳಿತು. ಹಿಂದೊಮ್ಮೆ ಮೂರು ಬೇರೆ ಬೇರೆ ಸಂದರ್ಭದಲ್ಲಿ ಕುಮಾರಸ್ವಾಮಿ, ವೀರಪ್ಪ ಮೊಯ್ಲಿ, ಸಿದ್ದರಾಮಯ್ಯ ಇವರೆಲ್ಲಾ ಸೋಬಕ್ಕನಿಂದ ಧರ್ಮಸ್ಥಳದಲ್ಲಿ ಆಣೆ ಪ್ರಮಾಣದ ದಾಳಿಗೊಳಗಾಗಿದ್ದರು. ಯಡಿಯೂರಪ್ಪನವರೇ ನಿಮ್ಮ ಪಕ್ಷದ ಶೋಭಕ್ಕನ ಈ ಆಣೆಪ್ರಮಾಣದ ಚಟವನ್ನು ಸ್ವಲ್ಪ ನಿಲ್ಲಿಸಲು ಹೇಳಿ ಪ್ಲೀಜ್. ಯಾಕೆಂದರೆ ಆ ದೇವರು ಸಹ ಇರುವುದು ಕೇವಲ ಧನಿಕ ಮತ್ತು ಪ್ರಬಲರ ರಕ್ಷಣೆಗಾಗಿ ಮಾತ್ರ ಎಂದು ಸೌಜನ್ಯ ಅತ್ಯಾಚಾರ ಪ್ರಕರಣದಲ್ಲಿ ಸಾಬೀತಾಗಿ ಬಿಟ್ಟಿದೆ.

ಧರ್ಮಸ್ಥಳದ ಮಂಜುನಾಥ ಮತ್ತು ಅಣ್ಣಪ್ಪಸ್ವಾಮಿ ಇಬ್ಬರೂ ಸೌಜನ್ಯಳ ಕೊಲೆಗಾರರನ್ನು ರಕ್ಷಿಸುವುದರಲ್ಲಿಯೇ ಬಿಜಿ ಆಗಿದ್ದಾರಂತೆ. ಮೊದಲು ಈ ಮಂಜುನಾಥಸ್ವಾಮಿ ಸೌಜನ್ಯ ಕೊಲೆಗಾರರನ್ನು ಪೊಲೀಸರಿಂದ ಹಾಗೂ ಸಿಐಡಿಯಿಂದ ರಕ್ಷಿಸಿದನು. ಈಗ ಸಿಬಿಐನಿಂದ ಆ ದುಷ್ಟರನ್ನು ರಕ್ಷಿಸುವ ಕಾರ್ಯದಲ್ಲಿ ಮಂಜುನಾಥ ಮಗ್ನವಾಗಿದ್ದಾನೆ. ದಯವಿಟ್ಟು ಆ ಮಂಜುನಾಥನನ್ನು ಡಿಸ್ಟರ್ಬ್ ಮಾಡಬೇಡಿ ಪ್ಲೀಜ್.

ಶೋಭಕ್ಕ ನೀವು ಮೋದಿಯ ಹೆಸರಿನ ಬಲದಿಂದ ಗೆದ್ದಿರುವುದರಿಂದ ಸಾಧ್ಯವಾದರೆ ಮೋದಿಯನ್ನು ಧರ್ಮಸ್ಥಳಕ್ಕೆ ಕರೆತಂದು ಅವರು ನಕಲಿ ಡಿಗ್ರಿ ಹೊಂದಿಲ್ಲ, ಗೋಧ್ರೋತ್ತರ ನರಮೇಧದಲ್ಲಿ ಅವರ ಪಾತ್ರವಿಲ್ಲ, ಇಶ್ರತ್ ಜಹಾನ್ ನಕಲಿ ಎನ್‌ಕೌಂಟರ್‌ನಲ್ಲಿ ಅವರ ಹಾತವಿಲ್ಲ, ತನ್ನದೇ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಹರೇನ್ ಪಾಂಡ್ಯಾ ಅವರ ಸುಪಾರಿ ಹತ್ಯೆಯಲ್ಲಿ ತಮ್ಮ ಹಾತವಿಲ್ಲ, ತುಳಸಿರಾಮ್ ಪ್ರಜಾಪತಿ ಮತ್ತು ಸೊಹ್ರಾಬುದ್ದೀನ್ ಶೇಖ್ ದಂಪತಿಗಳ ನಕಲಿ ಎನ್‌ಕೌಂಟರ್‌ನಲ್ಲಿ ಅಮಿತ್ ಷಾ ಹಾತವಿಲ್ಲ ಎಂದು ದಯವಿಟ್ಟು ಮೋದಿಯವರಿಂದ ಆಣೆ-ಪ್ರಮಾಣ ಮಾಡಿಸಿ ಸಾಕು!

- ಹರೀಶ್ ಎಂ. ಕೈ. ಉಡುಪಿ

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 08-03-2017 RNI No. KARKAN2005/

ಮುಕುಂದನ ಮಾನ ಹೆಬ್ಬುಲಿಯಲ್ಲಿ ಬಂತು



ಉಪೇಂದ್ರ ಮತ್ತು ಸುದೀಪ್ ಕಾಂಬಿನೇಷನ್‌ನ 'ಮುಕುಂದ ಮುರಾರಿ' ಸಿನಿಮಾ ಬಂದಾಗ ಸ್ವತಃ ಸುದೀಪ್ ಅಭಿಮಾನಿಗಳು ಕಿಚ್ಚನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಇಂತಹ ಚಿತ್ರಗಳಲ್ಲಿ ಯಾಕೆ ನಟಿಸಿದ್ದೀರಿ ಎಂದು ನೇರವಾಗಿಯೇ ಕೇಳಿದ್ದರು. ಬಾಕ್ಸ್ ಆಫೀಸ್‌ನಲ್ಲಿ ಈ ಸಿನಿಮಾ ನೆಲಕಚ್ಚಿದ್ದರಿಂದ ಎದುರಾಳಿ ಚಿತ್ರವಾಗಿದ್ದ ಯಶ್ ನಟನೆಯ 'ಸಂತು' ಚಿತ್ರಕ್ಕೆ ಸುಲಭ ದಾರಿಯಾಗಿತ್ತು. ಅಲ್ಲದೇ ಯಶ್ ನೇರವಾಗಿಯೇ 'ಮುಕುಂದ'ನ ಜತೆ ಜಿದ್ದಿಗೆ ಬಿದ್ದಿದ್ದರಿಂದ ಒಂದು ರೀತಿಯಲ್ಲಿ 'ಮುಕುಂದ'ನಿಗೆ ಅವಮಾನ ಎನ್ನುವಂತೆ ಚಿತ್ರಿಸಲಾಗಿತ್ತು. ಎಲ್ಲ ನೋವನ್ನು ಹಾಗೆಯೇ ಹಿಡಿದಿಟ್ಟುಕೊಂಡಿದ್ದರು ಸುದೀಪ್. ಈಗ 'ಹೆಬ್ಬುಲಿ' ಚಿತ್ರದ ಮೂಲಕ ಎಲ್ಲ ಬಾಕಿಯನ್ನೂ ಚುಕ್ತಾ ಮಾಡುತ್ತಿದ್ದಾರೆ.

ಕೃಷ್ಣ ನಿರ್ದೇಶನದಲ್ಲಿ ಮೂಡಿಬಂದಿರುವ 'ಹೆಬ್ಬುಲಿ' ಸಿನಿಮಾ ಗುರುವಾರವೇ ರಿಲೀಸ್ ಆಗುತ್ತಿದೆ. ಕರ್ನಾಟಕದ ಬಹುತೇಕ ಚಿತ್ರಮಂದಿರಗಳಲ್ಲಿ 'ಹೆಬ್ಬುಲಿ' ಅಬ್ಬರಿಸಲಿದೆ. ಅಲ್ಲದೇ ಕೆಲವೇ ವಾರಗಳಲ್ಲಿ ತೆಲುಗು ಮತ್ತು ತಮಿಳಿನಲ್ಲೂ ಸಿನಿಮಾ ಬಿಡುಗಡೆಗೆ ತಯಾರಿ ಕೂಡ ಮಾಡಿಕೊಳ್ಳಲಾಗುತ್ತಿದೆ. ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಇದ್ದ ಕಾರಣ, ಸುದೀಪ್ ಮುನ್ನುಗ್ಗುತ್ತಿದ್ದಾರೆ. ವೈರಿಗಳಿಗಂತೂ ನಡುಕ ಹುಟ್ಟಿಸಿದ್ದಾರೆ.



ನೀರ್‌ದೋಸೆ ಎಫೆಕ್ಟ್

ಒಂದೊಂದು ಬಾರಿ ಹೀಗೆ ಆಗುತ್ತದೆ. ಯಾವ ಸಿನಿಮಾ ಯಾರಿಗೆ ಬ್ರೇಕ್ ನೀಡುತ್ತದೆ ಅಂತ ಹೇಳುವುದು ಕಷ್ಟ. 'ಕಿರಿಕ್ ಪಾರ್ಟಿ' ಚಿತ್ರವು ಆ ಸಿನಿಮಾದ ನಾಯಕಿ ರಶ್ಮಿಕಾಗೆ ಐದಾರು ಸಿನಿಮಾಗಳನ್ನು ತಂದು ಗುಡ್ಡೆಹಾಕಿದೆ. ಆದರೆ, 'ನೀರ್‌ದೋಸೆ' ಚಿತ್ರ ಮಾತ್ರ ಹರಿಪ್ರಿಯಾರನ್ನು ಖಾಲಿ ಕೂರಿಸಿದೆ.

'ನೀರ್‌ದೋಸೆ' ಸಿನಿಮಾದಲ್ಲಿ ಹರಿಪ್ರಿಯಾ ಬೋಲ್ಡ್ ಪಾತ್ರವನ್ನು ನಿರ್ವಹಿಸಿದ್ದರು. ಈ ಪಾತ್ರದ ಬಗ್ಗೆ ಅವರಿಗೆ ಮೆಚ್ಚುಗೆ ಕೂಡ ವ್ಯಕ್ತವಾಯಿತು. ಇಲ್ಲಿಂದ ಹರಿಪ್ರಿಯಾ ಲಕ್ ಖುಲಾಯಿಸುತ್ತದೆ ಎಂದೇ ನಂಬಲಾಗಿತ್ತು. ಆದರೆ ಅದು ಉಲ್ಟಾ ಆಗಿದೆ. ಸದ್ಯಕ್ಕೆ ಹರಿಪ್ರಿಯಾ ಮನೆಯಲ್ಲಿ ಖಾಲಿ ಕೂತಿದ್ದಾರೆ. ಕಾರಣ 'ನೀರ್‌ದೋಸೆ' ತರಹದ ಪಾತ್ರಗಳೇ ಅವರನ್ನು ಹುಡುಕಿಕೊಂಡು ಬರುತ್ತಿವೆಯಂತೆ. "ಇನ್ನು ಮುಂದೆ ಅಂತಹ ಪಾತ್ರಗಳಲ್ಲಿ ನಾನು ನಟಿಸಲ್ಲ" ಅನ್ನುವುದು ಹರಿಪ್ರಿಯಾ ನಿರ್ಧಾರ. 'ನೀರ್‌ದೋಸೆ' ಚಿತ್ರ ರಿಲೀಸ್ ಆಗಿ ಆರೇಳು ತಿಂಗಳುಗಳೇ ಆಗಿವೆ. ಅಲ್ಲಿಂದ ಹತ್ತಾರು ಕತೆಗಳನ್ನು ಕೇಳಿದ್ದಾರಂತೆ ಹರಿಪ್ರಿಯಾ. ಎಲ್ಲವೂ ಒಂದೇ ರೀತಿಯ ಪಾತ್ರಗಳಂತೆ. ಹಾಗಾಗಿ ಮನೆಯಲ್ಲಿ ಕೂತರೂ ಪರವಾಗಿಲ್ಲ, ಕಾಲ್ ಗರ್ಲ್ ಪಾತ್ರವನ್ನು ಮಾತ್ರ ಮಾಡಲಾರೆ ಅಂತಿದ್ದಾರೆ ಹರಿಪ್ರಿಯಾ.




ವಿಷ್ಣು ಸಮಾಧಿ ಅನುಮಾನ



ಕನ್ನಡದ ಹೆಸರಾಂತ ನಟ ವಿಷ್ಣುವರ್ಧನ್ ಸಮಾಧಿ ಮೈಸೂರಿನಲ್ಲೂ ನಿರ್ಮಾಣ ಆಗುವುದು ಅನುಮಾನ ಎಂಬ ಸುದ್ದಿ ಬಂದಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಬೆಂಗಳೂರಿನಲ್ಲೇ ಅದು ತಲೆಯೆತ್ತಬೇಕಿತ್ತು. ಅದು ಅಭಿಮಾನಿಗಳ ಬಹುದೊಡ್ಡ ಕನಸಾಗಿತ್ತು. ಆದರೆ, ಕಾನೂನಿನ ತೊಡಕಿನಿಂದಾಗಿ ಮೈಸೂರಿಗೆ ಸ್ಥಳಾಂತರಿಸಲು ಭಾರತಿ ವಿಷ್ಣುವರ್ಧನ್ ಮುಂದಾದರು. ವಿಷ್ಣು ಕುಟುಂಬದ ಬೇಡಿಕೆಯಂತೆ, ಮೈಸೂರಿನಲ್ಲಿ ಜಮೀನು ನೀಡಲಾಯಿತು. ಸರ್ಕಾರ ಕೋಟಿ ಹಣವನ್ನೂ ಬಿಡುಗಡೆ ಮಾಡಿತು. ಇನ್ನೇನು ಸ್ಮಾರಕ ನಿರ್ಮಾಣ ಕಾರ್ಯ ಶುರು ಮಾಡಬೇಕೆನ್ನುವಷ್ಟರಲ್ಲಿ, ಜಮೀನು ಮಾಲೀಕ ತಕರಾರು ತೆಗೆ... ಕೃಷಿ ಮಾಡುತ್ತಿದ್ದ ಭೂಮಿಯನ್ನು ಸರಕಾರ ಒತ್ತಾಯ ಮಾಡಿ ಕಿತ್ತುಕೊಂ... ಎಂದು ಕೋರ್ಟ್ ಮೊರೆ ಹೋಗಿದ್ದಾರೆ. ಕೋರ್ಟ್ ಕೂಡ ರೈತನ ನೋ... ಆಲಿಸಿ, ಸದ್ಯಕ್ಕೆ ತಡೆಯಾಜ್ಞೆ ಕೂಡ ನೀಡಿದೆ. ಅಲ್ಲಿಗೆ ವಿಷ್ಣು ಸ್ಮಾರಕ ನಿರ್ಮಾ... ಮತ್ತೊಮ್ಮೆ ಅಡೆತಡೆ ಎದುರಾಗಿದೆ. ರೈತನ ವಿರುದ್ಧ ಫೈಟ್ ಮಾಡಿ, ಜಮೀ... ಕೊಡಿಸುತ್ತೇವೆ ಅನ್ನುತ್ತಿದೆ ಜಿಲ್ಲಾಡಳಿತ. ಆದರೆ, ರೈತನ ಜಮೀ... ಕಿತ್ತುಕೊಳ್ಳುವುದನ್ನು ವಿಷ್ಣು ಸಹಿಸಲಾರರು ಅಲ್ಲವಾ?

ಉಪೇಂದ್ರ ಮಾರುಕಟ್ಟೆ ಕುಸಿಯಿತಾ?



ಶೂಟಿಂಗ್‌ಗೂ ಮುನ್ನ ಭಾರೀ ಸದ್ದು ಮಾಡಿದ್ದ ಎರಡು ಚಿತ್ರಗಳು ಉಪೇಂದ್ರ ಕೈಯಿಂದ ಜಾರಿವೆ. ಹೆಸರಾಂತ ನಿರ್ದೇಶಕರೇ ಈ ಚಿತ್ರಗಳನ್ನು ಅನೌನ್ಸ್ ಮಾಡಿದ್ದರಿಂದ ಚಿತ್ರಗಳ ಬಗ್ಗೆ ಸಾಕಷ್ಟು ಕುತೂಹಲ ಕೂಡ ಮೂಡಿತ್ತು. ಏಕಾಏಕಿಯಾಗಿ ಆ ಚಿತ್ರಗಳು ನಿಂತಿರುವ ಸುದ್ದಿ ಸಿಕ್ಕಿದೆ. ಅಲ್ಲದೇ ಉಪೇಂದ್ರ ಅವರ ಚಿತ್ರಗಳ ಸಂಖ್ಯೆಯಲ್ಲಿ ಏರುಪೇರಾಗಿದೆ.

'ಸಂಗೊಳ್ಳಿ ರಾಯಣ್ಣ' ಖ್ಯಾತಿಯ ನಾಗಣ್ಣ 'ಕನ್ನೇಶ್ವರ' ಹೆಸರಿನಲ್ಲಿ ಸಿನಿಮಾ ಮಾಡಲು ಹೊರಟಿದ್ದರು. ಈ ಕುರಿತು ಸ್ವತಃ ಉಪೇಂದ್ರ ಕೂಡ ಮಾತಾಡಿದ್ದರು. ಅಲ್ಲದೇ, 'ಆಟೋ ರಾಜ' ಚಿತ್ರ ಖ್ಯಾತಿಯ ನಿರ್ದೇಶಕರು 'ಡಾ.ಮೋದಿ' ಎಂಬ ಹೆಸರಿನಲ್ಲಿ ಸಿನಿಮಾ ಮಾಡಲು ತಯಾರಿ ಮಾಡಿಕೊಂಡಿದ್ದರು. ಈ ಸಿನಿಮಾದ ಫಸ್ಟ್‌ಲುಕ್ ಕೂಡ ರಿಲೀಸ್ ಆಗಿತ್ತು. ಈಗ ಎರಡೂ ಚಿತ್ರಗಳು ನಿಂತಿವೆ. ಕಾರಣ ಮಾತ್ರ ನಿಗೂಢವಾಗಿದೆ. ಗಾಂಧಿನಗರದಲ್ಲಿ ಹರಿದಾಡುತ್ತಿರುವ ಸುದ್ದಿಯ ಪ್ರಕಾರ, ಉಪೇಂದ್ರ ಮಾರುಕಟ್ಟೆ ಕುಸಿದಿದೆಯಂತೆ. ಭಾರೀ ಬಂಡವಾಳ ಹೂಡಲು ನಿರ್ಮಾಪಕರು ಹಿಂದೇಟು ಹಾಕುತ್ತಿದ್ದಾರಂತೆ. ಹಾಗಾಗಿ ಸಿನಿಮಾಗಳನ್ನು ನಿಲ್ಲಿಸಲಾಗಿದೆಯಂತೆ. ಇದನ್ನು ಉಪೇಂದ್ರ-ಆಪ್ತರು ಒಪ್ಪುವುದಿಲ್ಲ. ಎರಡು ಚಿತ್ರಗಳು ನಿಂತಿರಬಹುದು. ಇನ್ನೂ ಎರಡು ಚಿತ್ರಗಳು ಸಿಗಲಿವೆ. ಸಿನಿಮಾಗಳಿಗೆ ಯಾವುದೇ ಕೊರತೆ ಇಲ್ಲ ಅಂತಾರೆ. ಈಗಾಗಲೇ ಮಂಜು ಮಂಡವ್ಯಗೆ ಉಪ್ಪಿ ಕಾಲ್‌ಶೀಟ್ ಕೊಟ್ಟಿದ್ದಾರೆ. ಐವತ್ತನೇ ಸಿನಿಮಾವನ್ನು ತಾವೇ ನಿರ್ದೇಶನ ಮಾಡುವುದಾಗಿ ಉಪ್ಪಿ ಹೇಳಿದ್ದಾರೆ. ಈ ಎರಡೂ ಚಿತ್ರಗಳಿಗೂ ಉಪ್ಪಿ ಪತ್ನಿ ಪ್ರಿಯಾಂಕ ನಿರ್ಮಾಪಕರು ಎನ್ನಲಾಗುತ್ತಿದೆ.

ವೆಂಕಟ್ ದಾರೀಲಿ ಪ್ರಥಮ್





ಹತ್ತಾರು ವರ್ಷ ಸಿನಿಮಾ ರಂಗದಲ್ಲಿ ಸರ್ಕಸ್ ಮಾಡಿದ್ದ ಹುಚ್ಚ ವೆಂಕಟ್ ತನ್ನ ಹುಚ್ಚಾಟದಿಂದಾಗಿಯೇ ಫೇಮಸ್ ಆದವರು. ಅದರಲ್ಲೂ ಬಿಗ್‌ಬಾಸ್ ಮನೆಯಲ್ಲಿ ಗಾಯಕ ರವಿಗೆ ಕಪಾಳಮೋಕ್ಷ ಮಾಡಿದ ನಂತರ ವೆಂಕಟ್ ಡಿಮಾಂಡ್ ಜಾಸ್ತಿ ಆಯಿತು.

ವೆಂಕಟ್ ಅದೆಷ್ಟು ಫೇಮಸ್ ಆದರು ಎಂದರೆ ಅವರು ಐದಾರು ಚಿತ್ರಗಳಿಗೆ ನಾಯಕರಾಗಿ ಆಯ್ಕೆಯಾದರು. ಬಿಡುವಿಲ್ಲದೇ ಚಾನೆಲ್‌ಗಳ ಚರ್ಚೆಗೆ ಹೋದರು. ಯೋಗರಾಜ್ ಭಟ್‌ರಂಥ ಹೆಸರಾಂತ ನಿರ್ದೇಶಕರು ತಮ್ಮ ಸಿನಿಮಾದ ಪ್ರಚಾರಕ್ಕೆ ವೆಂಕಟ್‌ನನ್ನು ಬಳಸಿಕೊಂಡರು. ಒಂದು ಹಂತದಲ್ಲಿ ಗಾಯಕರೂ ಆದರು ಈ ವೆಂಕಟ್. ಆದರೀಗ ಅವರ ಜೊತೆ ಯಾರೂ ಇಲ್ಲ. ವೆಂಕಟ್ ಈಗೇನಿದ್ದರೂ ಏಕಾಂಗಿ. ಅನೌನ್ಸ್ ಆದ ಒಂದೂ ಸಿನಿಮಾ ಸೆಟ್ಟೇರಲಿಲ್ಲ. ಕೊಟ್ಟಿದ್ದ ಅಡ್ವಾನ್ಸ್ ದುಡ್ಡು ಕರಗೋಕೆ ಒಂದು ವಾರ ಸಾಕಿತ್ತು. ಅಲ್ಲಿಗೆ ವೆಂಕಟ್ ಚಾಪ್ಟರ್ ಕ್ಲೋಸ್ ಆಯಿತು.

ಈಗ ಇದೇ ರೀತಿಯ ಮತ್ತೊಂದು ಕತೆ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಅದು ಬಿಗ್‌ಬಾಸ್ ವಿನ್ನರ್ ಪ್ರಥಮ್‌ನದ್ದು. ಮೂರ್‍ನಾಲ್ಕು ಚಿತ್ರಗಳಲ್ಲಿ ನಟಿಸುವಂತೆ ಇವ... ಕೇಳಲಾಗಿದೆ. ಅಡ್ವಾನ್ಸ್ ಕೂಡ ಕೊಡಲಾಗಿದೆಯಂತೆ. ಹಾಗಂತ ಅವನೇ ಹೇಳಿಕೊಂಡು ತಿರುಗುತ್ತಿದ್ದಾನೆ. ... ಮಾತು ಸುಳ್ಳಾಗದಿರಲಿ. ಈತನ ಸಿನಿಮಾನಾದರೂ ಸೆಟ್ಟೇ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com